ಪ್ರಚೋದನೆ

ಲಂಕೇಶ್

25 ಮಾರ್ಚ್ 2015 ಪುಟ 20 ರೂ. 15/-



ಬಸವಣ್ಣ ಮತ್ತು ಮಾಣಿಕ್ ಸರ್ಕಾರ




ಕನ್ನಡ ಕುವರಿಯ ಸಿದ್ಧಿ ದುರಂತ

H1N1 ಸುತ್ತ ಬರೀ ಸುಳ್ಳುಗಳು




ಕಂಬಾಲಪಲ್ಲಿ ದುರಂತ

15 ವರ್ಷ ಆದರೂ ನ್ಯಾಯ ಸಿಕ್ಕಿಲ್ಲ



...ತದಡಿ ಬಂದರು-ಪರಿಸರವ್ಯಾಧಿಗಳ ತಕರಾರು

ಎಚ್1 ಎನ್1 ಸುತ್ತ ನಡೆಯುತ್ತಿರುವುದೆಲ್ಲಾ ಸುಳ್ಳು, ಸುಳ್ಳು, ಸುಳ್ಳು



ಇಂತಹ ಅಂಕಣದಲ್ಲಿ ಹೆಚ್ಚೆಚ್ಚು ಸ್ವಂತ ಸಂಗತಿಗಳನ್ನು ಹೇಳಿಕೊಳ್ಳುವುದು ಮುಜುಗರದ ವಿಷಯ. ಆದರೆ, ಇದು ಸ್ವಂತದ್ದೇ ಅನುಭವವಾದ್ದರಿಂದ ಹೇಳಿಬಿಡುತ್ತೇನೆ. ಕಳೆದ ತಿಂಗಳ ಮಧ್ಯಭಾಗದಲ್ಲಿ ಮಂಗಳೂರಿಗೆ ಹೋಗಬೇಕಾಯಿತು. ಕರಾವಳಿಯ ಕೋಮು ಧ್ರುವೀಕರಣದ ಕರಾಳಮುಖವನ್ನು ನೋಡುತ್ತಾ, ನೋಡುತ್ತಾ ಬೇಸರವಾಗುತ್ತಿತ್ತು, ಆ ದಿನ ಸಂಜೆಯ ಹೊತ್ತಿಗೆ ಸುಸ್ತಾಗಲು ಶುರುವಾಯಿತು. ಮಾರನೆಯ ದಿನ ಬೆಳಗ್ಗೆ ಏಳುವಷ್ಟರಲ್ಲಿ ಮೈ ಬಿಸಿಯಾಗಿ ಬಿಟ್ಟಿತ್ತು, ಸಂಜೆಗೆ ನೆಗಡಿಯೂ ಶುರುವಾಯಿತು. ಇಂತಹ ಜ್ವರ ನನಗೆ ಹೊಸದೇನಾಗಿರಲಿಲ್ಲ, ಸರಾಸರಿ ತಿಂಗಳಿಗೆ ಒಮ್ಮೆಯಾದರೂ ಜ್ವರ ಬರುವ ನನ್ನನ್ನು ಗೆಳೆಯರು 'ಫಾರಂ ಕೋಳಿ' ಎಂದು ಕರೆದು ಸುಮಾರು 15 ವರ್ಷಗಳಾಗಿವೆ. ಆದರೆ ಈ ಸಾರಿಯ ಜ್ವರ ವಿಪರೀತವಾಗಿತ್ತು.


ಮಂಗಳೂರು ರೈಲ್ವೇ ನಿಲ್ದಾಣದಲ್ಲಿ ಇನ್ನೇನು ಹೊರಡುತ್ತಿದ್ದ ರೈಲನ್ನು ಹತ್ತಲು ಓಡಿದವನು ರೈಲು ಏರಿದಾಗ ತಲೆ ಚಕ್ಕರ್ ಬರುತ್ತಿತ್ತು, ತಕ್ಷಣ ಬ್ಯಾಗ್‌ನಲ್ಲಿದ್ದ ಮಾತ್ರೆ ನುಂಗಿ ಮಲಗಿದವನು ಬೆಳಗ್ಗೆ ಎದ್ದಾಗ ಮಂಡ್ಯ ನಿಲ್ದಾಣ ಬಂದಾಗಿತ್ತು. ಅವತ್ತು ಪಾಂಡವಪುರದಲ್ಲಿ ಒಂದು ಅಧ್ಯಯನ ಶಿಬಿರಕ್ಕೆ ಹೋಗಲೇಬೇಕಿತ್ತು. ಕೇವಲ ಪ್ಯಾರಾಸಿಟಮಾಲ್ ನನ್ನನ್ನು ಸಿದ್ಧಗೊಳಿಸುವ ಸಾಧ್ಯತೆಯೇ ಇಲ್ಲದಷ್ಟು ಜ್ವರ ಏರಿಬಿಟ್ಟಿತ್ತು. ಅನಿವಾರ್ಯವಾಗಿ ಒಂದು ಸ್ಟೀರಾಯ್ಡ್ ಮಾತ್ರೆಯನ್ನೂ ಪ್ಯಾರಾಸಿಟಮಾಲ್‌ನೊಂದಿಗೆ ನುಂಗಿ ಪಾಂಡವಪುರಕ್ಕೆ ಹೋಗಿ, ಶಿಬಿರದಲ್ಲಿ ಮಾತು ಮುಗಿಸಿದೆ.

ಅಲ್ಲಿಂದ ಆಚೆಗೆ ಒಟ್ಟು 8 ದಿನಗಳ ಕಾಲ ಈ ಜ್ವರ ನನ್ನನ್ನು ಬಿಟ್ಟೂಬಿಡದೇ ಕಾಡಿತು. ಜ್ವರದ ಜೊತೆಗೆ ಇನ್‌ಫ್ಲುಯೆಂಜಾದ ಎಲ್ಲಾ ಲಕ್ಷಣಗಳು. ನೆಗಡಿ-ವಿಪರೀತ ನೆಗಡಿ, ತಲೆನೋವು, ತಲೆ ಭಾರ, ಸುಸ್ತು, ಗಂಟಲು ಕೆರೆತ ಇತ್ಯಾದಿ. ಇದು ಎಚ್1 ಎನ್1 ಅಲ್ಲದೇ ಇನ್ನೇನಾಗಿರಲು ಸಾಧ್ಯ? ನಾಲ್ಕನೆಯ ದಿನದ ಹೊತ್ತಿಗೆ ಸಂದೇಹ ಶುರುವಾಯಿತು. ನಿಜ ಏನೆಂದರೆ, ದಿನವಹಿ ವೈದ್ಯಕೀಯ ಪ್ರಾಕ್ಟೀಸನ್ನು ಮಾಡುತ್ತಿಲ್ಲದ ನಾನು ಅದರ ಕುರಿತು ಏನೂ ಓದಿರಲಿಲ್ಲ, ಹಾಗಾಗಿ ಸ್ವಲ್ಪ ಆತಂಕವೂ ಶುರುವಾಯಿತು. ಆದರೂ ಇಂತಹ 'ಟಿವಿ ಚಾನೆಲ್ ಬ್ರೇಕಿಂಗ್ ನ್ಯೂಸ್ ಕಾಯಿಲೆ'ಗಳ ಬಗ್ಗೆ ಅನುಮಾನ ಇದ್ದುದರಿಂದ ಆಸ್ಪತ್ರೆಗೆ ಓಡಿ ಹೋಗಬೇಕೆಂದೇನೂ ಅನ್ನಿಸಲಿಲ್ಲ. ಆಗ ವಿಜಯ ಕರ್ನಾಟಕದಲ್ಲಿ ಶ್ರೀನಿವಾಸ ಕಕ್ಕಿಲ್ಲಾಯರು ಬರೆದ 'ಆರೋಗ್ಯ ಸಚಿವರಿಗೆ ಫ್ಲೂ ವೈರಸ್‌ನ ಪತ್ರ'ವನ್ನು ಓದಿದೆ. ಅದು ನನ್ನ ಅನುಮಾನವನ್ನು ಖಾತರಿಗೊಳಿಸಿತು. ಎಚ್1 ಎನ್1 ಮಾಧ್ಯಮಗಳು ಸೃಷ್ಟಿಸುತ್ತಿರುವ ಅವಾಂತರವೇ ಆಗಿರುತ್ತದೆ ಎಂಬುದು ನನ್ನ ಸಾಮಾನ್ಯ ಜ್ಞಾನದ ಕಾರಣದಿಂದಲೂ, ಕಕ್ಕಿಲ್ಲಾಯರ ಬಗ್ಗೆ ಇರುವ ಗೌರವದ ಕಾರಣದಿಂದಲೂ ಸ್ಪಷ್ಟವಾಯಿತು.

ಆದರೆ, ಅದಕ್ಕಿಂತಲೂ ಗಾಬರಿಗೊಳಿಸುವ ಸಂಗತಿಯು 'ಪತ್ರಿಕೆ'ಯ ಬಳಗದ ಬೆಂಗಳೂರು ಮೆಡಿಕಲ್ ಕಾಲೇಜಿನ ಅಧ್ಯಾಪಕರಾದ ಡಾ.ಎಂ.ಬಿ.ರಾಮಮೂರ್ತಿಯವರ ಮೂಲಕ ತಿಳಿಯಿತು. ಎಚ್1ಎನ್1 ಕೇವಲ ಒಂದು ಬ್ರೇಕಿಂಗ್ ನ್ಯೂಸ್ ಚಟದ ಕಾರಣಕ್ಕೆ ಆತಂಕ ಮೂಡಿಸುತ್ತಿರುವ ರೋಗವಲ್ಲ; ಬದಲಿಗೆ ಔಷಧಿ ಕಂಪನಿ ಹಾಗೂ ಮಾಧ್ಯಮದವರ ಜಂಟಿ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ 'ಭಯೋತ್ಪಾದನೆ'ಯೇ ಆಗಿದೆ.

ಈ ಅಂತಿಮ ಅಭಿಪ್ರಾಯಕ್ಕೆ ಬಂದಿದ್ದು ತಡವಾಗಿ. ಅಷ್ಟರ ಮಧ್ಯೆ ಮಂಡ್ಯದ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಚೇರಿಗೆ ಹೋಗಬೇಕಾಯಿತು. ಒಂದು ವೇಳೆ ನನಗೆ ಬಂದಿರುವುದು ಎಚ್1ಎನ್1ನ್ನೇ ಆಗಿದ್ದು, ನನ್ನ ದೇಹ ಪ್ರಕೃತಿಯ ಸೂಕ್ಷ್ಮತೆಯ ಕಾರಣದಿಂದ ಅದು ಬಿಗಡಾಯಿಸಿ, ನಾನೇನಾದರೂ ನೆಗೆದುಕೊಂಡು ಬಿಟ್ಟರೆ ಪರಿಣಾಮ ಕೆಟ್ಟದಾಗಿರುತ್ತಿತ್ತು. 'ಈ ನನ್ ಮಗ್ನಿಗೆ ಹೇಳೋಷ್ಟೆಲ್ಲಾ ಹೇಳಿದ್ವು. ಹೋಗಿ ತೋರಿಸ್ಕೊಳ್ಳೋ, ಎಂಥಾ ಜ್ವರಾನೋ ಏನೋ ಅಂತ. ಕೇಳ್ಲಿಲ್ಲ, ತನ್ನದೇ ಸರಿ, ಅಂತ ಆಡಿದ. ಅಷ್ಟೆಲ್ಲಾ ಟಿವಿ-ಪೇಪರ್ನಲ್ಲೆಲ್ಲಾ ಬಂದು, ಎಂಥಾ ಕೆಟ್ಟ ಖಾಯ್ಲೆ ಅಂತ ತೋರ್ಸಿದ್ ಮೇಲೂ ಇವ್ನ ಹೋಗ್ಲಿಲ್ಲ, ಇವ್ನೂ, ಇವ್ನ ಸಂಘಟನೇನೂ ಸೇರಿ ಹಾಳ್ ಮಾಡ್ಬಿಟ್ರು' ಹೀಗೆಲ್ಲಾ ದೂರಗಾಮಿ ಪರಿಣಾಮಗಳು ಉಂಟಾಗುವ ಸಾಧ್ಯತೆ ಇರ್ತಿತ್ತು.

ಇಷ್ಟು ಹೊತ್ತಿಗೆ ಈ ಎಚ್1ಎನ್1 ಹಾಗೂ ಅದಕ್ಕೆ ನೀಡಲಾಗುತ್ತಿರುವ ಟ್ಯಾಮಿಫ್ಲೂ ಎಂಬ ಮಾತ್ರೆಯ ಬಗ್ಗೆ ಸ್ವಲ್ಪ ಓದಿಕೊಂಡೆ. ಮಂಡ್ಯ ಡಿಎಚ್‌ಓ ಕಚೇರಿಯಲ್ಲಿ ವೈದ್ಯರು ನನ್ನನ್ನು ಪರೀಕ್ಷಿಸಿದರು. ಎಲ್ಲಾ ಪ್ರಶ್ನೆಗಳನ್ನು ಕೇಳಿದರು. ನಾವು ಈ ರೋಗದ ಲಕ್ಷಣದ ಇರುವವರನ್ನು ಮೂರು ಬಗೆಯಲ್ಲಿ ವಿಭಾಗಿಸುತ್ತೇವೆ. ಎ ಗುಂಪು. ರೋಗಲಕ್ಷಣಗಳು ಸ್ವಲ್ಪ ಪ್ರಮಾಣದಲ್ಲಿ ಇರುವವರು - ಈ ಥರಕ್ಕೀಥರ. ಅವರಿಗೆ ಮಾಮೂಲಿ ಜ್ವರ-ನೆಗಡಿಯ ಮಾತ್ರೆ ಮತ್ತು ಸಲಹೆಗಳು. ಬಿ ಗುಂಪು - ರೋಗಲಕ್ಷಣಗಳು ಮಧ್ಯಮ ಪ್ರಮಾಣದಲ್ಲಿ ಇರುವವರು - ಈ



ಥರಕ್ಕೀಥರ. ಅವರಿಗೆ ಜ್ವರ ನೆಗಡಿಯ ಚಿಕಿತ್ಸೆಗಳ ಜೊತೆಗೆ ವಿಟಮಿನ್ ಸಿ ಮತ್ತು ಟ್ಯಾಮಿಫ್ಲೂ ಮಾತ್ರೆ. ಸಿ ಗುಂಪು - ರೋಗ ಉಲ್ಬಣಗೊಂಡು ಆಸ್ಪತ್ರೆಗೆ ಸೇರುವ ಪರಿಸ್ಥಿತಿ ಮತ್ತು ದೇಹಸ್ಥಿತಿ ಕುಸಿಯುತ್ತಿರುವ ಸ್ಥಿತಿ. ಅಂತಹವರಿಗೆ ಮಾತ್ರ ಎಚ್1ಎನ್1 ಇದೆಯಾ ಇಲ್ಲವಾ ಅಂತ ಗಂಟಲಿಂದ ಸ್ವಾಬ್ ತೆಗೆದು ಪರೀಕ್ಷೆಗೆ ಕಳಿಸುವುದು. ಗಮನಿಸಿ: ಎಚ್1ಎನ್1 ಪರೀಕ್ಷೆ ಮಾಡುವುದು ಸಿ ಗುಂಪಿನವರಿಗೆ ಮಾತ್ರ. ಇದನ್ನು ಈಗಾಗಲೇ ಕಕ್ಕಿಲ್ಲಾಯರು ಬರೆದಿದ್ದರು. ರೋಗಲಕ್ಷಣಗಳ ಆಧಾರದ ಮೇಲೆ ಡಿಎಚ್‌ಓ ಕಚೇರಿಯ ತಜ್ಞ ವೈದ್ಯರು ನನ್ನನ್ನು ಬಿ ಗುಂಪಿಗೆ ಸೇರಿಸಿದರು.

ಅಂದಮೇಲೆ ನನಗೆ ಇತರ ಚಿಕಿತ್ಸೆಗಳ ಜೊತೆಗೆ ಆಂಟಿಬಯಾಟಿಕ್ ತೆಗೆದುಕೊಳ್ಳಲು ಹೇಳಿದರು. 'ಈಗಾಗಲೇ ಇಂಥದ್ದನ್ನು ತೆಗೆದುಕೊಳ್ತಿದೀನಿ'. 'ಸರಿ ಮುಂದುವರೆಸಿ, ಜೊತೆಗೆ ವಿಟಮಿನ್ ಸಿ ಹಾಗೂ ಟ್ಯಾಮಿಫ್ಲೂ ಮಾತ್ರೆ ತಗೊಳ್ಳಿ'. ತಮ್ಮ ಸಹಾಯಕರನ್ನು ಕರೆದು ಸರ್ಕಾರೀ ಬೊಕ್ಕಸದಿಂದ ಖರ್ಚು ಮಾಡಿ ಖರೀದಿಸಲಾಗಿದ್ದ ಟ್ಯಾಮಿಫ್ಲೂ ಮಾತ್ರೆಯ ಪ್ಯಾಕ್‌ಅನ್ನು ಕೊಟ್ಟರು.

ಮನೆಗೆ ಬಂದೆ. ಪ್ಯಾಕ್ ತೆರೆದೆ. ಸಿಪ್ಲಾ ಕಂಪೆನಿಯ ಉತ್ಪನ್ನ. ಬೆಲೆ 457 ರೂ.ಗಳು. ಅದರಲ್ಲಿ ಅಡಕವಾಗಿದ್ದ ಔಷಧಿಯ ಕುರಿತ ಮಾಹಿತಿಯಿರುವ ಚೀಟಿ ತೆಗೆದೆ. ರೋಗಲಕ್ಷಣಗಳು ಆರಂಭವಾದ ಮೊದಲೆರಡು ದಿನಗಳ ಒಳಗೆ ಅದನ್ನು ಆರಂಭಿಸಬೇಕು ಎಂದಿದೆ. ನನಗಾಗಲೇ 7ನೇ ದಿನದ ಜ್ವರ! ಹಾಗಾದರೆ ಇದರಿಂದ ಏನು ಪ್ರಯೋಜನ? ಮಾತ್ರೆ ತೆಗೆದುಕೊಳ್ಳಲಿಲ್ಲ, ಮರುದಿನ ಗುಣವಾಯಿತು.

ಇಷ್ಟೇ ಆಗಿದ್ದರೆ ಇದನ್ನು ಅಂಕಣದಲ್ಲಿ ಬರೆಯುವ ಅಗತ್ಯವಿರಲಿಲ್ಲ. ಈ ಭಯೋತ್ಪಾದನೆಯು ಆಕಸ್ಮಿಕವಾಗಿ ನಡೆಯುತ್ತಿಲ್ಲ; ಅಜ್ಞಾನದಿಂದ ನಡೆಯುತ್ತಿಲ್ಲ, ಇದು ರಾಷ್ ಮತ್ತು ಸಿಪ್ಲಾ ಕಂಪೆನಿಗಳಿಗೆ ಕೋಟಿಗಟ್ಟಲೆ ಲಾಭ ತರುವ ಸಲುವಾಗಿ ಮತ್ತು ಟಿವಿ ಚಾನೆಲ್‌ಗಳ ಟಿಆರ್‌ಪಿ ದಾಹಕ್ಕಾಗಿ ನಡೆಯುತ್ತಿದೆ. ಇದು ದುಷ್ಟತನ, ಕ್ರೌರ್ಯ ಮತ್ತು ಭಯೋತ್ಪಾದನೆ. ಒಂದು ವೇಳೆ ಆರೋಗ್ಯ ಸಚಿವರು 'ಎಚ್1 ಎನ್1 ಬಗ್ಗೆ ಗಾಬರಿಯಾಗುವಂಥದ್ದೇನೂ ಇಲ್ಲ, ಟ್ಯಾಮಿಫ್ಲೂನಿಂದ ಪ್ರಯೋಜನವೂ ಇಲ್ಲ, ಸುಮ್ಮನೆ ತಲೆ ಕೆಡಿಸಿಕೊಳ್ಳಬೇಡಿ' ಎಂದು ಹೇಳಿಕೆ ಇತ್ತರೆ ಏನಾಗುತ್ತದೆ? ಮರುಕ್ಷಣದಿಂದ ಮಾಧ್ಯಮಗಳು, ಆರೋಗ್ಯ ಸಚಿವರ ವಿರೋಧಿಗಳೂ, ಸಾಮಾಜಿಕ ಜಾಲತಾಣದ ಕ್ರಿಯಾಶೀಲರೂ ಸೇರಿಕೊಂಡು ಅವರು ರಾಜೀನಾಮೆ ನೀಡುವವರೆಗೂ ಬಿಡದೇ ಹುಯಿಲೆಬ್ಬಿಸುತ್ತಾರೆ. ಹಾಗಾಗಿ ರೋಗಮುಕ್ತರಾದ ನನ್ನಂಥವರಾದರೂ ಇದನ್ನು ಹೇಳಲೇಬೇಕಿದೆ. ಎಚ್1ಎನ್1 ಸುತ್ತ ನಡೆಯುತ್ತಿರುವ ಭಯೋತ್ಪಾದನೆ ಸುಳ್ಳು, ಸುಳ್ಳು, ಸುಳ್ಳು.

ಎಲ್ಲಾ ಫ್ಲೂ ಜ್ವರದಂತೆ ಎಚ್1ಎನ್1 ಸಹ ಒಂದು ಸಾಧಾರಣ ಜ್ವರ. ಆಗಾಗ್ಗೆ ಗುಣತಂತು (genes)ಗಳಲ್ಲಿ ಆಗುವ ವ್ಯತ್ಯಾಸ (mutation)ದ ಕಾರಣದಿಂದ ಫ್ಲೂ ವೈರಸ್‌ಗಳು ಗುಣ ಬದಲಿಸಿಕೊಂಡು ದಾಳಿಯಿಡುತ್ತವೆ. ಆಗ ಇಡೀ ಜನಸಮುದಾಯವೇ ಮಲಗಿಬಿಡುವಂತೆ ಅದು ವ್ಯಾಪಿಸುತ್ತದೆ. ಜ್ವರ ಗುಣವಾಗುತ್ತಾ, ಆಗುತ್ತಾ ಇಡೀ ಸಮುದಾಯ ಅದಕ್ಕೆ ಪ್ರತಿರೋಧ ಬೆಳೆಸಿಕೊಳ್ಳುತ್ತದೆ. ಒಂದಷ್ಟು ಕಾಲದನಂತರ ಮತ್ತೆ ಫ್ಲೂ ಜ್ವರ ಬರುತ್ತದೆ. ನನ್ನಂಥವರಿಗೆ ತಪ್ಪದೇ ಬರುತ್ತದೆ. ನಿಮ್ಮಂಥ ಕೆಲವರಿಗೆ ಬರುವುದಿಲ್ಲ ಅಷ್ಟೇ. ಬಂದಾಗ, ಮೊದಲೇ ವಿವಿಧ ಕಾರಣಗಳಿಂದ ವಿಪರೀತ ದುರ್ಬಲರಾಗಿರುವವರು ನ್ಯುಮೋನಿಯಾ, ಸೈನುಸೈಟಿಸ್, ಕಿವಿ ಸೋಂಕು ಇತ್ಯಾದಿಗಳಿಂದ ಬಳಲುತ್ತಾರೆ. ಈ ರೀತಿಯ ಬೆಳವಣಿಗೆಗಳು ಇತರ ಸಾಮಾನ್ಯ ಫ್ಲೂಗಳಲ್ಲೂ ಆಗುತ್ತವೆ. ತತ್ಪರಿಣಾಮವಾಗಿ ಕೆಲವರು ಸತ್ತೂ ಹೋಗಬಹುದು.

ಆದರೆ ಸತ್ತಿರುವವರು ಎಚ್1ಎನ್1ನಿಂದಲೇ ಸತ್ತಿದ್ದಾರೆ ಎಂದು ಪತ್ತೆ ಹಚ್ಚಿದಾಗ, ಅದಕ್ಕೆ ಮಾತ್ರೆ ಕಂಡುಹಿಡಿದಿದ್ದೇವೆನ್ನುವ ಕಂಪೆನಿ ತನ್ನ ಲಾಭಕ್ಕೆ ಬಳಸಿಕೊಳ್ಳಲು ನಿರ್ಧರಿಸಿದರೆ ಏನೆಲ್ಲಾ ಅವಾಂತರ ಆಗಬಹುದೋ ಅದಾಗುತ್ತಿದೆ. ಎಚ್1ಎನ್1ಗಿಂತಲೂ ಸಾಮಾನ್ಯ ಬೇಧಿಯಿಂದ ಇನ್ನೂ ಹೆಚ್ಚು ಜನ ಸಾಯುತ್ತಿದ್ದಾರೆ. ಅದರ ಬಗ್ಗೆ ಇದೇ ರೀತಿಯ ಹುಯಿಲೇಳುತ್ತಿದೆಯಾ? ಅಪೌಷ್ಟಿಕತೆ, ರಕ್ತಹೀನತೆಗಳಿಂದ ಇನ್ನೂ ಹೆಚ್ಚು ಜನರು ಬಳಲುತ್ತಿದ್ದಾರೆ. ಅದರ ಬಗ್ಗೆಯೂ ಇವರ‍್ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ.

ಟ್ಯಾಮಿಫ್ಲೂ ಅಥವಾ ಒಸೆಲ್ಟಾಮಿವಿರ್ ಎಂಬ ಈ ಮಾತ್ರೆಯು ಎಚ್1ಎನ್1 ವೈರಸ್ಸನ್ನು ಸಂಪೂರ್ಣವಾಗಿ ಕೊಲ್ಲುವುದಿಲ್ಲ, ಅದರ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಅಷ್ಟೇ. ಈ ರೀತಿ ಕಡಿಮೆ ಮಾಡಿದ್ದರಿಂದ ಜ್ವರ 'ತನ್ನಂತೆ ತಾನೇ ಗುಣವಾಗುವುದಕ್ಕಿಂತ ಬೇಗನೇ ಹೋಗುತ್ತದೆ', 'ನ್ಯುಮೋನಿಯಾ, ಕಿವಿ ಸೋಂಕು ಇತ್ಯಾದಿ ಆಗುವ ಪ್ರಮಾಣ ಕಡಿಮೆಯಾಗುತ್ತದೆ', 'ಸಾವಿನ ಪ್ರಮಾಣ ಕಡಿಮೆಯಾಗುತ್ತದೆ' ಎಂಬ ಕೆಲವು 'ಸಂಶೋಧನೆಗಳು' ನಡೆದಿವೆ. ಈ ಸಂಶೋಧನೆಗಳಲ್ಲಿ ಹೆಚ್ಚಿನವಕ್ಕೆ ರಾಷ್ ಕಂಪೆನಿ ಹಣ ನೀಡಿದೆ. ಆದರೆ ಈ ಸಂಶೋಧನೆಗಳ ಸಂಪೂರ್ಣ ವಿವರಗಳನ್ನು ಈಚಿನವರೆಗೂ ಬಹಿರಂಗಪಡಿಸಿರಲಿಲ್ಲ. ಈ ಮಾತ್ರೆಯನ್ನು ನೀಡಿ ಎಂದು ಹೇಳಿದ ವಿಶ್ವ ಆರೋಗ್ಯ ಸಂಸ್ಥೆ ಯೂರೋಪ್ ಹಾಗೂ ಅಮೆರಿಕಾದ ಔಷಧಿ ಪ್ರಾಧಿಕಾರಗಳೂ ಆ ಮಾಹಿತಿಯನ್ನು ಪಡೆದುಕೊಳ್ಳುವ ಗೋಜಿಗೆ ಹೋಗಿರಲಿಲ್ಲ.

ಆದರೆ, ಈಚೆಗೆ ಸ್ವತಂತ್ರ ವೈದ್ಯಕೀಯ ಮಾಹಿತಿ ಸಮೀಕ್ಷಾ ಸಂಸ್ಥೆ ಕೊಕ್ರೇನ್ ಹಾಗೂ ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಬಂದ ಸರಣಿ ಲೇಖನಗಳು ವಾಸ್ತವವನ್ನು ಹೊರಗೆಡಹಿದವು. ಅವು ಪದೇ ಪದೇ ಕೇಳಿದಾಗಲೂ ಮೊದ ಮೊದಲು ಸಂಪೂರ್ಣ ಮಾಹಿತಿಯನ್ನು ಅವರಿಗೂ ನೀಡಿರಲಿಲ್ಲ. ರಾಷ್ ಕಂಪೆನಿಗೆ ಅತ್ಯಂತ ಹೆಚ್ಚಿನ ಹಣ ತರುವ ಮಾತ್ರೆಗಳಲ್ಲಿ ಟ್ಯಾಮಿಫ್ಲೂ ಸಹ ಒಂದೆಂಬುದನ್ನು ಇಲ್ಲಿ ನೆನಪಿಸಿಕೊಳ್ಳುವ ಅಗತ್ಯವಿದೆ. ಈಗ ಮೇಲೆ ಹೇಳಲಾದ ಬಹು ಗೌರವಕ್ಕೆ ಪಾತ್ರವಾಗಿರುವ ವೈದ್ಯಕೀಯ ಸಂಶೋಧನಾ ಪತ್ರಿಕೆಗಳು ಹೊರತಂದಿರುವ ಮಾಹಿತಿಯ ಪ್ರಕಾರ ಆ ಎಲ್ಲಾ ಸಂಶೋಧನೆಗಳೂ ಅರೆಬರೆ ಸಂಶೋಧನೆಗಳಾಗಿವೆ ಅಥವಾ ಅವು ಯಾವ ತೀರ್ಮಾನಗಳಿಗೆ ಬಂದಿವೆಯೋ ಅದಕ್ಕೆ ಸಾಕಷ್ಟು ಪುರಾವೆಗಳಿಲ್ಲ.

ಹೀಗೆಲ್ಲಾ ಇದ್ದರೂ, ಔಷಧಿ ಪ್ರಾಧಿಕಾರಗಳು ಈ ಮಾತ್ರೆಯನ್ನು ಎಚ್1ಎನ್1 ಚಿಕಿತ್ಸೆಗೆ ಬಳಸಿ ಎಂದು ಮಾತ್ರವಲ್ಲ, ಅದು ಬಾರದಂತೆ ತಡೆಯಲೂ ಕೊಡಬಹುದು, ಹಾಗಾಗಿ ಸರ್ಕಾರಗಳು ಇದನ್ನು ದೊಡ್ಡ ಪ್ರಮಾಣದಲ್ಲಿ ದಾಸ್ತಾನು ಮಾಡಿಟ್ಟುಕೊಳ್ಳಬೇಕು ಎಂದು ಶಿಫಾರಸ್ಸು ಮಾಡಿದವು. ನಮ್ಮ ಆರೋಗ್ಯ ಸಚಿವರುಗಳು 'ನಮ್ಮಲ್ಲಿ ಟ್ಯಾಮಿಫ್ಲೂ ದಾಸ್ತಾನು ಸಾಕಷ್ಟು ಇದೆ' ಎಂದು ಹೇಳಿಕೆಗಳನ್ನು ನೀಡಿದರು ಹಾಗೂ ಕೆಲವು ರೋಗಿಷ್ಟ ಟಿವಿ ಚಾನೆಲ್‌ಗಳು ಸತ್ಯಾಸತ್ಯತೆಯನ್ನು ಸಂಪೂರ್ಣವಾಗಿ ಪರಿಶೀಲಿಸದೇ ಕಾರ್ಯಾಚರಣೆ ನಡೆಸಿ 'ನೋಡಿ, ಅಲ್ಲಿ ಟ್ಯಾಮಿಫ್ಲೂ ಇಲ್ಲ, ಇಲ್ಲಿ ಟ್ಯಾಮಿಫ್ಲೂ ಇಲ್ಲ' ಎಂದು ಸುದ್ದಿ ಮಾಡಿದವು.

2009ರಿಂದಲೇ ಇದಕ್ಕೆ ವಿರುದ್ಧವಾದ ಮಾಹಿತಿಗಳು ಹೊರಬರುತ್ತಿವೆ. ಭಾರತದ ಪ್ರಖ್ಯಾತ ವೈದ್ಯಕೀಯ ಸಂಸ್ಥೆಯಾದ ಏಮ್ಸ್‌ನ ಔಷಧ ವಿಭಾಗದ ಯೋಗೇಂದ್ರ ಕುಮಾರ್ ಗುಪ್ತಾ, ಮೀನಾಕ್ಷಿ ಮೀನು ಮತ್ತು ಪ್ರಫೂಲ್ ಮೋಹನ್ ಅವರು ಈ ಕುರಿತು ಕಳೆದ ವರ್ಷದಲ್ಲೇ ಸಂಶೋಧನಾ ಲೇಖನವನ್ನೂ (The Tamiflu fiasco and lessons learnt) ಬರೆದಿದ್ದಾರೆ.


ಕೊಕ್ರೇನ್‌ನ ಸಮೀಕ್ಷೆಯು ಇನ್ನೂ ಕೆಲವು ಪ್ರಮುಖ ಪ್ರಶ್ನೆಗಳನ್ನೂ ಎತ್ತಿದೆ.

ಟ್ಯಾಮಿಫ್ಲೂ ಮಾತ್ರೆಯಿಂದ ಮಾನಸಿಕ ವ್ಯತ್ಯಾಸಗಳ ಅಡ್ಡಪರಿಣಾಮ ಉಂಟಾಗುತ್ತಿದೆ ಎಂಬುದನ್ನು ಏಕೆ ಮರೆಮಾಚಲಾಗಿದೆ? ತನಗೆ ಇಷ್ಟೊಂದು ಲಾಭ ತರುತ್ತಿರುವ ಹಾಗೂ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಮಹತ್ವದ್ದಾದ ಇಂತಹದೊಂದು ಮಾತ್ರೆಯ ಕುರಿತು ಕಂಪೆನಿಯು ಮತ್ತಷ್ಟು ಸಂಶೋಧನೆಗೆ ಏಕೆ ಮುಂದಾಗಲಿಲ್ಲ? ಈ ಮಾತ್ರೆಯನ್ನು ತೆಗೆದುಕೊಂಡಾದ ಮೇಲೂ ಕೆಲವರಿಗೆ ಎಚ್1ಎನ್1 ಖಾಯಿಲೆ ಮತ್ತೆ ಕಾಣಿಸಿಕೊಂಡಾಗ ಅದರ ಕುರಿತು ಸಂಶೋಧನೆ ಏಕೆ ನಡೆಯಲಿಲ್ಲ? ಅ ಪರಿಣಾಮಗಳ ಬಗ್ಗೆ ನಡೆದ ಅಲ್ಪಸ್ವಲ್ಪ ಸಂಶೋಧನೆಯೂ ಮಾತ್ರೆ ತೆಗೆದುಕೊಳ್ಳುತ್ತಿದ್ದ ಅವಧಿ ಮಾತ್ರ ಏಕೆ ಸೀಮಿತವಾಯಿತು? ಎಲ್ಲಕ್ಕಿಂತ ಮುಖ್ಯವಾಗಿ ಟ್ಯಾಮಿಫ್ಲೂ ಮಾತ್ರೆಯ ಯಾವುದೇ ಸಂಶೋಧನೆ ನಡೆದಿದ್ದರೂ ಅದು 2009ಕ್ಕಿಂತ ಮುಂಚೆ. ಆದರೆ ಈ ಸಾರಿಯ ಎಚ್1ಎನ್1 ವೈರಸ್ಸು 2009ರ ನಂತರ ತನ್ನ ಗುಣ ಬದಲಾಯಿಸಿಕೊಂಡು ದಾಳಿಯಿಟ್ಟಿದೆ. ಈ ಮಾತ್ರೆ ಗುಣ ಬದಲಾಯಿಸಿಕೊಂಡ ವೈರಸ್ಸಿನ ಮೇಲೂ ಕೆಲ ಮಾಡುತ್ತಿದೆ ಎಂದು ಪರಿಶೀಲನೆ ಮಾಡಿದವರ‍್ಯಾರು? ಹೋಗಲಿ, ಜಪಾನ್ ಹಾಗೂ ಇಂಗ್ಲೆಂಡ್‌ನ ವಿಜ್ಞಾನಿಗಳು ಮತ್ತು ಸ್ವತಂತ್ರ ಸಂಶೋಧಕರು ತಮ್ಮ ಪ್ರಯೋಗದಿಂದ ಈ ಸುಳ್ಳುಗಳನ್ನು ಹೊರಗಿಟ್ಟ ನಂತರವೂ ಕಂಪೆನಿ ಏಕೆ ಪುನರ್ ಸಂಶೋಧನೆಗೆ ಮುಂದಾಗಲಿಲ್ಲ?

ಬಹುಶಃ ಈ ಪ್ರಶ್ನೆಗಳಿಗೆ ಉತ್ತರ ಇಲ್ಲಿರಬಹುದು. ಟ್ಯಾಮಿಫ್ಲೂ ಮಾತ್ರೆಯನ್ನು ಮಾರುಕಟ್ಟೆಗೆ 1999ರಲ್ಲಿ ಬಿಟ್ಟ ನಂತರ ರಾಷ್ ಕಂಪೆನಿಯು 18 ಬಿಲಿಯನ್ ಡಾಲರ್‌ಗಳನ್ನು (1,12,500 ಕೋಟಿ ರೂ.ಗಳು) ಸಂಪಾದಿಸಿದೆ. 2013ರಲ್ಲಿ ಅಮೆರಿಕಾದಲ್ಲಿ ಫ್ಲೂ ಬಂದಾಗ ಅದರ ಮಾರಾಟ ಶೇ.84ರಷ್ಟು ಹೆಚ್ಚಿತು. ಇಂಗ್ಲೆಂಡ್ 710 ಮಿಲಿಯನ್ ಡಾಲರ್‌ಗಳಷ್ಟು ಮೌಲ್ಯದ ಮಾತ್ರೆಗಳನ್ನು ಸಂಗ್ರಹ ಮಾಡಿಟ್ಟುಕೊಂಡಿ ಭಾರತವು ತನ್ನ ಸಂಗ್ರಹದ ಪ್ರಮಾಣವನ್ನು 10 ಪಟ ಹೆಚ್ಚಿಸಿತು.

ಎಲ್ಲರೂ ನೋಡಲೇ ಬೇಕಾದ ಚಿತ್ರ 'ಭಾರತದ ಮಗಳು'

ಕಂಡಹಾಗೆ



'ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದರಂತೆ' ಎಂಬ ಗಾದೆ ಮಾತಿಗೆ ತಕ್ಕಂತೆ ಕೇಂದ್ರದ ಬಿಜೆಪಿ ಸರ್ಕಾರ ವರ್ತಿಸುತ್ತಿದೆ. ನಿರ್ಭಯಾಳ ಮೇಲಾದ ಅಮಾನುಷ ಸಾಮೂಹಿಕ ಅತ್ಯಾಚಾರ ಪ್ರಕರಣದ ಸುತ್ತ ಲೆಸ್ಲೀ ಉಡ್ವಿನ್ ಎಂಬ ಮಹಿಳೆ ಮಾಡಿರುವ ಸಾಕ್ಷ್ಯ ಚಿತ್ರವನ್ನು ಬಿಜೆಪಿ ಸರ್ಕಾರ ನಿಷೇಧಿಸಿದೆ. ಅದಕ್ಕೆ ಸರ್ಕಾರ ಕೊಟ್ಟ ಕಾರಣ 'ಈ ಚಿತ್ರ ಭಾರತದ ಮಾನ ಹರಾಜು ಹಾಕುತ್ತದೆ', 'ಪ್ರವಾಸೋದ್ಯಮಕ್ಕೆ ಹಾನಿ ಆಗುತ್ತದೆ' ಎಂಬ ವಿತಂಡವಾದಗಳನ್ನು.

ಕಳೆದ ಗುರುವಾರ ಬೆಳಗ್ಗೆಯೇ ಮಿತ್ರರೊಬ್ಬರು ಈ ಚಿತ್ರದ ಲಿಂಕ್‌ಅನ್ನು ಈ-ಮೇಲ್ ಮಾಡಿದ್ದರು. ಆದರೆ ವಿಶೇಷಾಂಕದ ತಯಾರಿಯಲ್ಲಿದ್ದರಿಂದ ನೋಡಲಾಗಿರಲಿಲ್ಲ. ಪತ್ರಿಕೆಯನ್ನು ಮುದ್ರಣಕ್ಕೆ ಕಳುಹಿಸಿದ ನಂತರ ಸಂಜೆ ನೋಡಲು ಯತ್ನಿಸಿದರೆ ಅಷ್ಟು ಹೊತ್ತಿಗೆ ಅದು ಬ್ಯಾನ್ ಆಗಿದ್ದರಿಂದ ಲಿಂಕ್ ತೆಗೆಯಲು ಆಗುತ್ತಿರಲಿಲ್ಲ. ಆದರೇನಂತೆ, ಅದನ್ನು ಈಗಾಗಲೇ ಬಹಳಷ್ಟು ಜನ ಡೌನ್ ಲೋಡ್ ಮಾಡಿ ವಿತರಿಸುತ್ತಿರುವುದರಿಂದ ಅದಿನ್ನೂ ಇಂಟರ್‌ನೆಟ್‌ನಲ್ಲಿ ಲಭ್ಯವಿದ್ದು ಕೊನೆಗೂ ನೋಡುವಂತಾಯಿತು.

ನಿಜಕ್ಕೂ ಇದೊಂದು ಉತ್ತಮ ಸಾಕ್ಷ್ಯಚಿತ್ರ. ಸ್ವತಃ ಅತ್ಯಾಚಾರಕ್ಕೆ ಗುರಿಯಾಗಿದ್ದ ನಿರ್ದೇಶಕಿ ಲೆಸ್ಲೀ ಅವರು ಈ ವಿಷಯದ ಬಗ್ಗೆ ಇಷ್ಟೊಂದು ಸೂಕ್ಷ್ಮವಾಗಿ ಚಿತ್ರವನ್ನು ರೂಪಿಸಿರುವುದು ಮೆಚ್ಚುವಂತಹದ್ದು. "ಅತ್ಯಾಚಾರಗಳು ಜಗತ್ತಿನ ವಿವಿಧ ಕಡೆಗಳಲ್ಲೂ ಸಂಭವಿಸುತ್ತವೆ. ಆದರೆ ಭಾರತದಲ್ಲಿ ಅತ್ಯಾಚಾರದ ವಿರುದ್ಧ ಸಾಮಾನ್ಯ ಜನರೇ ಸ್ವಯಂಪ್ರೇರಿತರಾಗಿ ಒಂದು ಆಂದೋಲನವನ್ನೇ ನಡೆಸಿದ್ದು ಅಪರೂಪವಾಗಿತ್ತು. ಅದೇ ಈ ಚಿತ್ರಕ್ಕೆ ಸ್ಫೂರ್ತಿ ನೀಡಿತು. ಭಾರತವನ್ನು ಅವಮಾನಿಸುವ ಉದ್ದೇಶ ನನಗಿಲ್ಲ, ಬದಲಾಗಿ ನಾನು ಭಾರತವನ್ನು ತುಂಬಾ ಇಷ್ಟಪಡುತ್ತೇನೆ" ಎನ್ನುತ್ತಾರೆ ಲೆಸ್ಲೀ.

ಈ ಚಿತ್ರದಲ್ಲಿ ಏನೇನಿದೆ ಎಂಬುದು ಈಗಾಗಲೇ ಎಲ್ಲೆಡೆ ಚರ್ಚೆ ಆಗಿರುವುದರಿಂದ ವಿವರಗಳಿಗೆ ಇಲ್ಲಿ ಹೋಗುವುದಿಲ್ಲ. ಬದಲಾಗಿ ನನಗೆ ಇಷ್ಟವಾದದ್ದು ಮತ್ತು ಕಷ್ಟವಾದದ್ದನ್ನು ಮಾತ್ರ ಹೇಳುತ್ತೇನೆ.

ನಿರ್ಭಯಾಳ ರೇಪ್ ಪ್ರಕರಣದ ವಿವರಗಳು ಈಗ ಎಲ್ಲರಿಗೂ ಗೊತ್ತು. ಆದರೂ ಅದು ನಡೆದ ಸ್ಥಳ, ಬಸ್ ಇತ್ಯಾದಿ ವಿವರಗಳನ್ನು ಚಿತ್ರದಲ್ಲಿ ನೋಡುವಾಗ ಮತ್ತೊಮ್ಮೆ ಕರಳು ಕಿತ್ತುಬರುವಂತಾಗುತ್ತದೆ. ನಿರ್ಭಯಾಳ ನತದೃಷ್ಟ ತಂದೆ ಮತ್ತು ತಾಯಿ ಮಾತನಾಡುವುದನ್ನು ಕೇಳಿಸಿಕೊಂಡರೆ ಮೆಚ್ಚುಗೆ ಮತ್ತು ದುಃಖ ಎರಡು ಉಕ್ಕಿ ಬರುತ್ತವೆ. ಗ್ರಾಮೀಣ



ಹಿನ್ನೆಲೆಯ ತಂದೆ ಮಗಳ ಓದಿಗೆಂದು ತಮ್ಮ ಹಳ್ಳಿಯಲ್ಲಿದ್ದ ಭೂಮಿ ಮಾರಿದ್ದು, 'ಮಗನಿಗಾಗಿ ಮಾರಿದ್ದರೆ ಓಕೆ, ಆದರೆ ಮಗಳ ಓದಿಗೆ ಯಾಕೆ ಆಸ್ತಿ ಮಾರುತ್ತೀಯ' ಎಂಬ ಜನರ ಪ್ರಶ್ನೆಗೆ 'ಮಗಳ ಓದೂ ನನಗೆ ಮುಖ್ಯ' ಎಂದು ಉತ್ತರಿಸಿದ್ದು, ತಾಯಿ 'ಹೆಣ್ಣು ಮಕ್ಕಳು ಹೀಗೆ ವರ್ತಿಸಬೇಕು ಎಂದು ಹೇಳುವುದು ಸರಿಯಲ್ಲ' ಎಂದು ವಾದಿಸುವುದು ಅವರ ಪ್ರಗತಿಪರ ನಿಲುವನ್ನು ಕಂಡು ಮೆಚ್ಚುಗೆ ಆಗುತ್ತದೆ. ಆದರೆ ಅವರು ತಮ್ಮ ಮಗಳ ಮೇಲಾದ ದಾಳಿಯ ಬಗ್ಗೆ ಭಾವುಕರಾಗಿ ಮಾತನಾಡುವಾಗ, ಕಣ್ಣೀರು ಹಾಕುವಾಗ ನೋಡುಗರ ಕಣ್ಣುಗಳೂ ಹನಿಗೂಡುತ್ತವೆ.

ಅತ್ಯಾಚಾರಿ ಮುಖೇಶ್ ಸಿಂಗ್ ನಿರ್ಭಾವುಕನಾಗಿ ಆಡುವ ಮಾತುಗಳನ್ನು ಕೇಳಿದಾಗ ದೇಹ ತತ್ತರಿಸುತ್ತದೆ. ನ್ಯಾಯಾಲಯದಲ್ಲಿ ಅತ್ಯಾಚಾರಿಗಳ ವಿಚಾರಣೆ ನಡೆಯುತ್ತಿದ್ದಾಗ ಮುಖೇಶ್ ಪರ ವಾದಿಸಿದ್ದ ಆತನ ವಕೀಲ "ನನ್ನ ಮಗಳೋ ಅಥವಾ ಸಹೋದರಿಯೋ ಮದುವೆಯ ಮುನ್ನ ಯಾವುದೋ ಯುವಕನೊಂದಿಗೆ ಸಂಬಂಧ ಹೊಂದಿದರೆ ನಾನೇ ಕೈಯಾರೆ ಅವಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುತ್ತಿದ್ದೆ" ಎಂದು ಮಾಧ್ಯಮಗಳ ಮುಂದೆ ಹೇಳಿದ್ದ. "ಆ ಹೇಳಿಕೆಗೆ ನಾನು ಈಗಲೂ ಬದ್ಧ" ಎಂದು ಈ ಸಾಕ್ಷ್ಯ ಚಿತ್ರದಲ್ಲಿ ಆತ ಮತ್ತೆ ಹೇಳಿದ್ದನ್ನು ನೋಡಿ ನನಗೆ ಶಾಕ್ ಆಯಿತು. ಜೊತೆಗೆ ಅತ್ಯಾಚಾರಿಗಳ ಪರ ವಾದಿಸಿದ್ದ ಇನ್ನೊಬ್ಬ ವಕೀಲನೂ "ಯುವತಿಯರು ಸಂಜೆ ಮನೆಯಿಂದ ಹೊರಗೆ ಹೋಗಬಾರದು. ಅವರು ವಜ್ರಗಳಿದ್ದಂತೆ. ಅಂತಹ ವಜ್ರಗಳನ್ನು ಬೀದಿಯಲ್ಲಿ ಬಿಟ್ಟರೆ ನಾಯಿಗಳು ಹೊತ್ತುಕೊಂಡು ಹೋಗುತ್ತವೆ" ಎಂದದ್ದೂ ಶಾಕಿಂಗ್ ಆಗಿತ್ತು.


ಅತ್ಯಾಚಾರಿ ಮುಖೇಶನಾದರೋ ಬಡ ಹಿನ್ನೆಲೆಯಿಂದ ಬಂದವನು. ಹಳ್ಳಿಗ, ಓದು ಬರಹ ಗೊತ್ತಿಲ್ಲದವನು. ಆದರೆ ಈ ಇಬ್ಬರು ವಕೀಲರು ಮಧ್ಯಮ ವರ್ಗದವರು. ನಗರವಾಸಿಗಳು, ಸುಶಿಕ್ಷಿತರು. ಆದರೂ ಈ ಮೂವರು ಮಹಿಳೆಯರು ಸಂಜೆ ಮನೆಯಿಂದ ಹೊರಗೆ ಹೋಗಕೂಡದು, ಮದುವೆ ಮುನ್ನ ಯುವಕರೊಂದಿಗೆ ಗೆಳೆತನ ಇಟ್ಟುಕೊಂಡಿರಕೂಡದು ಎಂಬ ನಿಲುವನ್ನು ಹೊಂದಿರುವುದು ನಮ್ಮ ಸಮಾಜದಲ್ಲಿ ಪುರುಷಪ್ರಧಾನ ನಿಲುವು ಅದೆಷ್ಟು ಆಳವಾಗಿ ಬೇರೂರಿದೆ ಎಂದೂ, ಅದಕ್ಕೆ ವರ್ಗ ಭೇದವಿಲ್ಲ ಎಂದೂ ಸಾಬೀತುಪಡಿಸುತ್ತದೆ.

ಈಗ ಅಮೆರಿಕದಲ್ಲಿ ಪತ್ರಕರ್ತೆಯಾಗಿರುವ ಗೆಳತಿ ಶಿಖಾ ಸೂದ್ ತನ್ನ ಲೇಖನದಲ್ಲಿ ಹೀಗೆ ಬರೆದಿದ್ದಾಳೆ: "ಹೌದು, ಅತ್ಯಾಚಾರಗಳು ಅಮೆರಿಕದಂತಹ ದೇಶಗಳಲ್ಲೂ ನಡೆಯುತ್ತವೆ. ಆದರೆ ಭಾರತದಲ್ಲಿ ಆದಂತೆ ಅಮೆರಿಕದಲ್ಲಿ ಅತ್ಯಾಚಾರದ ವಿರುದ್ಧ ದೊಡ್ಡ ಜನಾಂದೋಲನ ನಡೆಯುವುದಿಲ್ಲ. ಹಾಗೆಯೇ ಇತ್ತೀಚೆಗೆ ಅಸ್ಸಾಮಿನ ದೀಮಾಪುರದಲ್ಲಿ ಆರೋಪಿಯೊಬ್ಬನನ್ನು ಜನರೇ ಕೊಂದುಹಾಕಿದಂತಹ ಕೃತ್ಯಗಳೂ ಅಮೆರಿಕದಲ್ಲಿ ನಡೆಯುವುದಿಲ್ಲ. ಯಾಕೆಂದರೆ ಅಲ್ಲಿ ಅತ್ಯಾಚಾರಕ್ಕೆ ಬೇರೆ ಕಾರಣಗಳಿವೆ. ಅಮೆರಿಕದ ಮತ್ತು ಇಂಗ್ಲೆಂಡ್ ತರಹದ ದೇಶಗಳಲ್ಲಿ ಪುರುಷ ಪ್ರಧಾನ ಮನಸ್ಥಿತಿಯನ್ನು ತಕ್ಕಮಟ್ಟಿಗೆ ನಿವಾರಣೆ ಮಾಡಲಾಗಿದೆ. ಆದರೆ ಭಾರತದಲ್ಲಿ ಅಂತಹ ಮನಃಸ್ಥಿತಿ ಇನ್ನೂ ಜೀವಂತವಾಗಿದೆ. ಉದಾಹರಣೆಗೆ ಈ ಸಾಕ್ಷ್ಯಚಿತ್ರದಲ್ಲಿ ವಕೀಲರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಭಾರತದಲ್ಲಿ ಸರ್ವೇಸಾಮಾನ್ಯವಾಗಿವೆ. ಅಂತಹ ಅಭಿಪ್ರಾಯಗಳನ್ನು ಹೊಂದಿರುವ ಸುಶಿಕ್ಷಿತ ಪುರುಷರು ನಿರ್ದೇಶಕಿ ಉಡ್ವಿನ್‌ಳಿಗೆ ಅಮೆರಿಕದಲ್ಲಿ ಸುಲಭವಾಗಿ ಸಿಗುವುದಿಲ್ಲ. ಆದ್ದರಿಂದ ಭಾರತದಲ್ಲಿ ಅತ್ಯಾಚಾರಕ್ಕೆ ಮುಖ್ಯಕಾರಣ ಅಲ್ಲಿನ ಪುರುಷ ಪ್ರಧಾನ ಮನಸ್ಥಿತಿಯೇ."

ಅದು ನಿಜ ಕೂಡ. ನಮ್ಮ ದೇಶದಲ್ಲಿ ಅತ್ಯಾಚಾರ ತಡೆಯಲು ವಿವಿಧ ಹೋರಾಟಗಳು ಮತ್ತು ಕಾನೂನು ತಿದ್ದುಪಡಿಗಳು ಆಗಾಗ್ಗೆ ನಡೆದಿವೆ. ರಾಜಸ್ಥಾನದಲ್ಲಿ ಬನವಾರಿ ದೇವಿ ಮೇಲಾದ ಸಾಮೂಹಿಕ ಅತ್ಯಾಚಾರ ಕುರಿತಂತೆ ಹೈಕೋರ್ಟ್ ನೀಡಿದ್ದ ತೀರ್ಪು ತೀವ್ರ ಖಂಡನೆಗೆ ಗುರಿಯಾಗಿತ್ತು. ಮಹಾರಾಷ್ಟ್ರದಲ್ಲಿ ಅತ್ಯಾಚಾರಕ್ಕೆ ತುತ್ತಾಗಿ ಈಗಲೂ 'ಜೀವಂತ ಶವ'ವಾಗಿರುವ ಅರುಣಾ ಶಾನ್‌ಭಾಗ್ ಪ್ರಕರಣದ ನಂತರ ಸಾಮೂಹಿಕ ಆಕ್ರೋಶ ವ್ಯಕ್ತವಾಗಿತ್ತು. ಮಣಿಪುರದಲ್ಲಿ ಮನೋರಮಾ ದೇವಿ ಎಂಬ ಮಹಿಳೆಯ ಮೇಲೆ ಸೈನಿಕರೇ ಅತ್ಯಾಚಾರ ಮಾಡಿ ಕೊಂದು ಹಾಕಿದ್ದರ ವಿರುದ್ಧ ಹತ್ತಾರು ತಾಯಂದಿರು ನಗ್ನರಾಗಿ ಸೈನ್ಯಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟಿಸಿದ್ದರು. ಸೋನಿ ಸೋರಿ ಎಂಬ ಆದಿವಾಸಿ ಮಹಿಳೆ ತಮ್ಮ ಮೇಲೆ ಪೊಲೀಸ್ ಅಧಿಕಾರಿಗಳು ಮಾಡಿರುವ ಅತ್ಯಾಚಾರದ ಬಗ್ಗೆ ನ್ಯಾಯಾಲಯಗಳಿಗೆ ಮನವಿಗಳನ್ನು ಸಲ್ಲಿಸುತ್ತಲೇ ಬಂದಿದ್ದಾರೆ. ನಿರ್ಭಯ ಪ್ರಕರಣದ ನಂತರ ದೇಶಾದ್ಯಂತ ಪ್ರತಿಭಟನೆಗಳು ನಡೆದಿದ್ದರಿಂದ ಕೇಂದ್ರ ಸರ್ಕಾರ ಜಸ್ಟೀಸ್ ವರ್ಮಾ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನೇ ರಚಿಸಿ ಅತ್ಯಾಚಾರಿಗಳಿಗೆ ಮರಣದಂಡನೆಯನ್ನೂ ವಿಧಿಸುವ ಕಾನೂನನ್ನು ಜಾರಿಗೆ ತರಲಾಯಿತು. ಆದರೂ ಮಹಿಳೆಯರ, ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ನಿಂತಿಲ್ಲ, ಯಾಕೆ?

ಯಾಕೆ ಅಂದರೆ ನಮ್ಮ ಪಿತೃಪ್ರಧಾನ ಭಾರತದಲ್ಲಿ ಈ ಅತ್ಯಾಚಾರವೆಂಬ 'ಸಂಸ್ಕೃತಿ' ವ್ಯಾಪಕವಾಗಿ ಹರಡಿದೆ. ಇದು ಕೆಲವರು ಮಾಡುವ ಅಪರಾಧ ಮಾತ್ರವಾಗಿಲ್ಲ, ಬದಲಾಗಿ ಅದನ್ನು ಪರೋಕ್ಷವಾಗಿ ಬೆಂಬಲಿಸುವ ಮನಸ್ಥಿತಿ ನಮ್ಮ ಸುತ್ತಲೂ ಹರಡಿದೆ. ಅತ್ಯಾಚಾರಿ ಮುಖೇಶ್ ಮತ್ತು ಆತನ ವಕೀಲರ ಅಭಿಪ್ರಾಯಗಳ ನಡುವೆ ನಮಗೆ ಫರಕ್ಕು ಕಾಣದಿರುವುದು ಈ 'ಸಂಸ್ಕೃತಿ' ಯಿಂದಾಗಿಯೇ.

ಆದ್ದರಿಂದ ಅತ್ಯಾಚಾರಿಗಳಿಗೆ ಶಿಕ್ಷೆ ಕೊಡುವ ಮೂಲಕ ಈ ಪಿಡುಗನ್ನು ತಡೆಗಟ್ಟಲಾಗುವುದಿಲ್ಲ. ಬದಲಾಗಿ ಪುರುಷಪ್ರಧಾನ ಮನಸ್ಥಿತಿಯನ್ನೇ ಬುಡಮೇಲು ಮಾಡಿದಾಗ ಮಾತ್ರ ಅದು ಕಡಿಮೆ ಆಗುತ್ತದೆ. ಅದು ನಮ್ಮ ಮನೆಗಳಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳನ್ನು ಸಮಾನವಾಗಿ ಬೆಳೆಸುವುದು, ಶಾಲಾಪಠ್ಯಗಳಲ್ಲಿ 'ಅಪ್ಪ ಆಫೀಸಿಗೆ, ಅಮ್ಮ ಅಡುಗೆ ಮನೆಗೆ' ತರಹದ ಹಳಸುಗಳನ್ನು ತೊರೆದು ಮಹಿಳಾ ಸಾಧಕಿಯರ ಬಗ್ಗೆ ಹೆಚ್ಚು ಒತ್ತುಕೊಡುವುದು, ಮಕ್ಕಳಿಗೆ ಹೇಳುವ ಕತೆಗಳಲ್ಲಿ ಮಹಿಳಾ ಪಾತ್ರಗಳಿಗೆ ಪ್ರಾಮುಖ್ಯತೆ ಕೊಡುವುದು, ಸಿನಿಮಾಗಳಲ್ಲಿ-ಟಿವಿ ಧಾರಾವಾಹಿಗಳಲ್ಲಿ ಮಹಿಳೆಯರನ್ನು ಕೆಟ್ಟದಾಗಿ ತೋರಿಸದೆ ಇರುವುದು... ಹೀಗೆ ಒಮ್ಮೆಗೆ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಗಳಾಗಬೇಕಿದೆ.



ಈ ಬದಲಾವಣೆಯ ಅಗತ್ಯವನ್ನು 'ಭಾರತದ ಮಗಳು' ಎಂಬ ಸಾಕ್ಷ್ಯಚಿತ್ರ ತೋರಿಸುತ್ತದೆ. ಮಾತ್ರವಲ್ಲ, ಖ್ಯಾತ ಸಾಹಿತಿ ಜಾವೇದ್ ಅಖ್ತರ್ ಅವರು ಹೇಳಿರುವಂತೆ "ತಾವೂ ಸಹ ಆ ಅತ್ಯಾಚಾರಿಯಂತೆ ಯೋಚಿಸುತ್ತೇವೆ ಎಂಬ ಅಂಶ ಭಾರತದ ಕೋಟ್ಯಂತರ ಪುರುಷರಿಗೆ ಈ ಸಾಕ್ಷ್ಯಚಿತ್ರವನ್ನು ನೋಡುವ ಮೂಲಕ ಅರಿವಾಗುತ್ತದೆ."


ಮಹಿಳೆಯರನ್ನು ಕೀಳಾಗಿ ಪರಿಗಣಿಸುವ, ಕಾಮುಕ ವಸ್ತುವಾಗಿ ಕಾಣುವ, 'ಮನೆಯಲ್ಲಿ ಜೋಪಾನವಾಗಿಡಬೇಕು' ಎನ್ನುವ, ಅವರು ತೊಡುವ ಬಟ್ಟೆಯೇ ಅತ್ಯಾಚಾರಕ್ಕೆ ಮೂಲ ಕಾರಣ ಎಂದು ನಂಬಿರುವ ಪುರುಷರು ಮತ್ತು ಕೆಲವು ಮಹಿಳೆಯರೂ ಖಂಡಿತವಾಗಿಯೂ ನೋಡಲೇ ಬೇಕಾದ ಸಾಕ್ಷ್ಯಚಿತ್ರವಿದು.

ಅದನ್ನು ಮಾಡುವ ಬದಲು ಮೋದಿ ಸರ್ಕಾರ 'ಈ ಚಿತ್ರದಿಂದ ದೇಶದ ಮಾನ ಹರಾಜಾಗುತ್ತದೆ' ಎಂದು ನಿಷೇಧಿಸಿದೆ. ಈ ನಿಷೇಧದ ಹಿಂದೆಯೂ ಅದೇ ಪುರುಷ ಪ್ರಧಾನ ಮನಸ್ಥಿತಿಯೂ ಕೆಲಸ ಮಾಡಿರುವುದು ಖಂಡನೀಯ.



• ಗೌರಿ ಲಂಕೇಶ್
editorlankesh@gmail.com

ಲಂಕೇಶ್ 80, ಪತ್ರಿಕೆ 10





ಸಮಾರೋಪ ಸಮಾವೇಶದಲ್ಲಿ ಎಚ್.ಎಲ್.ಕೇಶವಮೂರ್ತಿ, ಸಿದ್ದರಾಮಯ್ಯ, ಎ.ಕೆ.ಸುಬ್ಬಯ್ಯ ಮತ್ತು ಗೌರಿ

ಕಳೆದ ಭಾನುವಾರ ಜರುಗಿದ 'ಲಂಕೇಶ್ 80, ಪತ್ರಿಕೆ 10' ಕಾರ್ಯಕ್ರಮ ನಿಜಕ್ಕೂ ಮನಮುಟ್ಟುವಂತಿತ್ತು. ನಮ್ಮ ತಂಡದ ಸದಸ್ಯರು, ಒಡನಾಡಿಗಳು, ಹಿತೈಷಿಗಳು, ಅಪ್ಪನ ಅಭಿಮಾನಿಗಳು, ಗೆಳೆಯರು, ಪತ್ರಿಕೆಯ ಓದುಗರು... ನೂರಾರು ಜನ ಬೆಂಗಳೂರಿನಿಂದ, ಬೇರೆ ಬೇರೆ ಊರುಗಳಿಂದ ಬಂದಿದ್ದರು.

ಅಂದಿನ ಸಭೆಯನ್ನು ಉದ್ಘಾಟಿಸಿದ ಸ್ವಾತಂತ್ರ್ಯ ಹೋರಾಟಗಾರ, ಎಚ್.ಎಸ್.ದೊರೆಸ್ವಾಮಿಯವರು ತಮ್ಮ ಎಂದಿನ ಲವಲವಿಕೆಯಿಂದ ಈಗಿನ ರಾಜಕೀಯ ಮತ್ತು ಸಾಮಾಜಿಕ ದುಸ್ಥಿತಿಯನ್ನು ವಿಶ್ಲೇಷಿಸಿದರು. ಅಪ್ಪನ ಮಿತ್ರ ಡಾ.ಶ್ರೀನಿವಾಸ್ ಗೌಡ ಅವರು ದೊರೆಸ್ವಾಮಿಯನ್ನು ಕಂಡು ಬೆರಗಾದರು. "ಈ ವಯಸ್ಸಿನಲ್ಲೂ ಅವರದ್ದು ಎಂತಹ ಸ್ಪಷ್ಟ ಚಿಂತನೆ" ಎಂದು ಡಾಕ್ ಆಮೇಲೆ ಮೆಸೇಜ್ ಕಳುಹಿಸಿದರು.

ಮಿತ್ರ ಜಿ.ರಾಜಶೇಖರ್ ಅವರು ಲಂಕೇಶರ 'ಅಕ್ಕ' ಕಾದಂಬರಿಯನ್ನು ಆಧರಿಸಿ ಮಾತನಾಡಿದರು. ಒಂದು ಕೃತಿಯನ್ನು ಹೇಗೆ ಅರ್ಥೈಸಬೇಕು ಎಂಬುದನ್ನು ಸಾಹಿತ್ಯದ ವಿದ್ಯಾರ್ಥಿಗಳು ಅರಿಯಬೇಕಿದ್ದರೆ ರಾಜಶೇಖರ್ ಅವರು ಅಂದು ಮಾಡಿದ ಭಾಷಣವನ್ನು ಕೇಳಲೇಬೇಕು.

ಗೆಳತಿ ಎಂ.ಎಸ್.ಆಶಾದೇವಿ ಕೂಡ 'ಲಂಕೇಶರ ದೃಷ್ಟಿಕೋನದಲ್ಲಿ ಮಹಿಳೆ' ಕುರಿತು ಅದೆಷ್ಟು ಅದ್ಭುತವಾಗಿ ಮಾತನಾಡಿದರೆಂದರೆ ನನ್ನ ತಂಗಿ ಕವಿತಾ "ಅಪ್ಪನ 'ಕಲ್ಲು ಕರಗುವ ಸಮಯ' ಕತೆಯನ್ನು ಆಶಾ ಸಿನಿಮಾ ಸ್ಕ್ರಿಪ್ಟ್ ಆಗಿ ನನಗೆ ಬರೆದುಕೊಡುತ್ತಾರಾ ಕೇಳು" ಎಂದಳು.

ಸಹೋದರ ಬಿ.ಎಂ.ಬಷೀರ್ 'ಪತ್ರಿಕೆ' ಬಗ್ಗೆ ಮಾತನಾಡುತ್ತಾ 'ಅದು ಬರೀ ಪತ್ರಿಕೆ ಮಾತ್ರವಲ್ಲ, ಜೀವನದ ಮೌಲ್ಯಗಳನ್ನು ಕಲಿಸಿದ ತಾಯಿ' ಎಂದರು. ಜೊತೆಗೆ ಜನವರಿಯಲ್ಲಿ ನನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ನನ್ನ ಬಗ್ಗೆ ಬರೆದ ಕವನವನ್ನೂ ಓದಿದರು.



ಚಾಕೊಲೇಟ್ ರಾಶಿಯಲ್ಲಿ ಪುಸ್ತಕವನ್ನು ಹುಡುಕುತ್ತಿರುವ ಇಶಾ

ಸಮಾರಂಭದ ಹಿಂದಿನ ದಿನ ಎಸ್ತರ್ ಅನಂತಮೂರ್ತಿಯವರಿಗೆ ಫೋನ್ ಮಾಡಿ "ಪ್ಲೀಸ್ ಕಾರ್ಯಕ್ರಮಕ್ಕೆ ಬನ್ನಿ" ಎಂದು ಆಹ್ವಾನಿಸಿದ್ದೆ. ನಾನು ತಡವಾಗಿ ಅವರನ್ನು ಕರೆದಿದ್ದರೂ ಅವರು ಒಂಚೂರೂ ಬೇಜಾರು ಮಾಡಿಕೊಳ್ಳದೆ ಬಂದರು. ಲಂಕೇಶ್ ಪ್ರಕಾಶನದ ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಿದ ಅಮ್ಮ ಇಂದಿರಾ ಅವರು 'ಅನಂತಮೂರ್ತಿ ಅನಂತ ರೀತಿ' ಪುಸ್ತಕಗಳ ಪ್ರತಿಗಳನ್ನು ಎಸ್ತರ್ ಅವರಿಗೆ ಕೊಟ್ಟರು.

ಇನ್ನು 'ಪುಟಾಣಿ ಲಂಕೇಶ್ ಪುಸ್ತಕ ಮಾಲೆ'ಯ ಮೊದಲ ಪುಸ್ತಕ ಕೆನೆತ್ ಆಂಡರ್ಸನ್ ಬರೆದಿರುವ 'ಕಾಡಿನ ಕತೆಗಳು' ಪುಸ್ತಕ ಸ್ವಲ್ಪ ಭಿನ್ನವಾಗಿ ಬಿಡುಗಡೆ ಆದರೆ ಚೆನ್ನ ಎಂದು ಯೋಚಿಸಿದೆ. ಅದಕ್ಕೇ ಆ ಪುಸ್ತಕವನ್ನು ಒಂದು ಗಾಜಿನ ಪೆಟ್ಟಿಗೆಯಲ್ಲಿಟ್ಟು ಅದರ ಮೇಲೆ ನೂರಾರು ಚಾಕಲೆಟ್‌ಗಳನ್ನು ತುಂಬಿದ್ದೆ. ಮಗಳು ಇಶಾ ವೇದಿಕೆ ಮೇಲಿದ್ದ ಎಲ್ಲರಿಗೂ ಚಾಕೊಲೇಟ್ ಹಂಚಿದ ನಂತರ ಆ ರಾಶಿಯಡಿಯಿಂದ ಪುಸ್ತಕವನ್ನು ಹೊರತರುವ ಮೂಲಕ ಅದನ್ನು ಬಿಡುಗಡೆ ಮಾಡಿದಳು.

ಭಾನುವಾರ ಮಧ್ಯಾಹ್ನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರಿಂದ ಮತ್ತು ಅಂದೇ ನನ್ನ ಹಲವಾರು ಗೆಳತಿಯರು ಮಲ್ಲೇಶ್ವರಂ ಮೈದಾನದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರಿಂದ ನಮ್ಮ ಕಾರ್ಯಕ್ರಮ ಸ್ವಲ್ಪ ತಡವಾಗಿ ಪ್ರಾರಂಭವಾಗಿತ್ತು, 'ಕಾಲದ ಕರೆ' ಕುರಿತ ಮುಂದಿನ ಗೋಷ್ಠಿಗೆ ಸಮಸ್ಯೆ ಆಗಬಾರದೆಂದು ನಾನು ಹೆಚ್ಚು ಮಾತನಾಡಲಿಲ್ಲ.

ನೂರ್ ಶ್ರೀಧರ್‌ಗೆ ಅದು ಪ್ರಥಮ ಸಾರ್ವಜನಿಕ ಭಾಷಣವಾಗಿತ್ತು, ತಾವು ಯಾಕೆ ಭೂಗತವಾಸದಿಂದ ಮುಖ್ಯವಾಹಿನಿಗೆ ಬಂದೆವೆಂದೂ, ಈಗ ಎಂತಹ ಚಳವಳಿ ಅಗತ್ಯವಾಗಿದೆ ಎಂದೂ ಅವರು ವಿವರಿಸಿದರು.


ಕುವೆಂಪು ಕಲಾಕ್ಷೇತ್ರದಲ್ಲಿ ಸೇರಿದ್ದ ಜನ

ದಿನೇಶ್ ಅಮೀನ್ ಮಟ್ಟು ಅವರು ನಮ್ಮ ಪ್ರಜಾತಂತ್ರದ 'ಫಸ್ಟ್ ಪಾಸ್ಟ್ ದಿ ಪೋಸ್ಟ್' ವ್ಯವಸ್ಥೆಯ ಇತಿಮಿತಿಗಳನ್ನು ವಿಶ್ಲೇಷಿಸುತ್ತಾ "ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸಿಕ್ಕ 31 % ಮತಗಳಲ್ಲಿ ಹೆಚ್ಚಿನವು ಹೊಸ ತಲೆಮಾರಿನ ಮತದಾರರದ್ದು; ಅವರೆಲ್ಲ ಮೋದಿ ತೋರಿಸಿದ 'ಅಭಿವೃದ್ಧಿ'ಯ ಸೋಗಿಗೆ ಮರುಳಾಗಿ ಆತನನ್ನು ಬೆಂಬಲಿಸಿದರು. ಅವರ್‍ಯಾರೂ ಕೋಮುವಾದಿಗಳಲ್ಲ, ಸದ್ಯದಲ್ಲೇ ಅವರಿಗೆಲ್ಲ ಭ್ರಮನಿರಸನವಾಗಿ ಅವರೆಲ್ಲ ಜಾತ್ಯತೀತ ನಿಲುವಿಗೆ 'ಘರ್ ವಾಪಸಿ' ಆಗುತ್ತಾರೆ" ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.


ಸಹೋದರಿ ದು.ಸರಸ್ವತಿ ಅವತ್ತಿನ ಮಧ್ಯಾಹ್ನದ ತನಕ ಮಹಿಳಾ ಕಾರ್ಯಕ್ರಮಕ್ಕಾಗಿ ತನ್ನೆಲ್ಲ ಸಮಯ ಮತ್ತು ಶ್ರಮವನ್ನು ಹಾಕಿದ್ದರಿಂದ 'ಹೆಚ್ಚು ತಯಾರಿ ಮಾಡಿಕೊಂಡಿಲ್ಲ ಕಣೆ. ನಿನ್ನ ಕಾರ್ಯಕ್ರಮದ ಬಗ್ಗೆ ತಲೆಗೆ ಹುಳ ಬಿಟ್ಟುಕೊಂಡಿದ್ದು ನಿನ್ನೆ ರಾತ್ರಿ' ಎನ್ನುತ್ತಲೇ ತಮ್ಮ ಎಂದಿನ ಶೈಲಿಯಲ್ಲಿ ದಮನಿತರ, ದಲಿತರ, ಮಹಿಳೆಯರ ಸ್ಥಿತಿಗತಿಗಳ ಕುರಿತು ಅಚ್ಚುಕಟ್ಟಾಗಿ ಮಾತನಾಡಿದರು.

ನಮ್ಮ ಕಾರ್ಯಕ್ರಮ ವಿಳಂಬವಾಗಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸ್ವಲ್ಪ ತಡವಾಗಿಯೇ ಕರೆದುಕೊಂಡು ಬರಲು ಅವರ ಓಎಸ್‌ಡಿ ಮಿರ್ಜಾರನ್ನೂ, ಸಹೋದರ ಪ್ರದ್ಯುಮ್ನ ಆಲನಹಳ್ಳಿಯನ್ನೂ (ಇವನು ಖ್ಯಾತ ಸಾಹಿತಿ ದಿ.ಶ್ರೀಕೃಷ್ಣ ಆಲನಹಳ್ಳಿ ಅವರ ಪುತ್ರ) ಕೇಳಿಕೊಂಡಿದ್ದೆ. ಅದರಂತೆ ಅವರಿಬ್ಬರು ಸಿದ್ದರಾಮಯ್ಯನವರನ್ನು ಸಂಜೆ 6.30 ಕರೆದುಕೊಂಡು ಬಂದರು.


ಸಿದ್ದರಾಮಯ್ಯನವರು ವೇದಿಕೆ ಹತ್ತುತ್ತಿದ್ದಂತೆ ಹಿರಿಯ ಹೋರಾಟಗಾರ ಎ.ಕೆ.ಸುಬ್ಬಯ್ಯ ತಮ್ಮ ವಾಚ್ ನೋಡಿಕೊಂಡರು. ಆಗ ಸಿದ್ದರಾಮಯ್ಯನವರು "ನಾನು ಆರು ಗಂಟೆಗೇ ಬರಲು ತಯಾರಿದ್ದೆ. ಇವಳೇ ತಡವಾಗಿ ಬನ್ನಿ ಅಂತ ಹೇಳಿದಳು" ಎಂದು ನನ್ನ ಬಗ್ಗೆ ತಮಾಷೆಯಾಗಿ


ಖಲಂದರ್ ಕೋಯ್ಲಾ, ಶಶಿಧರ್ ಹೆಮ್ಮಾಡಿ, ಪ್ರಗತ್ ಗೌಡ (ಬಲ ತುದಿ) ಮತ್ತು ಇತರೆ ಮಿತ್ರರೊಂದಿಗೆ ಗೌರಿ



ಎಸ್ತರ್ ಅನಂತಮೂರ್ತಿ, ಇಂದಿರಾ ಲಂಕೇಶ್, ಇಶಾ ಲಂಕೇಶ್, ಎಚ್.ಎಸ್.ದೊರೆಸ್ವಾಮಿ, ಗೌರಿ ಮತ್ತು ಎಂ.ಎಸ್.ಆಶಾದೇವಿ ಬಿಡುಗಡೆಗೊಂಡ ಪುಸ್ತಕಗಳೊಂದಿಗೆ




ಕಾರ್ಯಕ್ರಮ ಶುರುವಾಗುವ ಮುನ್ನ ಸಿರಿಮನೆ ನಾಗರಾಜ್ ಮತ್ತು ನೂರ್ ಶ್ರೀಧರ್ ಜೊತೆ ಚರ್ಚಿಸುತ್ತಿರುವ ಬಿ.ಚಂದ್ರೇಗೌಡ



ಸಿರಿಮನೆ ನಾಗರಾಜ್ ಮತ್ತು ನೂರು ಶ್ರೀಧರ್ ಸಿದ್ದರಾಮಯ್ಯನವರೊಂದಿಗೆ



ಅಭಿಮಾನಿಗಳಿಂದ ಸುತ್ತುವರೆದಿರುವ ದಿನೇಶ್ ಅಮೀನ್ ಮಟ್ಟು



ಕುವೆಂಪು ಕಲಾಕ್ಷೇತ್ರದ ಮುಂದೆ ಇಶಾ ಮತ್ತು ಕವಿತಾ ಲಂಕೇಶ್

...ಊರಿದರು.

ಬಿ.ಚಂದ್ರೇಗೌಡರು "ಲಂಕೇಶ್ ಜೊತೆ ಇದ್ದವರು ...ಈಗ ಸಂಪೂರ್ಣವಾಗಿ ಬದಲಾಗಿದ್ದಾರೆ. ಒಬ್ಬ ಬಳ್ಳಾರಿ ...ಡ್ಡಿಗಳ ಗುಂಪನ್ನು ಸೇರಿದರೆ ಇನ್ನೊಬ್ಬ ಈಗ ಪಂಚಾಂಗ ...ಡಿದು ಭವಿಷ್ಯ ಹೇಳುತ್ತಿದ್ದಾನೆ. ಆದರೂ ನಮ್ಮ ತಂಡ ...ಂಕೇಶರ ಆಶಯಗಳನ್ನು ಮುಂದುವರೆಸಿಕೊಂಡು ...ರುತ್ತಿದ್ದೇವೆ" ಎಂದರು. ತಮ್ಮ ಕೆ.ಫಣಿರಾಜ್ ಕರಾವಳಿ ಪ್ರದೇಶದಲ್ಲಿ ಹಿಂದೂತ್ವವಾದಿಗಳ ಅಟ್ಟಹಾಸಗಳನ್ನು ತರಾಟೆಗೆ ತೆಗೆದುಕೊಂಡ. ಎ.ಕೆ.ಸುಬ್ಬಯ್ಯನವರೂ ಕೋಮುವಾದಿಗಳನ್ನು ಖಂಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು "ಲಂಕೇಶ್ ಪತ್ರಿಕೋದ್ಯಮದಲ್ಲಿ ಸಂಚಲನ ಮೂಡಿಸಿದವರು. ಈ ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಪಕ್ಷ ಸೋತು ಜನತಾ ಸರ್ಕಾರ ಅಧಿಕಾರಕ್ಕೆ ಬರುವಲ್ಲಿ ಅವರ ಪಾತ್ರ ದೊಡ್ಡದಿತ್ತು. ರಾಮಕೃಷ್ಣ ಹೆಗಡೆ ಸರ್ಕಾರವನ್ನು ಲಂಕೇಶರು ಟೀಕಿಸುತ್ತಿದ್ದರೂ ಆ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ನಾನು, ಎಂ.ಪಿ.ಪ್ರಕಾಶ್ ಮತ್ತು ನಜೀರ್ ಸಾಬ್ ಆಗಾಗ್ಗೆ ಲಂಕೇಶರನ್ನು ಭೇಟಿ ಆಗುತ್ತಿದ್ದೆವು. ಆಗ ಪಾರ್ಲಿಮೆಂಟ್ ಚುನಾವಣೆ ಎದುರಾಯಿತು. ಲಂಕೇಶರು ಜನತಾ ಪಕ್ಷದಿಂದ ನಾನು ಸ್ಪರ್ಧಿಸಬೇಕು ಎಂದು ಹೇಳಿದರು. ನನಗೆ ಸಂಸದನಾಗಿ ದೆಹಲಿಗೆ ಹೋಗುವ ಆಶೆ ಇರಲಿಲ್ಲ. ಜೊತೆಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೊದಲ ಬಾರಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿದಿದ್ದರು. ಮೈಸೂರಿನಲ್ಲಿ ರಾಜವಂಶದ ಬಗ್ಗೆ ಜನರಲ್ಲಿ ಅಭಿಮಾನವಿತ್ತು. ನಮ್ಮ ಪಕ್ಷ ಕೂಡ ಯಾರಿಗೋ ಟಿಕೆಟ್ ಕೊಟ್ಟಿತು. ನಾನು ಸುಮ್ಮನಿದ್ದೆ. ಆದರೆ ಮುಂದಿನ ವಾರವೇ ಲಂಕೇಶರು ನನ್ನ ಬಗ್ಗೆ 'ಇಸ್ಪೀಟು ದಾಸ ಮಾಡಿದ ಮೋಸ' ಎಂದು ಪ್ರಕಟಿಸಿದ್ದರು. ಆಗ ನಾನು ಕೆಲವು ಮಿತ್ರರೊಂದಿಗೆ ಆಗಾಗ್ಗೆ ಇಸ್ಪೀಟು ಆಡುತ್ತಿದ್ದರಿಂದ ಮತ್ತು ಅವರು ಹೇಳಿದಂತೆ ಸ್ಪರ್ಧಿಸದಿದ್ದರಿಂದ ನನ್ನ ಬಗ್ಗೆ ಹಾಗೆ ಬರೆದಿದ್ದರು" ಎಂದು ನೆನಪು ಮಾಡಿಕೊಂಡರು.

ಜೊತೆಗೆ ತಾವು ರಾಜಕೀಯಕ್ಕೆ ಧುಮುಕಿದ್ದು ರೈತ ಸಂಘವನ್ನು ಸ್ಥಾಪಿಸಿದ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರಿಂದಾಗಿ ಎಂಬುದನ್ನೂ ಹೇಳಿದರು. "ನಾನು ಲಾ ಓದುತ್ತಿದ್ದಾಗ ನಂಜುಂಡಸ್ವಾಮಿಯವರು ನನ್ನ ಅಧ್ಯಾಪಕರಾಗಿರದಿದ್ದರೆ ನಾನು ಇವತ್ತು ಎಲ್ಲೋ ಲಾಯರ್ ಆಗಿ ಆರಾಮಾಗಿರುತ್ತಿದ್ದೆ. ಆದರೆ ಅವರ ಮತ್ತು ಲೋಹಿಯಾವಾದಿಗಳಾಗಿದ್ದ ಕೆ.ರಾಮದಾಸ್, ಪೂರ್ಣಚಂದ್ರ ತೇಜಸ್ವಿ, ಯು.ಆರ್.ಅನಂತಮೂರ್ತಿ ಮತ್ತು ಲಂಕೇಶ್ ಅವರ ಸಂಪರ್ಕ ಸಿಕ್ಕಿದ್ದರಿಂದ ರಾಜಕೀಯಕ್ಕೆ ಬಂದೆ" ಎಂದೂ ಸಿದ್ದರಾಮಯ್ಯನವರು ಹೇಳಿದರು.

ಕಾರ್ಯಕ್ರಮ ಅಂತ್ಯಗೊಂಡ ನಂತರ ಸಿದ್ದರಾಮಯ್ಯನವರಿಗೆ "ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಅವರೂ ಇಲ್ಲಿದ್ದಾರೆ. ಅವರ ಪರಿಚಯ ಮಾಡಿಕೊಡುತ್ತೇನೆ" ಎಂದೆ. ಹೊರಗೆ ಬಂದಾಗ ಅವರಿಬ್ಬರನ್ನು ಪರಿಚಯಿಸಿದೆ. ನೂರ್ ಶ್ರೀಧರ್ "ಮುಖ್ಯವಾಹಿನಿಗೆ ಬರಲು ಅನುವು ಮಾಡಿಕೊಟ್ಟದ್ದಕ್ಕೆ ಥ್ಯಾಂಕ್ಸ್" ಎಂದು ಸಿದ್ದರಾಮಯ್ಯನವರಿಗೆ ಹೇಳಿದರು. ಸಿದ್ದರಾಮಯ್ಯ ನಗುತ್ತಲೇ ಅವರಿಬ್ಬರ ಕೈಕುಲುಕಿದರು.

ನಮ್ಮ ಎಲ್ಲಾ ಕಾರ್ಯಕ್ರಮಕ್ಕೆ ಬರುವ, ಎಲ್ಲ ಹೋರಾಟಗಳೊಂದಿಗೆ ಕೈಜೋಡಿಸುವ ರೈತ ನಾಯಕ ವೀರಸಂಗಯ್ಯ ಅವರ ಆರೋಗ್ಯ ಕೆಟ್ಟಿದ್ದರಿಂದ ಹಿಂದಿನ ದಿನವೇ ಅವರನ್ನು ಐಸಿಯುಗೆ ವೈದ್ಯರು ಹಾಕಿದ್ದರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ವೀರಸಂಗಯ್ಯ ಅವರಿಗೆ ಆರ್ಥಿಕ ನೆರವು ನೀಡಬೇಕೆಂದು ಕಾರ್ಯಕ್ರಮಕ್ಕೆ ಬಂದಿದ್ದ ಜನರನ್ನು ವಿನಂತಿಸಿಕೊಂಡೆವು. ಎಲ್ಲರೂ ಸೇರಿ **17,000** ರೂಪಾಯಿಗಳನ್ನು ಸಂಗ್ರಹಿಸಿಕೊಟ್ಟರು.


ಕುವೆಂಪು ಕಲಾಕ್ಷೇತ್ರಕ್ಕೆ ಬಂದಿದ್ದ ಮಿತ್ರರಿಗೆಲ್ಲ ಬೈ ಹೇಳಿದ ನಂತರ ಕೆಲವರು ನಮ್ಮ ಆಫೀಸಿನಲ್ಲೇ ಒಂದು ಪುಟ್ಟ ಸಂತೋಷಗೋಷ್ಠಿಗೆ ಕೂತೆವು. ಶಶಿಧರ್ ಹೆಮ್ಮಾಡಿ, ಫಣಿರಾಜ್, ವಿ.ಎಸ್.ಶ್ರೀಧರ್, ದೊಡ್ಡಿಪಾಳ್ಯ ನರಸಿಂಹ ಮೂರ್ತಿ, ವಿನಯ್ ಹೆಗಡೆ ಮತ್ತು ಚಂದ್ರೇಗೌಡ ಬಂದರು. ಚಂದ್ರೇಗೌಡರು ಸಂಸ್ಕೃತದ 'ಧೀರ ಸಮೀರೆ ಯಮುನಾ ತೀರೆ' ಎಂಬ ಹಾಡನ್ನು ಸೊಗಸಾಗಿ ಹೇಳಿದರು. ಹೆಮ್ಮಾಡಿ ಕೂಡ ಹಿಂದಿ ಹಾಡನ್ನು ಹಾಡಿದರು. ಅಪ್ಪ ಬರೆದಿದ್ದ ಸಿನಿಮಾ ಹಾಡುಗಳ ಸಿಡಿಯನ್ನು ಹಾಕಿ 'ಕೆಂಪಾದವೋ ಎಲ್ಲ ಕೆಂಪಾದವೋ' ಸೇರಿದಂತೆ ಹಲವು ಹಾಡುಗಳನ್ನು ಆಲಿಸಿದೆವು.

ಹಾಡು, ಹರಟೆ, ನಗು, ತಮಾಷೆ, ನೆನಪುಗಳು...


ರಾತ್ರಿ ಹತ್ತು ಗಂಟೆಗೆ ಅಪ್ಪನಿಗೆ ಒಂದು ಮಿಯಾಂವ್ ಹೇಳಿ ಎಲ್ಲರೂ ಅಲ್ಲಿಂದ ಹೊರಟೆವು...

'ಲಂಕೇಶ್ **80**, ಪತ್ರಿಕೆ **10**' ಕಾರ್ಯಕ್ರಮಕ್ಕೆ ಬಂದಿದ್ದ ಸಹಕರಿಸಿದ, ಯಶಸ್ವಿಗೊಳಿಸಿದ ಎಲ್ಲಾ ಮಿತ್ರರಿಗೂ ಧನ್ಯವಾದಗಳು...

ನಿಮ್ಮ,
ಗೌರಿ



ವ್ಯವಸ್ಥಾಪಕ ರಾಜು ಪುಸ್ತಕ ಮಳಿಗೆಯಲ್ಲಿ



ಲಂಕೇಶ್ ಬಳಗದ ಕಿರಿ-ಹಿರಿ ಮಿತ್ರರಾದ ಅಭಿನಂದನ್ ಬಳ್ಳಾರಿ ಮತ್ತು ಎಚ್.ಎಲ್.ಕೇಶವಮೂರ್ತಿ



ಗೌರಿ, ವಿ.ಎಸ್.ಶ್ರೀಧರ, ಶಿವಸುಂದರ್ ಮತ್ತು ಅಭಿನಂದನ್ ಬಳ್ಳಾರಿ

ತದಡಿ ಬಂದರಿಗೂ ಪರಿಸರವ್ಯಾಧಿಗಳ ತಕರಾರು!




ಆಶೀಸರ
ಮಾಜಿ ಪಶ್ಚಿಮ ಘಟ್ಟ
ಕಾರ್ಯಪಡೆ ಅಧ್ಯಕ್ಷ

ಉತ್ತರ ಕನ್ನಡ ಜಿಲ್ಲೆಯೆಂದರೆ ಅದೊಂದು ದೊಡ್ಡ ನಿರಾಶ್ರಿತರ ಡೇರೆ ಎಂಬುದೇನೋ ಖರೆ. ಇದಕ್ಕೆ ಮೂಲಕಾರಣ ಇಲ್ಲಿಯ ಹೇತ್ಲಾಂಡಿ ಜನಪ್ರತಿನಿಧಿಗಳ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮತ್ತು ಅಯೋಗ್ಯತೆ. ದಿನಕರ ದೇಸಾಯಿ ಒಬ್ಬರನ್ನು ಬಿಟ್ಟರೆ ಸ್ವಾತಂತ್ರ್ಯಾ ನಂತರದಲ್ಲಿ ಧೂಮಕೇತುವಿನಂತೆ ಉರಿದೆದ್ದ ಎಂಪಿ-ಎಮ್ಮೆಲ್ಲೆ-ಮಿನಿಸ್ಟರ್‌ಗಳೆಲ್ಲರೂ ತಂತಮ್ಮ ಬೇಳೆ ಬೇಯಿಸಿಕೊಂಡು ಹಿತಾನುಭವ ಕಂಡರೇ ಹೊರತು ಜನರಿಗಾಗಿ ಒಂಚೂರೂ ಚಿಂತಿಸಲಿಲ್ಲ. ಹೀಗಾಗಿ ಉತ್ತರ ಕನ್ನಡದಲ್ಲಿ ಉದ್ಯೋಗ ಸೃಷ್ಟಿಸುವ ದೊಡ್ಡ ಮಟ್ಟದ ಉದ್ಯಮ-ಕೈಗಾರಿಕೆ ಸ್ಥಾಪನೆ ಆಗಲೇ ಇಲ್ಲ. ಕೃಷಿಕರಿಗೆ-ಮೀನುಗಾರಿಕೆಗೆ ಬೇಕಾದ ನೀರಾವರಿ-ಶೈತ್ಯಾಗಾರ ಯಾವುದೂ ಬರಲೇ ಇಲ್ಲ.

ಜಿಲ್ಲೆಗೆ ಬಂದದ್ದೆಲ್ಲ ಊರು ಮುಳುಗಿಸುವ ಮತ್ತು ಜನರನ್ನು ಬೀದಿಗೆ ಎಸೆವ ವಿದ್ಯುತ್ ಯೋಜನೆ ಮತ್ತು ನೌಕಾನೆಲೆಯಂಥ ಪ್ರಳಯಾಂತಕ ಯೋಜನೆಗಳೇ! ಹೀಗಾಗಿ ಸರ್ಕಾರಿ ಯೋಜನೆಯೆಂದರೆ ಸಾಕು, ಇಡೀ ಜಿಲ್ಲೆ ಬೆಚ್ಚಿ ಬೀಳುತ್ತದೆ. ಅಸಹಾಯಕ ಜನರ ಅಮಾಯಕತೆ ಬಳಸಿಕೊಂಡು ಸ್ವಯಂಘೋಷಿತ ಪರಿಸರ ಪರಾಕ್ರಮಿಗಳ ತಂಡ ಮೂರ್ನಾಲ್ಕು ದಶಕದಿಂದ ಜಿಲ್ಲೆಯಾದ್ಯಂತ ಹುಲುಸಾಗಿ ಹಬ್ಬಿಕೊಂಡಿವೆ. ಯಾವ ಯೋಜನೆ-ಉದ್ಯಮ ಬರುವುದಿದ್ದರೂ ತಮ್ಮ ಪರವಾನಗಿ ಪಡೆಯಬೇಕೆಂಬ ಹಠದಿಂದ ಹಾರಾಡುವ ಈ ಪರಿಸರ ಪುಂಡರು ಮುಗ್ಧ ಮಂದಿಯನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಅಭಿವೃದ್ಧಿ ಅಥವಾ ಉದ್ಯಮ ಅಂದ ಮೇಲೆ ಒಂದಿಷ್ಟಾದರೂ ತೊಂದರೆ ಪರಿಸರಕ್ಕೆ ಇದ್ದೇ ಇರುತ್ತದೆ. ಇದಕ್ಕೇ ಭೂತಗನ್ನಡಿ ಹಿಡಿದು ಜನರನ್ನು ಹೌಹಾರಿಸುವ ಪರಿಸರ ವ್ಯಾಧಿಗಳಿಂದಾಗಿ ಇವತ್ತು ಉತ್ತರ ಕನ್ನಡ ಗರುಕೆಯೂ ಚಿಗುರದ ಬರಡು ಭೂಮಿಯಂತಾಗಿ ಹೋಗಿದೆ. ಸಾಧಕ-ಬಾಧಕ, ಲಾಭ-ನಷ್ಟದ ಕೂಲಂಕಷ ಲೆಕ್ಕಾಚಾರ ಹಾಕದೇ ಹಾನಿಯ ಹಾವು ಬಿಟ್ಟು ಭಯ ಮೂಡಿಸಿ ಪ್ರಗತಿಗೆ ಕಲ್ಲು ಹಾಕುವುದೇ ಪರಿಸರ ರಕ್ಷಕ ವೇಷಧಾರಿಗಳಿಗೆ ಕಸುಬಾಗಿಬಿಟ್ಟಿದೆ!

ಅನಾಹುತಕಾರಿ ಅಣುಸ್ಥಾವರ ಅಥವಾ ಕಲ್ಲಿದ್ದಲು ಸ್ಥಾವರ ಬೇಡ ಬಿಡಿ; ದೊಡ್ಡ ಹಾನಿಯೇನೂ ಮಾಡದ ಬಂದರು-ರೈಲು ಯೋಜನೆಯೂ ಬೇಡವೆಂದರೆ ಹೇಗೆ?! ಪರಿಸರ ಗುತ್ತಿಗೆ ಹಿಡಿದಿರುವ ಸೋಗಲಾಡಿಗಳು ಮಾತೆತ್ತಿದರೆ ಅರಣ್ಯ ಕಾಯ್ದೆ, ವೃಕ್ಷಸಂಕುಲ, ಜೀವ ವೈವಿಧ್ಯ, ಮುಂದಿನ ಪೀಳಿಗೆ ಎಂದು ಒಂದೇ ಉಸಿರಿಗೆ ಬೊಬ್ಬೆ ಹೊಡೆಯುತ್ತಾರೆ. ದುರಂತವೆಂದರೆ, ಈ ಪರಿಸರ ಹಾರಾಟಗಾರರೆಂದೂ ಮುಂದಿನ ಪೀಳಿಗೆಯ ಭವಿಷ್ಯದ ಬಗ್ಗೆ ಯೋಚಿಸಿದವರೇ ಅಲ್ಲ! ಜಿಲ್ಲೆಯಲ್ಲುಳಿದರೆ ಉದ್ಧಾರ ಆಗುವುದಿಲ್ಲವೆಂದು ತರುಣ-ತರುಣಿಯರು ಊರು ಬಿಡುತ್ತಿದ್ದರೂ ಇದು 'ಪರಿಸರ ಸಮಸ್ಯೆ' ಎಂದು ಈ ಪರಿಸರ ಸಂರಕ್ಷಕರಿಗೆ ಅನ್ನಿಸಿಲ್ಲ!!

ಪರಿಸರಕ್ಕಾಗಿ ಮಮ್ಮಲ ಮರಗುವ ಹುಸಿ ಹಸಿರುಕ್ರಾಂತಿಕಾರಿಗಳದು ಆಷಾಢಭೂತಿ ನೀತಿ. ಸುಮಾರು 690 ಎಕರೆ ಅರಣ್ಯ ಅಳಿಯುತ್ತದೆಂದು ಅಂಕೋಲಾ-ಹುಬ್ಬಳ್ಳಿ ರೈಲುಮಾರ್ಗಕ್ಕೆ ಅಡ್ಡಗಾಲು ಹಾಕುವ ಪರಿಸರವಾದಿಗಳು ರಾಷ್ಟ್ರೀಯ ಹೆದ್ದಾರಿ ಸಾವಿರಾರು ಎಕರೆ ಅರಣ್ಯ ಕಬಳಿಸುತ್ತ ಚತುಷ್ಪಥ ಆಗುತ್ತಿದ್ದರೂ ದೊಡ್ಡ ಧ್ವನಿಯಲ್ಲಿ ಮಾತಾಡುತ್ತಿಲ್ಲ. ಅಪ್ಪಿಕೋ ಚಳವಳಿಯ ಧೀರನೆಂದು ಪೋಸು ಕೊಡುವವರೆ ಹತ್ತಾರು ಎಕರೆ ಅರಣ್ಯ ಅತಿಕ್ರಮಿಸಿ ಅಡಿಕೆ-ತೋಟ ಮಾಡಿಕೊಂಡಿದ್ದಾರೆ. ಕೈಗಾ ಅಣುಸ್ಥಾವರದಿಂದ ಕ್ಯಾನ್ಸರ್ ಹಬ್ಬಿದೆ ಎನ್ನುವ ಈ ಓರಾಟಗಾರರು ಮ್ಯಾಂಗನೀಸ್ ಲಾರಿಗಳಿಂದ 15 ಸಾವಿರ ಜನ ಹೃದಯ ಸಂಬಂಧಿ ರೋಗ ಪೀಡಿತರಾದಾಗ ಬಾಯಿಯೇ ಬಿಡಲಿಲ್ಲ. ಶೇ. 80ರಷ್ಟಿದ್ದ ಅರಣ್ಯ ಅರ್ಧಕ್ಕಿಳಿದಿದೆ ಎಂದು ಹುಯಿಲೆಬ್ಬಿಸಿದವರು ಇದಕ್ಕೆ ಯೋಜನೆಗಳಿಗಿಂತ ಹೆಚ್ಚಾಗಿ ಕಳ್ಳ ರಾಜಕಾರಣಿ-ಅಧಿಕಾರಿ ಗ್ಯಾಂಗೇ ಕಾರಣ ಎಂಬುದನ್ನು ಬುದ್ಧಿಪೂರ್ವಕವಾಗೇ ಮುಚ್ಚಿಡುತ್ತಿದ್ದಾರೆ. ತಾಳಗುಪ್ಪ-ಹೊನ್ನಾವರ ರೈಲುಮಾರ್ಗಕ್ಕೆ ಕೇಂದ್ರ ಸರ್ಕಾರ ಒಪ್ಪಿದರೂ ಈ ಪರಿಸರಮಂದಿಗದು ಬೇಡ. 50 ಸಾವಿರ ಅರಣ್ಯ ಅತಿಕ್ರಮಣದಾರರು ಕಾನೂನಿನ ಸಂಕಟದಲ್ಲಿ ಬಿದ್ದು ಒದ್ದಾಡುತ್ತಿದ್ದರೂ ಇದು ಅವರಿಗೆ ಕಾಣಿಸುತ್ತಿಲ್ಲ...



ತದಡಿ ಮೀನುಗಾರಿಕಾ ಬಂದರು

ಪ್ರವಾಸೋದ್ಯಮವೂ ಇಲ್ಲ; ಬಂದರೋದ್ಯಮವೂ ಬೇಡ

ಮೂರ್ನಾಲು ದಶಕದಿಂದ ಪರಿಸರ ಕಾಪಾಡುವ ನೆಪದಿಂದ ಜಿಲ್ಲೆಗೆ ಬಂದ ಯೋಜನೆಗಳಿಗೆಲ್ಲ ತಡೆಯೊಡ್ಡಲಾಗಿದೆ. ಹೀಗಾಗಿ ಬಂದ ಯೋಜನೆಗಳ ಲಾಭ ಜನರಿಗೆ ಸಿಗಲಿಲ್ಲ; ಜನರಿಗೆ ಬೇಕಾದ ಯೋಜನೆಗಳೂ ಬರಲಿಲ್ಲ. ಪರಿಹಾರ ಕಾರ್ಯಕ್ರಮಂತೂ ದಿಕ್ಕು-ದೆಸೆಯೇ ಇಲ್ಲದಂತಾಗಿ ಹೋಯ್ತು. ಜಿಲ್ಲಾಭಿವೃದ್ಧಿಯ ನೀಲನಕ್ಷೆ ಸ್ಥಳೀಯ ಆಡಳಿತಗಾರ ದೇಶಪಾಂಡೆ, ಎಂಪಿ ಅನಂತ್ಕುಮಾರ್‌ಯಾದಿಯಾಗಿ ಯಾರಲ್ಲೂ ಇಲ್ಲ. ಪರಿಸರವಾದಿಗಳಿಗೆ ಉದ್ಯೋಗ ಕೊಡುವ ಉದ್ಯಮಗಳ ಯಾವ ಕಲ್ಪನೆಯೂ ಇಲ್ಲ. ಕಾಟಾಚಾರಕ್ಕೆ ದೊಡ್ಡ-ದೊಡ್ಡ ಭಾಷಣ ಬಿಗಿಯುವ ಈ ಪರಿಸರ ಪರಾಕ್ರಮಿಗಳಿಗೆ ಸುಸ್ಥಿರ ಅಭಿವೃದ್ಧಿಗೆ ಒತ್ತಾಯಿಸುವ ತಾಕತ್ತಿಲ್ಲ. ಅಂಥದೊಂದು ದೂರದೃಷ್ಟಿಯ ಪ್ಲಾನೂ ಈ ಭೂಪರ ಬುರುಡೆಗೆ ಹೊಳೆದಿದ್ದಲ್ಲ ಅಥವಾ ಆ ದಿಸೆಯಲ್ಲಿ ಪ್ರಯತ್ನ ಮಾಡಿದ್ದೂ ಇಲ್ಲ.


ಇದೊಂದು ನತದೃಷ್ಟ ಜಿಲ್ಲೆ. ನಿಜಲಿಂಗಪ್ಪರ ಕಾಲದಲ್ಲಿ ಅಥವಾ ಬ್ರಿಟಿಷರ ಯುಗದಲ್ಲಿ ಆದಂಥ ರಸ್ತೆ-ಸಂಕ-ಬ್ರಿಡ್ಜ್‌ಗಳು ಈಗ ಕುಸಿಯುತ್ತಿವೆ. ಮುಂದೇನು ಎಂಬ ಕಾರ್ಯಸೂಚಿ ಮಂತ್ರಿ ದೇಶಪಾಂಡೆ ಅಥವಾ ಎಂಪಿ ಅನಂತ್ಕುಮಾರ್, ಕಾಗೇರಿ ಮಾಣಿಗಳಲ್ಲಿ ಇಲ್ಲ. ಈ ಅನಾಹುತದ ಸಣ್ಣ ಕಲ್ಪನೆಯೂ ಈ ಜಿಲ್ಲಾ ಪ್ರತಿನಿಧಿಗಳಿಗಿಲ್ಲ. ಪರಿಸರವಾದಿಗಳ ಜತೆ ಗುರುತಿಸಿಕೊಂಡು ಓಟ್‌ಬ್ಯಾಂಕ್ ರಾಜಕಾರಣ ಮಾಡುವ ಕಾಗೇರಿ-ಅನಂತ್ಕುಮಾರ್ ವಗೈರೆ ಚಡ್ಡಿ ಬಳಗ ಕಾಡಿಗೆ ಹೋಗಿ ಉಪ್ಪಾಗೆ ಹಣ್ಣು, ಅಟ್ಟಕಾಯಿ, ಮುರುಗಲ ಹಣ್ಣು, ಜೇನುತುಪ್ಪ ತನ್ನಿರಿ; ಅರಗ ಬೆಳೆಸಿರಿ-ಕಾಡು ಉಳಿಸಿರಿ ಎಂದು ಹೇಳುತ್ತಾರೆ. ಇವರ ಚಿಂತನಾಮಟ್ಟ ಕಾಡಿನಿಂದ ಇವತ್ತಿಗೂ ಹೊರಬಂದಿಲ್ಲ. ನಾಡು ಕಟ್ಟುವ ಬುದ್ಧಿ ಬರುವ ಲಕ್ಷಣವೂ ಕಾಣಿಸುತ್ತಿಲ್ಲ.

ಪಕ್ಕದ ಗೋವಾ ರಾಜ್ಯ ವಿಸ್ತೀರ್ಣದಲ್ಲಿ ಉತ್ತರ ಕನ್ನಡದ ಅರ್ಧದಷ್ಟೂ ಇಲ್ಲ. ಆದರೂ ಅಲ್ಲಿರುವ ಮೂರೇ ಮೂರು ಬೀಚ್‌ಗಳಲ್ಲಿ ಕೋಟ್ಯಂತರ ರೂ.ಗಳ ಪ್ರವಾಸೋದ್ಯಮ ಬೆಳೆದಿದೆ. ಜಿಲ್ಲೆಯಲ್ಲಿ 12 ಬೀಚ್‌ಗಳಿವೆ; ಪ್ರಕೃತಿ ರಮ[...] ಜಲಪಾತ-ಕಣಿವೆಗಳಿವೆ. ಗೋವಾಕ್ಕೆ ಬರುವ ಶೇ.1[...] ಪ್ರವಾಸಿಗರೂ ಇಲ್ಲಿಗೆ ಬರುತ್ತಿಲ್ಲ. ಬರುವುದಕ್ಕೆ ಇಲ್ಲಿ ರೈಲು[...] ವಿಮಾನಗಳು ಇಲ್ಲ. ಕಾರವಾರ-ಶಿರಸಿಗೆ ಸರಿಯಾದ ರೈಲುಸಂಪರ್ಕ ಬೆಂಗಳೂರು ಮತ್ತಿತರೆಡೆಯಿಂದ ಇದ್ದಿದ್ದ[...] ಪ್ರವಾಸೋದ್ಯಮ ಬೆಳೆಯುತ್ತಿತ್ತು. ಗೋವಾ ರಾಜಕೀಯ ಇಚ್ಛಾಶಕ್ತಿಯಿಂದ ಜಬರ್ದಸ್ತಾಗಿ ಪ್ರವಾಸೋದ್ಯಮ ಬೆಳೆಸಿಕೊಂಡಿದೆ. ಉತ್ತರ ಕನ್ನಡ ದಂಡಪಿಂಡ ಮಂತ್ರಿ[...] ಎಂಪಿ-ಎಮ್ಮೆಲ್ಲೆಗಳಿಂದಾಗಿ ಶತಮಾನಗಳಷ್ಟು ಹಿಂದುಳಿದಿದೆ. ಇಲ್ಲಿಯ ರಾಜಕಾರಣಿಗಳ ತಲೆಯಲ್ಲಿ ಮೆದುಳೆಂಬುದು ಇದ್ದಿದ್ದರೆ ಗೋವಾಕ್ಕೆ ಹತ್ತು ಪಟ್ಟು ದೊಡ್ಡದಾಗಿ ಪ್ರವಾಸೋದ್ಯಮ ಉತ್ತರ ಕನ್ನಡದಲ್ಲಿ ಬೆಳೆಯುತ್ತಿತ್ತು.


ಹೋಗಲಿ; ಬಂದರೋದ್ಯಮದ ಕಡೆಗಾದರೂ ಆಳುವವರು ಗಮನ ಹರಿಸಿದ್ದಾರಾ ಎಂದರೆ ಅದೂ ಇಲ್ಲ. ಜಿಲ್ಲೆಯಲ್ಲಿ ಬಂದರು ವ್ಯವಹಾರಕ್ಕೆ ವಿಪುಲ ಅವಕಾಶಗಳಿತ್ತು. ಜಿಲ್ಲೆಯ 140 ಕಿ.ಮೀ ಉದ್ದದ ಕರಾವಳಿಯಲ್ಲಿ ದೊಡ್ಡ ಮಟ್ಟದಲ್ಲಿ ಉದ್ಯೋಗ ಕೊಡುವ ಒಂದೇ ಒಂದು ಬಂದರಿಲ್ಲ. 100 ಕಿ.ಮೀ ಸಮುದ್ರ ಮೀನುಗಾರಿಕೆಗೆ ಮೀಸಲಿಟ್ಟರೂ ಇನ್ನುಳಿದ 40 ಕಿ.ಮೀ ಕರಾವಳಿಯಲ್ಲಿ ನಾಲ್ಕು ದೊಡ್ಡ ಸರ್ವಋತು ಬಂದರು ಸ್ಥಾಪಿಸಬಹುದಿತ್ತು. ಈ ಬೃಹತ್ ಬಂದರು ಬಂದರೆ ಮೀನುಗಾರಿಕೆಗೆ ತೊಂದರೆ ಎಂದು ಪರಿಸರವಾದಿಗಳು ಕೂಗಾಡುತ್ತಾರೆ. ಬಡಬೆಸ್ತ[...] ಎತ್ತಿಕಟ್ಟಿ ಹೀರೋ ಆಗುತ್ತಾರೆ. ಮುಂಬೈ, ಗುಜರಾತ್ ಮಂಗಳೂರಲ್ಲಿರುವ ಸರ್ವಋತು ಬಂದರಿನ ಬಳಿಯೇ ಬೆಸ್ತರು ಮೀನುಗಾರಿಕೆ ವ್ಯವಸ್ಥಿತವಾಗಿ ನಡೆಸಿಕೊಂಡಿದ್ದಾರೆ. ಇಲ್ಲೆಲ್ಲ ಬೃಹತ್ ಬಂದರಿಲ್ಲದ ಉತ್ತರ ಕನ್ನಡಕ್ಕಿಂತ ಸಮೃದ್ಧವಾಗಿ ಮೀನುಗಾರಿಕೆ ಮಾಡಲಾಗುತ್ತಿದೆ.

ತದಡಿ ಬಂದರು

ಉತ್ತರ ಕನ್ನಡದ ಕರಾವಳಿಗುಂಟ ಸುಮಾರು ಒಂದು ಡಜನ್ ಬಂದರುಗಳಿವೆ. ಆದರೆ ಒಂದರಲ್ಲೂ ಸಾವಿರ[...] ಜನರಿಗೆ ಬದುಕು ಕೊಡುವ ಉದ್ಯಮವಿಲ್ಲ. ಜಿಲ್ಲೆಯ[...] ಬಂದರು ಅಭಿವೃದ್ಧಿಯ ಬಗ್ಗೆ ಕಳೆದ ನಾಲ್ಕೈದು ವರ್ಷದಿಂದ ಸುದ್ದಿಗಳು ಹರಿದಾಡುತ್ತಲೇ ಇತ್ತು. ಲಕ್ಷ ಸಾವಿರ ಕೋಟಿಯ ಯೋಜನೆಗಳು ಕೇಳಿಬಂದಿದ್ದವು. ಆದರೆ ಈಗ ರಾಜ[...] ಸರ್ಕಾರ ಕುಮಟಾದ ತದಡಿ ಮತ್ತು ಹೊನ್ನಾವರದ ಮಂ[...] ಎಂಬಲ್ಲಿ ಎರಡು ದೊಡ್ಡ ಸರ್ವಋತು ಬಂದರು ಸ್ಥಾಪಿಸಲು ಸಿದ್ಧವಾಗಿದೆ. ತದಡಿಯಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ದೊ[...] ಬಂದರು ಕಟ್ಟಿದರೆ, ಮಂಕಿಯಲ್ಲಿ ಬೆಳಗಾವಿಯ ರೇಣುಕಾ ಶುಗರ್ಸ್‌ನವರು ಸಣ್ಣ ಬಂದರು ನಿರ್ಮಾಣ ಮಾಡಿಕೊಂಡು[...]




ಅಘನಾಶಿನಿ-ಅರಬ್ಬೀ ಸಮುದ್ರ ಸಂಗಮದ ಬಂದರು ನಿರ್ಮಾಣದ ಉಪಗ್ರಹ ಚಿತ್ರ



ಉದ್ದೇಶಿತ ನೈಸರ್ಗಿಕ ಬಂದರು

ಬಂದರಿನ ಭಯ ಯಾರಿಗೆ?

ಕುಮಟಾದ ತದಡಿಯ ಅಘನಾಶಿನಿ-ಅರಬ್ಬೀ ಸಮುದ್ರದ ಸಂಗಮ ಪ್ರದೇಶದಲ್ಲಿ 38 ಸಾವಿರ ಲಕ್ಷದ ಬೃಹತ್ ನೈಸರ್ಗಿಕ ವಾಣಿಜ್ಯ ಬಂದರು ಬಂದರೆ ಲಾಭ ಯಾರಿಗೆ? ನಷ್ಟ ಯಾರಿಗೆ? ಇಂಥದೊಂದು ಜಿಜ್ಞಾಸೆ ಈಗ ನಡೆದಿದೆ. ಪರಿಸರ ವ್ಯಾಧಿಗಳು ಹೇಳುವಷ್ಟು ದೊಡ್ಡ ಕಷ್ಟ-ನಷ್ಟ ಈ ಯೋಜನೆಯಿಂದೇನೂ ಇಲ್ಲವೆಂಬುದು ಜನರಿಗೆ ಅರ್ಥವಾಗುತ್ತಿದೆ. ಪರಿಸರಕ್ಕೆ- ಬದಲಾಗುವ ಜನಜೀವನಕ್ಕೆ ಒಂದಿಷ್ಟು ತೊಂದರೆ ಆದರೂ ಯೋಜನೆಯಿಂದ ಅದಕ್ಕಿಂತ ದೊಡ್ಡ ಅನುಕೂಲ ಆಗಲಿದೆ.




ಕೆಐಎಡಿಬಿ ವಶದಲ್ಲಿರುವುದು ಪಾಳು ಬಿದ್ದ ಭೂಮಿ. ಜನರಿಂದ ಪಡೆದುಕೊಳ್ಳುವ ಭೂಮಿಯೂ ಬಹುತೇಕ ಬಂಜರು. ಉಪ್ಪು ನೀರಿನ ಹಾವಳಿಯಿಂದ ಬೆಳೆ ತೆಗೆಯುವುದೇ ಇಲ್ಲಿ ಕಷ್ಟವಾಗಿದೆ. ತದಡಿಯ 10 ಕಿ.ಮೀ ಪರಿಧಿಯಲ್ಲಿ ಶೇ. 28ರಷ್ಟು ಅರಣ್ಯ ಭೂಮಿಯಿದೆ. ಇದರಲ್ಲಿ ಮರಗಳೇ ಇಲ್ಲ. ಶೇ. 33 ಪಾಳುಬಿದ್ದ ಜಾಗ. ಶೇ. 8ರಷ್ಟು ಮಾತ್ರ ನೀರಾವರಿ ಜಮೀನು. 13,100 ಕುಟುಂಬಗಳಿವೆ. ಜನಸಂಖ್ಯೆ 68,390. ಶೇ. 30ರಷ್ಟು ಕೂಲಿ ಕಾರ್ಮಿಕರಿದ್ದಾರೆ. ಇಂಥ ಕಡೆ [illegible] ಅಭಿವೃದ್ಧಿ ಶಕೆ ಆರಂಭವಾಗದೇ? ಹೀಗಾಗಿ ಸ್ಥಳೀಯರಲ್ಲಿ ಬಹುತೇಕ ಜನರು ಆಗುವ ಸಣ್ಣ-ಪುಟ್ಟ ಹಾನಿ ಎದುರಿಸಿ ಯೋಜನೆಗೆ ಬೆಂಬಲವಾಗಿ ನಿಲ್ಲಲು ಮುಂದಾಗಿದ್ದಾರೆ.

ಯೋಜನೆಯ ಭಯವಿರುವುದು ಕಳ್ಳ ಚಿಪ್ಪಿ ಉದ್ಯಮಿಗಳಿಗೆ ಮತ್ತು ಬಾರ್‌ಲ್ಯಾಂಡ್ ಒಡೆದು ಮೀನು ದೋಚುವ ಗೂಂಡಾಗಳಿಗೆ; ಲೈಸನ್ಸ್ ಇಲ್ಲದೆ ಬೇಕಾಬಿಟ್ಟಿಯಾಗಿ ಹಗಲಿರುಳು ಚಿಪ್ಪಿ ಬಗೆದು ಲೂಟಿ ಮಾಡುತ್ತಿರುವ ಚೋರರಿಗೆ. ತದಡಿಯಲ್ಲಿ ಬಂದರಾದರೆ ತಮ್ಮ ಸಾಮ್ರಾಜ್ಯ ಪತನವಾಗುವ ಭೀತಿ ಕಾಡುತ್ತಿದೆ. ಹೀಗಾಗಿ ನಕಲಿ ಪರಿಸರವಾದಿಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ. ಹಾರಾಟಕ್ಕೆ ಹಣ ಹರಿಸುತ್ತಿದ್ದಾರೆ. ಹಿಂದೆ ತದಡಿ ಭಾಗದಲ್ಲಿ ನಡೆದ ಪರಿಸರ ಹೋರಾಟದ ಸ್ಫೂರ್ತಿಯೂ ಇದೇ ಚಿಪ್ಪಿ ಮಾಫಿಯಾದ ಪಾಪದ ಪೈಸಾ!!

ಈ ಮಾಫಿಯಾಕ್ಕೆ ಬೆಂಬಲವಾಗಿ ನಿಂತವರು ರಾಮಚಂದ್ರಾಪುರ ಮಠದ ಕಪಟ ಸನ್ಯಾಸಿ ರಾಘು. ವಾಮಮಾರ್ಗದಿಂದ ಗೋಕರ್ಣ ದೇಗುಲ ಕಬಳಿಸಿ ಸ್ಥಳೀಯ ಬ್ರಾಹ್ಮಣರ ಎದುರು ಹಾಕಿಕೊಂಡಿರುವ ರಾಘುಗೆ ಈ ರೌಡಿಗಳ ರಕ್ಷಣೆ ಇಲ್ಲದಿದ್ದರೆ ಬದುಕು ಕಷ್ಟ.

ಮ್ಮ ಆಯಾತ-ನಿರ್ಯಾತ ಉದ್ಯಮ ನಡೆಸಲು ಸ್ಕೆಚ್ ಹಾಕಿದ್ದಾರೆ.


ತದಡಿ ಸರ್ವಋತು ಬಂದರಿನ ಅಂದಾಜು ವೆಚ್ಚ ಬರೋಬ್ಬರಿ 38 ಸಾವಿರ ಕೋಟಿ ರೂಪಾಯಿಗಳು! ತದಡಿಯ ಅರಬ್ಬೀ ಸಮುದ್ರ ಮತ್ತು ಅಘನಾಶಿನಿ ನದಿ ಸಂಗಮ ವ್ಯಾಪ್ತಿಯಲ್ಲಿ ಈ ನೈಸರ್ಗಿಕ ಬಂದರು ನಿರ್ಮಾಣವಾಗುತ್ತದೆ. ಅಘನಾಶಿನಿ ನದಿಯ ಹಿನ್ನೀರು ವಿಶಾಲವಾದ ಮುಖಜ ಭೂಮಿ ಹೊಂದಿದ್ದು ಇದರಲ್ಲಿ 1416 ಎಕರೆ ಪ್ರದೇಶವನ್ನು 1970ರಲ್ಲೇ ಕೆಐಎಡಿಬಿ ವಶಪಡಿಸಿಕೊಂಡಿದೆ. ಈ ಭೂಮಿಗೆ ದೊಡ್ಡ ದುರಂತ ಇತಿಹಾಸವೇ ಇದೆ. ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ತಮ್ಮ ನಾಯಕಿ ಇಂದಿರಾ ಗಾಂಧಿಗೆ ಆತ್ಮೀಯರಾಗಿದ್ದ ಉದ್ಯಮಿ ಥಾಪರ್‌ನ ಸಂಪ್ರೀತಗೊಳಿಸಲೆಂದು ತದಡಿಯ ಸುತ್ತಲಿನ ಹಿತ್ತಲಮಕ್ಕಿ, ಅಗ್ಗೆಮಡಿ, ಮಿದ್ದಗಜನಿ, ಹಿರೇಗುತ್ತಿ, ಮೊರಬಾ, ತೊರಕೆ ಗ್ರಾಮದ ನಾಲ್ಕು ಸಾವಿರ ರೈತರ ಭೂಮಿ ಸ್ವಾಧೀನಪಡಿಸಿಕೊಂಡು ಆತನಿಗೆ ಬಳುವಳಿಯಾಗಿ ನೀಡಿದ್ದರು. ಆಗ ರೈತರು ಅಂದಿನ ಲೋಕಸಭಾ ಸದಸ್ಯ ಬಿ.ವಿ. ನಾಯಕರ



ಅನಂತಕುಮಾರ ಹೆಗಡೆ-ಎಂ.ಪಿ.



ಶಾರದಾ ಶೆಟ್ಟಿ - ಶಾಸಕಿ ಕುಮಟಾ



ಆರ್.ವಿ. ದೇಶಪಾಂಡೆ

ಮುಂದಾಳತ್ವದಲ್ಲಿ ಹಣಾಹಣಿ ಹೋರಾಟವೇ ನಡೆಸಿದ್ದರು. ರೈತರನ್ನು ಎಳೆದು ಹೊರಹಾಕಿ ಒಂದಿಷ್ಟು ಪರಿಹಾರ ಎಸೆಯಲಾಗಿತ್ತು. ರೈತರ ಭೂಮಿ ಕಸಿದುಕೊಳ್ಳದಂತೆ ರೈತರ ಪರವೇ ಕಚ್ಚೆಯುಟ್ಟುಕೊಂಡೇ ಬಿ.ವಿ. ನಾಯ್ಕ ಪಾರ್ಲಿಮೆಂಟಲ್ಲಿ ಎಗರಾಡಿದ್ದರು. ಆದರೆ ಆತನ ರೈತಪರ ಹೋರಾಟ ಪ್ರಭುತ್ವದ ಪಾತಕದೆದುರು ಸೋತಿತು!

ಮಜಾ ಎಂದರೆ, ಈ ಭೂಮಿ ಥಾಪರ್‌ಗೆ ಹೊರೆಯಾಗಿತ್ತು. ಥಾಪರ್‌ಗೆ ಕಾರವಾರದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಬೇಕಾದ ಉಪ್ಪು ಈ 1416 ಎಕರೆ ಭೂಮಿಯಲ್ಲಿ ಉತ್ಪಾದಿಸಲು ಆತನಿಂದ ಆಗಲಿಲ್ಲ. ಇದಕ್ಕಿಂತಲೂ ಗುಜರಾತ್‌ನಿಂದ ಉಪ್ಪು ತರುವುದೇ ಈ ಧನಾಕೋರ ಉದ್ಯಮಿಗೆ ಲಾಭದಾಯಕವಾಗಿತ್ತು. ಕ್ರಮೇಣ ಸದ್ರಿ ಭೂಮಿಯೂ ತನಗೆ ಬೇಡವೆಂದು ಥಾಪರ್ ಕೆಐಎಡಿಬಿಗೆ ವಾಪಸ್ ಮಾಡಿದ. ಹಲವು ವರ್ಷ ಸರ್ಕಾರದ ಬಳಿಯಲ್ಲೇ ಕೊಳೆತ ಈ ಭೂಮಿ ಮರಳಿ ಪಡೆಯಲು ರೈತರು ಪ್ರಯತ್ನಿಸುತ್ತಲೇ ಇದ್ದರು. ಕೆಲವು ವರ್ಷದ ಹಿಂದೆ ಈ ಭೂಮಿಯಲ್ಲಿ ಹಡಗು ಒಡೆಯುವ ಉದ್ಯಮ ಬರುವ ಸುದ್ದಿಯಾಗಿತ್ತು. ಆ ನಂತರ ಕಲ್ಲಿದ್ದಲು ಸ್ಥಾವರ ಬರುತ್ತದೆಂದಾಯ್ತು. ಮಾಜಿ ಸಂಸದೆ ಮಾರ್ಗರೆಟ್ ಆಳ್ವಾಗೆ ಇದು ಜನರ ಜೀವಕ್ಕೆ ಮಾರಕ ಎಂದು ತಡೆಯೊಡ್ಡಿದರು. ಆನಂತರ ಅನಿಲ ಸ್ಥಾವರ ಬರುತ್ತದೆಂದಾಗಿತ್ತು. ಅದೂ ಬರಲಿಲ್ಲ. ಇದೆಲ್ಲಕ್ಕಿಂತ ಮೊದಲು ದಗಲುಬಾಜಿ ಉದ್ಯಮಿ ಆರ್.ಎನ್.ಶೆಟ್ಟಿಗೆ ಎಕರೆಗೆ 1 ರೂ. ಲೀಸ್ ಮೇಲೆ ಸಿಗಡಿ ಬೆಳೆಯಲು ಕೊಡಲು ಕೆಐಎಡಿಬಿ ನಿರ್ಧರಿಸಿತ್ತು. ಜನ ತಿರುಗಿ ಬಿದ್ದರು. ಇದರಿಂದ ಸರ್ಕಾರಕ್ಕಾಗುತ್ತಿದ್ದ ವಂಚನೆ-ಹಾನಿ ತಪ್ಪಿತು.

ಈಗ ಅದೇ 1416 ಎಕರೆ ಪ್ರದೇಶದಲ್ಲಿ ನೈಸರ್ಗಿಕ ಬಂದರು ಕಟ್ಟಲು ಕೆಐಎಡಿಬಿ ನೀಲನಕ್ಷೆ ಸಿದ್ಧ ಮಾಡಿಕೊಂಡು ಚಟುವಟಿಕೆ ಶುರು ಹಚ್ಚಿಕೊಂಡಿದೆ. ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ ಆಧಾರದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಬಂದರು ನಿರ್ಮಾಣವಾಗುತ್ತಿದೆ. ಮುಖ್ಯವಾಗಿ ಬಳ್ಳಾರಿ ಕಡೆಯ ಕಬ್ಬಿಣದ ಅದಿರು ಮತ್ತು ಅಪಾರ ಸರಕು ಸಾಗಾಣಿಕೆಯ ಉದ್ದೇಶ ಈ ಬಂದರಿನದು. ಪ್ರತಿದಿನ 4,000ದಿಂದ 12,000 ಲಾರಿ ಲೋಡ್ ಆಗಮನ-ನಿರ್ಗಮನ ಗುರಿ ಇಡಲಾಗಿದೆ. ರಾಷ್ಟ್ರೀಯ ಹೆದ್ದಾರಿ 66 ಚತುಷ್ಪಥವಾಗುವುದು, ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣ ಮತ್ತು ಪ್ರತ್ಯೇಕ ರೈಲು ಮಾರ್ಗ ಕುಮಟಾ ರೈಲು ನಿಲ್ದಾಣದಿಂದ ನಿರ್ಮಿಸುವುದು ಈ ಯೋಜನೆಯಲ್ಲಿ ಲೆಕ್ಕ ಹಾಕಲಾಗಿದೆ. 2015-16ರಿಂದಲೇ 2.87 ದಶಲಕ್ಷ ಟನ್ ಸರಕು ಸಾಗಾಟದಿಂದ 2040-41ರಲ್ಲಿ 62.36 ದಶಲಕ್ಷ ಟನ್‌ಗೆ ವೃದ್ಧಿಯಾಗುವ ಯೋಜನೆ ಹಾಕಲಾಗಿದೆ. ಈ ಬಂದರು ಏಳು ಬರ್ಥ್‌ಗಳನ್ನು ಹೊಂದಿದ್ದು ಕಬ್ಬಿಣದ ಅದಿರು, ಕಲ್ಲಿದ್ದಲು, ಉಕ್ಕು ಉತ್ಪನ್ನ ಮತ್ತು ಸಾಮಾನ್ಯ ಸರಕುಗಳಿಗೆ ಇವು ಹಂಚಿಕೆಯಾಗಲಿವೆ. ಇದಕ್ಕೆಲ್ಲ ಕೆಐಎಡಿಬಿ ವಶಪಡಿಸಿಕೊಂಡ ಜಾಗವೇ ಸಾಕು.

ಪರಿಸರಿಗಳ ಅಪಸ್ವರ

ಜಿಲ್ಲೆಯ ಸುಪ್ರಸಿದ್ಧ ಪರಿಸರವಾದಿಗಳು ಮತ್ತದೇ ಹಳೆಯ ಆಲಾಪ ಶುರು ಹಚ್ಚಿಕೊಂಡಿದ್ದಾರೆ. ದ್ವಂದ್ವ ಧೋರಣೆಯ ಅನಂತ ಹೆಗಡೆ ಆಶೀಸರ 'ಜಾಗೃತಿಗೆ' ತನ್ನ ತಂಡದೊಂದಿಗೆ ತದಡಿಗೆ ಲಗ್ಗೆ ಇಡುತ್ತಿದ್ದಾನೆ. ಅನುಕೂಲ ಸಿಂಧುತ್ವವನ್ನೇ ಸಿದ್ಧಾಂತ ಮಾಡಿಕೊಂಡಿರುವ ಈತ ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷನಾಗಿ ಬಿಜೆಪಿ ಪರ್ವದಲ್ಲಿ ತಿಂದುಂಡು ಸುಖಿಸಿದಾತ. ಈತನೇ ಅರಣ್ಯ ಅತಿಕ್ರಮಿಸಿ ತೋಟ ಮಾಡಿದ್ದಾನೆ. ಇಂಥ ಆಶೀಸರ ತದಡಿಗೆ ಬಂದರು ಬಂದರೆ ತೊಂದರೆ ಖಂಡಿತ ಎಂದು ಬೋಂಗು ಭಾಷಣ ಬಿಡುತ್ತಿದ್ದಾನೆ. ಈತನ ಜೊತೆಗಿರುವ ವಿ.ಎನ್. ನಾಯಕ್‌ರಂಥ "ಪರಿಸರ ತಜ್ಞ"ರು ತದಡಿಯಲ್ಲಿ ನೈಸರ್ಗಿಕ ಬಂದರು ಕಟ್ಟಿದರೆ ಜಲಮಾಲಿನ್ಯದಿಂದ ಮೀನುಗಾರಿಕೆ, ಒಳಚು, ಉಪ್ಪು, ಚಿಪ್ಪಿ ಮುಂತಾದ ನೈಸರ್ಗಿಕ ಕೊಡುಗೆಗಳಿಗೆ ಆಘಾತವಾಗಲಿವೆ ಎಂದು ಹೇಳುತ್ತಿದ್ದಾರೆ. ಆಶೀಸರ ಮಾಣಿ ತನ್ನ ಸಾಂಪ್ರದಾಯಿಕ ಬೆದರಿಕೆಯ ಮಾತುಗಾರಿಕೆಯಿಂದ ಜನರ ಕಂಗೆಡಿಸುತ್ತಿದ್ದಾನೆ. ಟ್ರಾಫಿಕ್ ಹೆಚ್ಚಾಗುತ್ತದೆ, ಸಾಂಪ್ರದಾಯಿಕ ಜೀವನ ಹಾಳಾಗುತ್ತದೆ, ಸಾಂಪ್ರದಾಯಿಕ ಮೀನುಗಾರಿಕೆ ನಶಿಸುತ್ತದೆ, ದೊಂಬಿ-ಗಲಾಟೆ ಆಗುತ್ತದೆ.... ಇಂಥದೇ ನೆಪಗಳನ್ನು ಭಯಾನಕವಾಗಿ ಬಣ್ಣಿಸಿ ಪರಿಸರ ರಕ್ಷಕನಾಗಲು ನಾಟಕವಾಡುತ್ತಿದ್ದಾನೆ. ಕಡ್ಡಿಯನ್ನು ಗುಡ್ಡ ಮಾಡಿ ತೋರಿಸುತ್ತಿರುವ ಪರಿಸರ ಪ್ರೇಮಿಗಳಿಗೆ ಆಗುವ ಹಾನಿಗಿಂತ ಲಾಭವೇ ಹೆಚ್ಚೆಂಬುದು ಗೊತ್ತಿದ್ದರೂ ಗೊತ್ತಿಲ್ಲದಂತೆ ನಟಿಸುತ್ತಿದ್ದಾರೆ.

ಮಂಗಳಾರತಿ ಮಾಡುತ್ತಿದ್ದಾರೆ

ಪ್ರತಿಯೊಂದು ಯೋಜನೆಗೂ ಪರಿಸರ ಸಂರಕ್ಷಿಸುವ ನೆಪದಲ್ಲಿ ತೊಂದರೆ ಕೊಡುತ್ತಿರುವ ನಕಲಿ ಪರಿಸರವಾದಿಗಳಿಂದಾಗಿಯೇ ಜಿಲ್ಲೆ ಶತಮಾನದಷ್ಟು ಹಿಂದುಳಿದಿದೆ ಎಂಬ ಭಾವನೆ ಈಗ ಜನರಲ್ಲಿ ಮೂಡುತ್ತಿದೆ. ವಾಸ್ತವ ಅರ್ಥವಾಗುತ್ತಿದೆ. ಅಭಿವೃದ್ಧಿಗೆ ಜಿಲ್ಲೆಯ ಜನರೀಗ ತುಡಿಯುತ್ತಿದ್ದಾರೆ. ಜಿಲ್ಲೆಯ ಆಚೀಚೆಯ ಪ್ರಗತಿಗೆ ಪರಿಸರ ಅಡ್ಡಿಬಂದಿಲ್ಲ ಮತ್ತು ಅಲ್ಲೇನೂ ದೊಡ್ಡ ಪರಿಸರ ಸಮಸ್ಯೆ ಉದ್ಭವಿಸಿಲ್ಲ ಎಂಬುದು ಅರಿವಾಗುತ್ತಿದೆ. ಹೀಗಾಗಿ ಈ ಬಾರಿ ಅನಂತ ಆಶೀಸರ್ ಅಂಡ್ ಕೋಗೆ ಹೋದಲ್ಲೆಲ್ಲ ಮಂಗಳಾರತಿ ಎದುರಾಗುತ್ತಿದೆ. "ಪರಿಸರ ಜಾಗೃತಿ" ಮಾಡಲು ಹೋದವರಿಗೆ "ಜಾಗ್ರತೆ" ಎಂಬ ಸಂದೇಶ ಸಿಕ್ಕಿದೆ!!

ಪರಿಸರ ಜಾಗೃತಿಗೆ ಹೋದವರ ಹಿಂದೆ ಚಿಪ್ಪಿ ಉದ್ಯಮದ ಲಾಬಿ ಇರುವುದು ಈಗ ನಿಸ್ಸಂಶಯವಾಗಿ ಸಾಬೀತಾಗಿದೆ. ತದಡಿ ಸೀಮೆಯ ಅಘನಾಶಿನಿ ನದಿಯಿಂದ ಪ್ರತಿದಿನ ನೂರಾರು ಲೋಡ್ ಚಿಪ್ಪಿ ತೆಗೆದು ಸಾಗಿಸುವ ಗೂಂಡಾ ಗ್ಯಾಂಗ್ ಒಂದಿದೆ. ಇದು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಸಾರಿಗೆ ಇಲಾಖೆ, ಜಿಲ್ಲಾಡಳಿತಕ್ಕೆಲ್ಲ ಉಂಡೆನಾಮ ತಿಕ್ಕಿ ಹಗಲು ಲೂಟಿ ಮಾಡುತ್ತಿದೆ. ಖೋಟಾ ಪರ್ಮಿಟ್‌ಗಳ ಮೇಲೆ ಬೇಕೆಂದಲೆಲ್ಲ ಬೇಕಾಬಿಟ್ಟಿಯಾಗಿ ಚಿಪ್ಪಿ ತೆಗೆದು ಕೋಟ್ಯಂತರ ರೂಪಾಯಿ ಸರ್ಕಾರಕ್ಕೆ ವಂಚಿಸುತ್ತಿದೆ. ಈ "ಚಿಪ್ಪಿ ಲಾಬಿ"ಗೆ ತದಡಿ ಏರಿಯಾದಲ್ಲಿ ಯಾವ ಉದ್ಯಮವೂ ಬರುವುದು ಬೇಡ. ರಂಗೀಲಾ ರಾಘು ಸ್ವಾಮಿಯ ರಾಜಕೀಯ ಪ್ರಭಾವ ಬಳಸಿ ಆತನಿಗೆ ತಮ್ಮ ತೋಳ್ಬಲದ ಸೆಕ್ಯುರಿಟಿ ಕೊಟ್ಟು ಕಳ್ಳ ಚಿಪ್ಪಿ ಉದ್ಯಮ ನಡೆಸುತ್ತಿರುವ ಈ ಖದೀಮರು ಪರಿಸರವ್ಯಾಧಿಗಳನ್ನು ಛೂ ಬಿಟ್ಟಿದ್ದಾರೆಂಬುದು ಸಾಮಾನ್ಯ ಸಾರ್ವತ್ರಿಕ ಅಭಿಪ್ರಾಯ. ಜಿಲ್ಲಾ ಪಂಚಾಯತ್ ಸದಸ್ಯ ಪ್ರದೀಪ್ ನಾಯಕ್‌ನಂಥ ಚಿಪ್ಪಿ ಉದ್ಯಮಿಗಳು ತದಡಿ ಸರ್ವಋತು ಬಂದರು ಬರುವುದು ಬೇಡ ಎಂದು ಹೇಳೋದು ಬಡ ಚಿಪ್ಪಿ ಕಾರ್ಮಿಕರಿಗಾಗಿ ಅಲ್ಲ; ತಮ್ಮ ದರೋಡೆಗೆಷ್ಟೇ!!

ಗೋಕರ್ಣ, ತದಡಿ, ಕಾಗಾಲ, ಸಾಣಿಕಟ್ಟಾ..... ಮುಂತಾದ ಹಳ್ಳಿಗರಿಗೆ ಪರಿಸರ ಹೋರಾಟದ ಹಿಂದಿನ ಚಿಪ್ಪಿ ಉದ್ಯಮದ ರಹಸ್ಯ ಈಗ ಅರ್ಥವಾಗಿದೆ. ಹೀಗಾಗಿ ಅನಂತ್ ಆಶೀಸರ್ ಕಂಪನಿಗೆ ಜನ ಧಿಕ್ಕಾರ ಕೂಗಿ ಓಡಿಸುತ್ತಿದ್ದಾರೆ. "ಚಿಪ್ಪಿ ಉದ್ಯಮದಿಂದ ಪರಿಸರಕ್ಕೆ ಧಕ್ಕೆ ಆಗುವುದಿಲ್ಲವಾ?" ಎಂದು ವಿ.ಎನ್. ನಾಯಕ್, ಆಶೀಸರ್ ವಗೈರೆ ಪರಿಸರ ಪರಾಕ್ರಮಿಗಳಿಗೆ ಜನ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಬಂದರು ಉದ್ಯಮ ಬಂದರೆ ತಮ್ಮೂರಿನ ಭಾಗ್ಯದ ಬಾಗಿಲು ತೆರೆಯುತ್ತದೆ ಎಂಬ ತೀರ್ಮಾನಕ್ಕವರು ಬಂದಿದ್ದಾರೆ. ತದಡಿಯಲ್ಲಿ ನೈಸರ್ಗಿಕ ಬಂದರಾಗಲಿ ಎಂಬುದೇ ಈಗ ಬಹುತೇಕ ಜನರ ಅಭಿಪ್ರಾಯವಾಗಿದೆ. ಬಂಜರು ಬಿದ್ದು ನಿಷ್ಪ್ರಯೋಜಕವಾಗಿರುವ ಭೂಮಿಯಲ್ಲಿ ಬಂದರು ಬಂದರೆ ಬರಲಿ ಎಂದು ತದಡಿ ಮಾದನಗೇರಿ ಕಾಗಾಲ ಸೀಮೆ ಜನರು ಹೇಳುತ್ತಿದ್ದಾರೆ.


ಒಂದಂತೂ ಖರೆ. ಕೆಲಮಟ್ಟಿನ ತ್ಯಾಗಕ್ಕೆ ಸಿದ್ಧರಾದರೆ ತದಡಿ ಸೀಮೆಯ ದೆಸೆ ಬದಲಾಗುವುದು ಖಂಡಿತ! ಬಂದರು ಬಂದರೆ ರೈಲೂ ಬರುತ್ತದೆ. ಒಳನಾಡು ಅಭಿವೃದ್ಧಿಯಾಗುತ್ತದೆ. ಅಕ್ಕಪಕ್ಕದ ಜಿಲ್ಲೆಯ ಜೊತೆಗಿನ ವಾಣಿಜ್ಯ ವ್ಯವಹಾರ ವಿಸ್ತಾರವಾಗುತ್ತದೆ. ಅಗಾಧ ಉದ್ಯೋಗ ಸೃಷ್ಟಿಯಾಗುತ್ತದೆ. ಅಭಿವೃದ್ಧಿಯ ಹೆಬ್ಬಾಗಿಲು ತೆರೆಯುತ್ತದೆ. ಇದಕ್ಕೆ ನಿದರ್ಶನದಂತಿದೆ ಒಡಿಶಾದ ಗೋಪಾಲಪುರ ಬಂದರು. ಕಾರವಾರದಷ್ಟೇ ಸಣ್ಣದಾದ ಈ ಗೋಪಾಲ ಪುರದಲ್ಲಿ ಇತ್ತೀಚೆಗೆ 10,000 ಕೋಟಿಯ ಬಂದರು ಯೋಜನೆ ಕೈಗೊಳ್ಳಲಾಗಿದೆ. ಅಲ್ಲಿ 10,000 ಜನರಿಗೆ ಬದುಕು ಸಿಕ್ಕಿದೆ! ಇಂಥ ಭಾಗ್ಯ ತದಡಿ-ಕಾಗಾಲ- ಮಾದನ ಗೇರಿ ಸೀಮೆಗೆ ಬರುವುದಾದರೆ ಬಂದರು ಏಕೆ ಬೇಡ?

ಪ್ರಭುತ್ವದ ಹೊಣೆ!

ಆದರೆ ಸರ್ಕಾರ ಮಾತ್ರ ಜನರಿಗೆ ಸಂಶಯ ಬರದಂತೆ ಕೆಲಸ ಮಾಡಬೇಕು. ಜಿಲ್ಲೆಗೆ ಬಂದ ಜಲವಿದ್ಯುತ್ ಯೋಜನೆ ಮತ್ತು ನೌಕಾನೆಲೆ, ಅಣುಸ್ಥಾವರ ನಿರಾಶ್ರಿತರಿಗೆ ಮಾಡಿದಂತೆ ಮೋಸ-ವಂಚನೆ ಮಾಡಬಾರದು. ಯೋಜನೆಗೆ ಪರ್ಯಾಯವಾಗಿ ಸಂತ್ರಸ್ತ ಕುಟುಂಬಕ್ಕೊಂದು ಉದ್ಯೋಗ ಪ್ರಾಮಾಣಿಕವಾಗಿ ಕೊಡಬೇಕು; ಬಂದರು ಕಾಮಗಾರಿ ಶುರುವಾಗುವ ಮುಂಚೆಯೇ ಪರಿಹಾರ-ಪುನರ್ವಸತಿ ಯೋಜನಾ ನಿರ್ವಸಿತರಿಗೆ ಒದಗಿಸಬೇಕು. ಆಗುವ ಹಾನಿ ಸರಿದೂಗಿಸಲು ಯೋಜನೆ ಹಾಕಿಕೊಳ್ಳಬೇಕು. ಪರ್ಯಾಯ ಪರಿಸರ ಕಡ್ಡಾಯವಾಗಿ ರೂಪಿಸಬೇಕು. ಲಾಭಾಂಶದಲ್ಲಿ ಬಂದರಿನ ಸುತ್ತಲಿನ ಪ್ರದೇಶದ ಅಭಿವೃದ್ಧಿ ಮಾಡಬೇಕು.

ಇದೆಲ್ಲ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬರುವಂತೆ ಮಾಡುವ ಹೊಣೆ, ಜಿಲ್ಲಾ ಮಂತ್ರಿ ದೇಶಪಾಂಡೆ, ಸಂಸದ ಅನಂತ ಹೆಗಡೆ ಮತ್ತು ಸ್ಥಳೀಯ ಶಾಸಕಿ ಶಾರದಾ ಶೆಟ್ಟಿಯದು. ಅಧಿಕಾರಶಾಹಿ ಉದಾಸೀನ ಮಾಡದಂತೆ, ಯೋಜನಾ ನಿರ್ವಸಿತರಿಗೆ ಅನ್ಯಾಯ ಮಾಡದಂತೆ ಆಳುವವರು ನಿಗಾ ಇಡಬೇಕು. ಹಾಗಾದಾಗ ಮಾತ್ರ ಸರ್ಕಾರದ ಅಭಿವೃದ್ಧಿ ಯೋಜನೆಗೆ ಅರ್ಥ ಬರುತ್ತದೆ; ಜನರೂ ಧೈರ್ಯದಿಂದ ಯೋಜನೆಗೆ ಬೆಂಬಲಿಸುತ್ತಾರೆ. ಕ್ಯಾತೆ ತೆಗೆಯುವ ಪರಿಸರವ್ಯಾಧಿಗಳಿಗೆ ಬಾಲ ಬಿಚ್ಚದಂತೆ ಸರ್ಕಾರ ವಿಶ್ವಾಸಾರ್ಹತೆಯಿಂದ ನಡೆದುಕೊಂಡರೆ ಎಲ್ಲವೂ ಸುಸೂತ್ರವಾಗಲಿದೆ!!

● ನಹುಷ





ಕೆಐಎಡಿಬಿ ಸುಪರ್ದಿಯಲ್ಲಿರುವ ಮಾದನಗೇರಿ ಭೂಮಿ

ಕಾಶ್ಮೀರದಲ್ಲಿ ಗೋಸುಂಬೆಗಳ ಹಿಂಡು

ಮೋದಿಗೆ 'ರಾಜಕೀಯ ಮುತ್ಸದ್ದಿ' ಎಂಬ ಇಮೇಜು ಕಟ್ಟಿಕೊಡಲು ಹರಸಾಹಸಪಡುತ್ತಿದ್ದ ಕಾರ್ಪೋರೇಟ್ ಮಾಧ್ಯಮಗಳು ಪೇಚಿಗೆ ಸಿಲುಕಿವೆ. ಕಳೆದ ಡಿಸೆಂಬರ್‌ನಲ್ಲಿ ನಡೆದ ಜಮ್ಮು ಕಾಶ್ಮೀರ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತವಿಲ್ಲದೆ ಅತಂತ್ರಗೊಂಡಿದ್ದ ಸನ್ನಿವೇಶದಲ್ಲಿ ಮೋದಿ - ಅಮಿತ್ ಶಾ ಕೂಟ ಪಿಡಿಪಿಯೊಂದಿಗೆ ಮೈತ್ರಿ ಮಾಡಿಕೊಂಡು ಜಮ್ಮು - ಕಾಶ್ಮೀರದಲ್ಲಿ ಕಳೆದ ವಾರ ಸಮ್ಮಿಶ್ರ ಸರ್ಕಾರ ರಚಿಸಿದ್ದು ಈಗ ಹಳೆಯ ಸುದ್ದಿ. ಹೀಗೆ ಮೈತ್ರಿ ಮಾಡಿಕೊಂಡು ಜಮ್ಮು ಕಾಶ್ಮೀರದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರ ಹಿಡಿದ 'ಚಾಣಾಕ್ಷ' ಕ್ರಮವನ್ನು ಮಾಧ್ಯಮಗಳು ಹೊಗಳಿದ್ದೇ ಹೊಗಳಿದ್ದು.


ಆದರೆ ಹೀಗೆ ಹೊಗಳಿದ ಒಂದೇ ವಾರದಲ್ಲಿ ಮೋದಿಯ ಜೊತೆಜೊತೆಗೆ ಕಾರ್ಪೋರೇಟ್ ಮಾಧ್ಯಮಗಳು ಇಕ್ಕಟ್ಟಿಗೆ ಸಿಲುಕುವಂಥಾ ಬೆಳವಣಿಗೆಯೊಂದು ನಡೆದುಬಿಟ್ಟಿದೆ. ಪಿಡಿಪಿಯ ಮುಖ್ಯಮಂತ್ರಿ ಮುಫ್ತಿ ಮಹಮದ್ ಸರ್ಕಾರ ಕಳೆದ 5 ವರ್ಷಗಳಿಂದ ಸೆರೆಯಲ್ಲಿದ್ದ ಮಸರತ್ ಆಲಂ ಭಟ್ ಎಂಬ 'ಪ್ರತ್ಯೇಕತಾವಾದಿ' ನಾಯಕನನ್ನು ಬಿಡುಗಡೆ ಮಾಡಿದೆ. ಸಮ್ಮಿಶ್ರ ಸರ್ಕಾರದ ಉಪ ಮುಖ್ಯಮಂತ್ರಿಯಾಗಿ ಬಿಜೆಪಿಯ ನಿರ್ಮಲ್ ಕುಮಾರ್ ಸಿಂಗ್ ಗದ್ದುಗೆಯಲ್ಲಿರುವಾಗಲೇ 'ಪ್ರತ್ಯೇಕತಾವಾದಿ' ನಾಯಕನನ್ನು ಬಿಡುಗಡೆ ಮಾಡಿದ್ದು ವಿರೋಧ ಪಕ್ಷಗಳಿಗೆ ಮತ್ತೊಂದು ಅಸ್ತ್ರ ಸಿಕ್ಕಂತಾಯ್ತು. ಈ ಬಗ್ಗೆ ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ಭಾರೀ ವಾದ-ವಿವಾದ ನಡೆದಿದೆ. ಬಿಜೆಪಿಯ ಗರ್ಭಗುಡಿಯಂತಿರುವ ಆರೆಸ್ಸೆಸ್ ಕೂಡ ಬಹಿರಂಗವಾಗಿ ಟೀಕಿಸಿದೆ. ಕೇಸರಿ ಕೂಟದ ಭಾಗವೇ ಆಗಿರುವ ಶಿವಸೇನೆ ಕೂಡ ಮೋದಿಯ ಅವಕಾಶವಾದಿತನವನ್ನು ಖಂಡಿಸಿದೆ.


ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ಯಾವ ಕಾರಣಕ್ಕೂ ರಾಜೀ ಮಾಡಿಕೊಳ್ಳುವುದಿಲ್ಲ ಎಂದು ಪ್ರಧಾನಿ, ಗೃಹಮಂತ್ರಿ ಮುಂತಾದವರು ಗುಟುರು ಹಾಕಿದ್ದಾರೆ. ಮಸರತ್ ಆಲಂನ ಜಾಮೀನು ತಿರಸ್ಕರಿಸುವ ಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ರಾಜನಾಥ್ ತಾಕೀತು ಮಾಡಿದ್ದಾರೆ.


ಹೀಗೆ ಎಲ್ಲರೂ ದೇಶಭಕ್ತಿಯ ಸೋಗಿನಲ್ಲಿ ಅಬ್ಬರಿಸುತ್ತಿರುವ ಈ ಹೊತ್ತಿನಲ್ಲಿ ಈ ವಿವಾದದ ಕೇಂದ್ರವಸ್ತುವೇ ಅಪ್ರಸ್ತುತವಾಗಿಬಿಟ್ಟಿದೆ. ಇದು ಕಾಶ್ಮೀರಕ್ಕೆ ಸಂಬಂಧಿಸಿದ ವಿಷಯವಾದ್ದರಿಂದ ಇದರಲ್ಲಿ ಅಂಥಾ ಆಶ್ಚರ್ಯವೇನೂ ಇಲ್ಲ. ಆ ಕೇಂದ್ರವಸ್ತುವೇ ಮಸರತ್ ಆಲಂ ಭಟ್. ಈತ ಯಾರು? ಜೈಲಿಗೆ ಹೋಗಲು ಕಾರಣಗಳೇನು? ಆತ ಮಾಡಿರುವ ಅಪರಾಧ ಕೃತ್ಯಗಳಾದರೂ ಏನು? ಇತ್ಯಾದಿ ಪ್ರಶ್ನೆಗಳನ್ನು ಕೇಳುವವರೂ ಇಲ್ಲವಾಗಿದೆ. ಕೆಲವು ಅತ್ಯಂತ ಸೂಕ್ಷ್ಮ ವಿವಾದಾತ್ಮಕ ವಿಚಾರಗಳ ಬಗ್ಗೆ ಈ ದೇಶ ಸ್ಪಂದಿಸುತ್ತಿರುವ ರೀತಿ ಇದು.

ಮಸರತ್ ಆಲಂ ಭಟ್ ಕಾಶ್ಮೀರದಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಆಲ್ ಪಾರ್ಟಿ ಹುರಿಯತ್ ಕಾನ್ಫರೆನ್ಸ್' ಎಂಬ ಹಲವು ಸಂಘಟನೆಗಳ ಒಕ್ಕೂಟದ ಕಾರ್ಯದರ್ಶಿ. ಈ ಸಂಘಟನೆ ಮಾಧ್ಯಮಗಳಲ್ಲಿ ಬಿಂಬಿತವಾಗುವಂತೆ ಭಯೋತ್ಪಾದಕ ಸಂಘಟನೆಯಲ್ಲ. ಕಾಶ್ಮೀರಿ ಜನರ ಆಶೋತ್ತರಗಳಿಗಾಗಿ ಕಾನೂನು ಪರಿಮಿತಿಯಲ್ಲೇ ಚಳವಳಿ ನಡೆಸುತ್ತಿರುವ ಒಕ್ಕೂಟ.

ಈಗ ಮಸರತ್ ಭಟ್‌ಗೆ 47 ವರ್ಷದ ಪ್ರಾಯ. ಆತನ ಮೇಲೆ ಇದುವರೆಗೆ 27 ಕ್ರಿಮಿನಲ್ ಕೇಸ್‌ಗಳು ದಾಖಲಾಗಿವೆ. ಸರ್ಕಾರದ ವಿರುದ್ಧ ಸಶಸ್ತ್ರ ಬಂಡಾಯ ಹೂಡಿದ ಮೊಕದ್ದಮೆಯೂ ಇದರಲ್ಲಿ ಸೇರಿದೆ. ಇಂಡಿಯನ್ ಆರ್ಮ್ಸ್ ಆಕ್ಟ್ ಮತ್ತು ಜಮ್ಮು - ಕಾಶ್ಮೀರ ಪಬ್ಲಿಕ್ ಸೇಫ್ಟಿ ಆಕ್ಟ್‌ನಂಥ ಕಠೋರ ಕಾಯ್ದೆಗಳನ್ನು ಆ ಕೇಸುಗಳಲ್ಲಿ ನಮೂದಿಸಲಾಗಿದೆ. ಹತ್ತಾರು ಬಾರಿ ಬಂಧನಕ್ಕೊಳಗಾಗಿರುವ ಈತ ಇದುವರೆಗೆ ಒಟ್ಟು 17 ವರ್ಷಗಳ ಕಾಲ ಜೈಲು ವಾಸ ಅನುಭವಿಸಿದ್ದಾನೆ. ಅದು ಕೋರ್ಟುಗಳು ವಿಧಿಸಿದ ಶಿಕ್ಷೆಯಲ್ಲ, ಬದಲಿಗೆ ವಿಚಾರಣಾಧೀನ ಕೈದಿಯಾಗಿ ಒಟ್ಟು 17 ವರ್ಷ ಕಳೆದಿದ್ದಾನೆ. ಸ್ವಲ್ಪ ವಿಚಿತ್ರ ಅನಿಸುತ್ತಿದೆಯಲ್ಲವೆ?







ಈತ ಹುಟ್ಟಿದ್ದು ಶ್ರೀನಗರದ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ. 1990ರಲ್ಲಿ ಈತ ಪ್ರತಿಷ್ಠಿತ ವಿದ್ಯಾಸಂಸ್ಥೆಯೊಂದರ ವಿದ್ಯಾರ್ಥಿಯಾಗಿದ್ದ. ಸಶಸ್ತ್ರ ಪಡೆಗಳು ಅಮಾಯಕರನ್ನು ಪೊಳ್ಳು ಎನ್‌ಕೌಂಟರ್‌ಗಳಲ್ಲಿ ಕೊಂದು ಅವರಿಗೆ ಪಾಕಿಸ್ತಾನಿ ಭಯೋತ್ಪಾದಕರು ಎಂಬ ಪಟ್ಟ ಕಟ್ಟುತ್ತಿದ್ದ ಘಟನೆಗಳನ್ನು ಕಣ್ಣಾರೆ ಕಂಡು ಕಾಲೇಜು ತೊರೆದು 'ಆಜಾದಿ' ಚಳವಳಿಗೆ ಇಳಿದ. ಮೊದಲಿಗೆ ಮುಸ್ಲಿಂ ಲೀಗ್, ನಂತರ ಹುರಿಯತ್ ಕಾನ್ಫರೆನ್ಸ್‌ನ ನಾಯಕ ಸ್ಥಾನಕ್ಕೆ ಏರಿದ್ದಾನೆ.

ಈತ ನಾಯಕತ್ವ ನೀಡಿದ ಎನ್ನಲಾದ ಕೆಲವು ಹೋರಾಟಗಳನ್ನು ನೋಡೋಣ.

2008ರಲ್ಲಿ ಇಬ್ಬರು ಕಾಶ್ಮೀರಿ ಯುವತಿಯರು ಇದ್ದಕ್ಕಿದ್ದಂತೆ ನಾಪತ್ತೆಯಾದರು. ಇವರ ಪತ್ತೆಗೆ ಪೊಲೀಸರು ಮಾಮೂಲಿಯಂತೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಸಶಸ್ತ್ರ ಪಡೆಗಳ ಕೆಲವು ಯೋಧರು ಇವರನ್ನು ಅಪಹರಿಸಿದ್ದಾರೆ ಎಂಬುದು ಜನರ ಆರೋಪ. ದೇಹದ ತುಂಬಾ ಗಾಯದ ಗುರುತುಗಳಿದ್ದ ಆ ಯುವತಿಯರ ಶವಗಳು ಸೇನಾ ಪಡೆಗಳ ಶಿಬಿರದ ಬಳಿಯ ಕಾಲುವೆಯೊಂದರಲ್ಲಿ ಪತ್ತೆಯಾದವು. ಜನರ ಆಕ್ರೋಶ ಮೇರೆ ಮೀರಿತು. ಪೊಲೀಸರು ಹಾಗೂ ಸಶಸ್ತ್ರ ಪಡೆಗಳು ಲಾಠಿ ಬಂದೂಕುಗಳಿಂದ ಉತ್ತರಿಸುತ್ತಿದ್ದರೆ, ಜನರು ಕಲ್ಲುಗಳನ್ನು ಕೈಗೆತ್ತಿಕೊಂಡರು. ಈ ಹೋರಾಟ ತಿಂಗಳುಗಟ್ಟಲೆ ನಡೆಯಿತು. ರಾಷ್ಟ್ರೀಯ - ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಯುವತಿಯರ ಸಾವು ಮತ್ತು ಪ್ರತಿಭಟನೆಯ ಸುದ್ದಿಗಳು ಪ್ರಕಟವಾದವು. ಈ ಹೋರಾಟದಲ್ಲಿ ಹಲವು ಸಾವು ನೋವುಗಳೂ ಆದವು.

ಈ ಪ್ರತಿಭಟನೆ ತೀವ್ರವಾಗಿದ್ದ ಸಂದರ್ಭದಲ್ಲೇ ಇದಕ್ಕೆ ನಾಯಕತ್ವ ನೀಡಿದ ಎಂಬ ಆರೋಪದಡಿ 2008ರಲ್ಲಿ ಮಸರತ್‌ನನ್ನು ಬಂಧಿಸಲಾಯಿತು. 21 ತಿಂಗಳು ಜೈಲುವಾಸ ಅನುಭವಿಸಿದ ಮೇಲೆ 2010ರ ಜೂನ್‌ನಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾದ.

ಹೀಗೆ ಬಿಡುಗಡೆಯಾದ ಒಂದೇ ವಾರದಲ್ಲಿ ಶ್ರೀನಗರದ ಬೀದಿಯಲ್ಲಿ ಮತ್ತೊಂದು ದುರ್ಘಟನೆ ನಡೆದುಹೋಯಿತು. ತುಫಾಯಿಲ್ ಎಂಬ 17 ವರ್ಷದ ವಿದ್ಯಾರ್ಥಿಯೊಬ್ಬ ಮೆಡಿಕಲ್ ಕೋರ್ಸ್ ಸೇರಲು ಎಂಟ್ರೆನ್ಸ್ ಎಕ್ಸಾಮ್ ತೆಗೆದುಕೊಂಡಿದ್ದ. ಪ್ರತಿನಿತ್ಯ ಸಂಜೆ ಟ್ಯೂಷನ್‌ಗೆ ಹೋಗುತ್ತಿದ್ದ. ಹೀಗೆ ಟ್ಯೂಷನ್‌ನಿಂದ ವಾಪಸ್ ಬರುತ್ತಿದ್ದ ವೇಳೆಯಲ್ಲಿ ಸೇನಾ ಪಡೆಗಳು ಹಾರಿಸಿದ ಗ್ಯಾಸ್ ಶೆಲ್‌ಗೆ ಬಲಿಯಾದ. ಆತನ ಮಿದುಳು ಛಿದ್ರಛಿದ್ರವಾಗಿತ್ತು. ಈ ಘಟನೆಯಿಂದಾಗಿ ಕಾಶ್ಮೀರಿ ಜನತೆಯಲ್ಲಿ ಮತ್ತೆ ಆಕ್ರೋಶ ಭುಗಿಲೆದ್ದಿತು.

ಹುರಿಯತ್ ಕಾನ್ಫರೆನ್ಸ್‌ನ ಕಾರ್ಯದರ್ಶಿಯಾಗಿದ್ದ ಮಸರತ್ ಆಲಂ ಮತ್ತೆ ಚಳವಳಿಗೆ ಕರೆಕೊಟ್ಟ. ಸಶಸ್ತ್ರ ಪಡೆಗಳು 'ಕಾಶ್ಮೀರ ಬಿಟ್ಟು ತೊಲಗಿ' ಎಂಬ ಚಳವಳಿಗೆ ಕರೆಕೊಟ್ಟ. ಯಾವ ಕ್ಷಣದಲ್ಲಾದರೂ ಬಂಧಿಸಬಹುದೆಂಬ ಅಂದಾಜಿದ್ದುದರಿಂದ ಮತ್ತೆ ಪೊಲೀಸರ ಕೈಗೆ ಸಿಗದಂತೆ ತಲೆಮರೆಸಿಕೊಂಡ. ಪೊಲೀಸರು ಈತನ ತಲೆಗೆ 15 ಲಕ್ಷ ಬಹುಮಾನ ಘೋಷಿಸಿದರು.

ಮೋಸ್ಟ್ ವಾಂಟೆಡ್ ಪರ್ಸನ್ ಆಗಿದ್ದರೂ, ಪೊಲೀಸರ ಕೈಗೆ ಸಿಗದೆ ಹೋರಾಟದ ರೂಪರೇಷೆಯ ಬಗ್ಗೆ ಪ್ರತಿನಿತ್ಯ ಮುದ್ರಿಸಿದ ಮಾಹಿತಿಯನ್ನು ಹಂಚುತ್ತಿದ್ದ. ತನ್ನ ಭಾಷಣದ ಸಿಡಿಗಳನ್ನು ಬಿಡುಗಡೆ ಮಾಡುತ್ತಿದ್ದ. ಕೆಲವೊಮ್ಮೆ ರಹಸ್ಯ ಪತ್ರಿಕಾ ಗೋಷ್ಠಿಗಳನ್ನೂ ನಡೆಸಿದ್ದ. ಮಾಮೂಲಿಯಂತೆ ಜನರು ಕಲ್ಲು ತೂರಾಟ ನಡೆಸಿದರು. ಕಲ್ಲು ತೂರಾಟ ಎಂಬುದು ಇತ್ತೀಚಿನ ವರ್ಷಗಳಲ್ಲಿ ಕಾಶ್ಮೀರದ ಬೀದಿ ಹೋರಾಟದ ಒಂದು ವಿಶಿಷ್ಟ ರೂಪವಾಗಿ ಹೋಗಿದೆ. ಸಶಸ್ತ್ರ ಪಡೆಗಳು ಮಾಮೂಲಿಯಂತೆ ಮನಸೋ ಇಚ್ಛೆ ಗುಂಡು ಹಾರಿಸಿದರು. 120 ಜನರು ಸತ್ತರು. ಅದರಲ್ಲಿ ಯುವಕರು ಮತ್ತು ಹದಿಹರೆಯದ ಮಕ್ಕಳೇ ಹೆಚ್ಚು.

ಸೇನಾಪಡೆಗಳ ಗುಂಡಿಗೆ ಬಲಿಯಾದ ಅಮಾಯಕ ವಿದ್ಯಾರ್ಥಿ ತುಫಾಯಿಲ್‌ನ ಪೋಷಕರಿಗೆ 2011ರಲ್ಲಿ ಕೇಂದ್ರ ಸರ್ಕಾರ 5 ಲಕ್ಷ ಪರಿಹಾರ ಘೋಷಿಸಿತು. ಈ ಹಣವನ ನತದೃಷ್ಟ ವಿದ್ಯಾರ್ಥಿಯ ಪೋಷಕರು ತಿರಸ್ಕರಿಸಿ ಸರ್ಕಾರ ಛೀಮಾರಿ ಹಾಕಿದ್ದರು ಎಂಬುದು ಬೇರೆ ಮಾತು.

ಈ ಚಳವಳಿ ತೀವ್ರವಾಗಿದ್ದ ಸಂದರ್ಭದಲ್ಲೇ 2010ರ ಅಕ್ಟೋಬರ್‌ನಲ್ಲಿ ಮಸರತ್‌ನನ್ನು ಆತನ ಅಡಗುತಾಣದಿಂದ ಪೊಲೀಸರು ಬಂಧಿಸಿದರು. ಆತನ ಮೇಲೆ ಪಿಎಸ್‌ಎ(ಪಬ್ಲಿಕ್ ಸೆಕ್ಯುರಿಟಿ ಆಕ್ಟ್) ಕಾಯ್ದೆಯಡಿ ಮೊಕದ್ದಮೆ ಹೂಡಿದರು.

ಪಿಎಸ್‌ಎ ಕಾಯ್ದೆಯಡಿ ಬಂಧಿತ ವ್ಯಕ್ತಿಯನ್ನು ಆರು ತಿಂಗಳ ಕಾಲ ಯಾವುದೇ ವಿಚಾರಣೆ ಇಲ್ಲದೆ ಬಂಧಿಸಿಡಲು ಅವಕಾಶವಿದೆ. ಆಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ವರದಿ ಪ್ರಕಾ 1990ರಿಂದ ಇದುವರೆಗೆ ಸುಮಾರು 20,000 ಮಂದಿಯನ್ನು ಈ ಕಾಯ್ದೆಯಡಿ ಜೈಲಿಗೆ ತಳ್ಳಲಾಗಿದೆ. ಹಲವಾರು ಪ್ರಕರಣಗಳಲ್ಲಿ ಬಂಧಿತರನ್ನು ಕೋರ್ಟುಗಳು ಖುಲಾಸೆಗೊಳಿಸಿವೆ. ಅದೆಷ್ಟೋ ಪ್ರಕರಣಗಳಲ್ಲಿ ಜಾಮೀನು ಕೊಟ್ಟಿವೆ. ಸುಪ್ರೀಂಕೋರ್ಟ್ ಕೂಡ ಈ ಪಿಎಸ್‌ಎ ಕಾಯ್ದೆಯ ದುರ್ಬಳಕೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕೆಲವು ನಿರ್ಬಂಧಗಳನ್ನು ವಿಧಿಸಿತ್ತು. ಆದರೂ ಪರಿಸ್ಥಿತಿಯಲ್ಲಿ ಹೆಚ್ಚಿನದೇನೂ ಸುಧಾರಣೆಯಾಗಿಲ್ಲ.

ಹೀಗೆ ಮಸರತ್ ಪ್ರಕರಣದಲ್ಲೂ ಹೈಕೋರ್ಟ್ ಆತನಿಗೆ ಜಾಮೀನು ಮಂಜೂರು ಮಾಡಿತ್ತು. ಆದರೆ ಆತನನ್ನು ಬಿಡುಗಡೆ ಮಾಡಲು ಇಷ್ಟವಿಲ್ಲದ ಸರ್ಕಾರ ಆತನ ಮೇಲೆ ಮತ್ತೆ ಹೊಸಹೊಸ ಕೇಸುಗಳನ್ನು ಜಡಿಯಿತು. 2010ರಲ್ಲಿ ಆತ ಜೈಲು ಸೇರಿದಾಗಿನಿಂದ ಇದುವರೆಗೆ ಆತನ ಮೇಲೆ 6 ಬಾರಿ ವಿವಿಧ ಠಾಣೆಗಳಲ್ಲಿ ಇದೇ ಪಿಎಸ್‌ಎ ಕಾಯ್ದೆ ಹೇರಲಾಗಿದೆ. ಇದು ಕಾಶ್ಮೀರ, ಇಲ್ಲಿ ಇಂಥಾ ಕೇಸುಗಳು ಮಾಮೂಲಿ. ಮಸರತ್ 5 ಬಾರಿ ಜಾಮೀನು ಪಡೆದುಕೊಂಡಿದ್ದಾನೆ. ಆರನೇ ಬಾರಿಯ ಜೈಲುವಾಸ ಕೂಡ ಮಾರ್ಚ್ 15ರಂದು ಮುಕ್ತಾಯವಾಗುವುದರಲ್ಲಿತ್ತು.

ಅಷ್ಟರಲ್ಲಿ ಈ ನಾಟಕೀಯ ಬೆಳವಣಿಗೆ ನಡೆದಿದೆ. ಬಿಜೆಪಿ ಜೊತೆ ಸೇರಿ ಮೈತ್ರಿ ಸರ್ಕಾರ ಮಾಡಿದ್ದ ಪಿಡಿಪಿ ಸರ್ಕಾರ ಕಾಶ್ಮೀರಿ ಮತದಾರರ ಮುಂದೆ ತಮ್ಮ ಮರ್ಯಾದೆ ಉಳಿಸಿಕೊಳ್ಳಲು ಒಂದು ವಾರ ಮೊದಲು ಮಸರತ್‌ನನ್ನು ಬಿಡುಗಡೆ ಮಾಡುವ ನಿರ್ಧಾರ ತೆಗೆದುಕೊಂಡಿದೆ. ಆ ಮೂಲಕ ಕಾಶ್ಮೀರಿ ಜನರೆದುರು ಹೀರೋ ಆಗಲು ಹೊರಟಿದೆ. ಅದು ಬಿಟ್ಟರೆ ಪಿಡಿಪಿ ಸಾಧಿಸಿದ್ದು ಅಥವಾ 'ಪ್ರತ್ಯೇಕತಾವಾದಿ'ಗಳಿಗೆ ಮಣೆ ಹಾಕಿದ್ದು ಯಾವುದೂ ಇಲ್ಲ.

ಈಗ ಸುಪ್ರೀಂಕೋರ್ಟ್ ವಿಧಿಸಿರುವ ಕಟ್ಟಳೆಯ ಪ್ರಕಾರ ಪಿಎಸ್‌ಎಯಡಿ ಯಾವುದೇ ವ್ಯಕ್ತಿಯನ್ನು ಬಂಧಿಸುವ ಮುನ್ನ ಒಂದು ವಾರದ ಮೊದಲು ಆ ವ್ಯಕ್ತಿಗೆ ನೋಟಿಸ್ ಜಾರಿ ಮಾಡಬೇಕು. ಹೀಗಾಗಿ 5 ವರ್ಷ ಜೈಲಿನಲ್ಲೇ ಕಳೆದಿರುವ ವ್ಯಕ್ತಿಗೆ ನೋಟಿಸ್ ಜಾರಿಮಾಡುವ ಪ್ರಸಂಗ ಬಂದಿದೆ ಎಂಬುದು ಬಿಟ್ಟರೆ ಇಲ್ಲಿ ಮತ್ತೇನೂ ವಿಶೇಷವಿಲ್ಲ.

ಜೈಲಿನಿಂದ ಹೊರಬಂದ ಮಸರತ್ ಹೇಳಿದ ಮಾತು ನಮ್ಮ ಗಮನ ಸೆಳೆಯುತ್ತದೆ. "ನಾನು ಮಸರತ್ ಆಲಂ ಭಟ್, ಒಸಾಮ ಬಿನ್ ಲಾಡೆನ್ ಅಲ್ಲ. ನಾನು ಚಳವಳಿಗಾರನೇ ಹೊರತು ಭಯೋತ್ಪಾದಕನಲ್ಲ. .. .. ನಾನು ಜೈಲು ಎಂಬ ನಾಲ್ಕು ಗೋಡೆಗಳ ಬಂದೀಖಾನೆಯಿಂದ ಕಾಶ್ಮೀರ ಎಂಬ ವಿಶಾಲ ಬಂದೀಖಾನೆಗೆ ಬಂದಿದ್ದೇನೆ ಅಷ್ಟೆ ವ್ಯತ್ಯಾಸ."

ಮಸರತ್ ಭಟ್‌ನ ಮಾತುಗಳನ್ನು ಸಂಪೂರ್ಣ ತಳ್ಳಿಹಾಕುವ ಧೈರ್ಯ ಯಾರಿಗಿದೆ ಹೇಳಿ? ನಮ್ಮ ಕಣ್ಣೆದುರಲ್ಲಿ ನಡೆಯುತ್ತಿರುವ ಈ ವೈಪರೀತ್ಯಗಳಿಗೆ ಸ್ಪಂದಿಸು ಬಗೆ ಹೇಗೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಉರಿಯುವ ಮನೆಯಲ್ಲಿ ಚಳಿ ಕಾಯಿಸುತ್ತಾ....

ನೀನು ಸತ್ತಂಗೆ ಮಾಡು - ನಾನು ಅತ್ತಂಗೆ ಮಾಡ್ತೀನಿ ಎಂಬುದು ಒಂದು ಹಳೆಯ ಗಾದೆ. ಅಧಿಕಾರಕ್ಕಾಗಿ ಪಿಡಿಪಿ ಯೊಂದಿಗೆ ಮೈತ್ರಿ ಮಾಡಿಕೊಂಡ ಬಿಜೆಪಿಯ ಇಂದಿನ ಸ್ಥಿತಿ ಹಾಗೇ ಆಗಿದೆ.

ಪಿಡಿಪಿಯ ವಕ್ತಾರ ಹಾಗೂ ಶಿಕ್ಷಣ ಮಂತ್ರಿಯಾಗಿರುವ ನಯೀಮ್ ಅಕ್ತರ್ ಪ್ರಕಾರ "ಕಾನೂನಿಗೆ ಅಗತ್ಯವಿಲ್ಲದವರನ್ನು ಜೈಲಿನಲ್ಲಿಟ್ಟುಕೊಳ್ಳುವುದಕ್ಕೆ ನಮ್ಮ ಸರ್ಕಾರದ ಸ್ಪಷ್ಟ ವಿರೋಧವಿದೆ. ಹಾಗಾಗಿ ಅನಗತ್ಯವಾಗಿ ಸೆರೆಯಲ್ಲಿರುವ ಎಲ್ಲರನ್ನೂ ಬಂಧಮುಕ್ತಗೊಳಿಸಲು ಬದ್ಧರಾಗಿದ್ದೇವೆ. ಮೈತ್ರಿಕೂಟದ ಕಾಮನ್ ಮಿನಿಮಮ್ ಪ್ರೋಗ್ರಾಮ್‌ನ ವ್ಯಾಪ್ತಿಯಲ್ಲಿ ಈ ವಿಷಯವೂ ಇದೆ. ನಾವು ಮೈತ್ರಿ ಧರ್ಮವನ್ನು ಮೀರಿಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

ಇದು ಮಾತ್ರವಲ್ಲದೆ ಭಾರೀ ವಿವಾದಾತ್ಮಕವಾಗಿರುವ ಹಲವು ವಿಚಾರಗಳಿವೆ. ಕಾಶ್ಮೀರಕ್ಕೆ ಕೆಲವು ವಿಶೇಷ ಅಧಿಕಾರ ಕಲ್ಪಿಸುವ ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಬೇಕೆಂದು ಕಳೆದ 67 ವರ್ಷಗಳಿಂದ ಈ ಕೇಸರಿ ದುಷ್ಟಕೂಟ ಗದ್ದಲ ಎಬ್ಬಿಸುತ್ತಾ ಬಂದಿರುವುದು ತಿಳಿದ ಸಂಗತಿ. ಆದರೆ ಇದೇವೇಳೆಯಲ್ಲಿ ಪಿಡಿಪಿ ಕಾಶ್ಮೀರಕ್ಕೆ ಇನ್ನೂ ಹೆಚ್ಚಿನ ಸ್ವಾಯತ್ತತೆಯನ್ನು ಕೇಳುತ್ತಾ ಬಂದಿದೆ. ಮಾತ್ರವಲ್ಲ, 1952ರ ದೆಹಲಿ ಘೋಷಣೆಗೆ ಅನುಗುಣವಾಗಿ ಕಾಶ್ಮೀರದ ಆಡಳಿತ ಇರಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಆದರೆ ಇದೀಗ ಈ ಎರಡೂ ಪಕ್ಷಗಳು ಅಧಿಕಾರ ಮೋಹದಿಂದ 370ನೇ ವಿಧಿಯ ವಿಚಾರದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಲು ತೀರ್ಮಾನಿಸಿದ್ದಾರಂತೆ.

ಹಾಗೆಯೇ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (ಎಎಫ್‌ಎಸ್‌ಪಿಎ)ಯನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ಪಿಡಿಪಿ ಒತ್ತಾಯಿಸುತ್ತಾ ಕಾಶ್ಮೀರಿ ಜನರನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದೆ. ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿ ಪಕ್ಷ ಕಾಶ್ಮೀರದಲ್ಲಿ ಸಶಸ್ತ್ರ ಪಡೆಗಳಿಗೆ ಪರಮಾಧಿಕಾರ ಇರಬೇಕೆಂದು ವಾದಿಸುತ್ತಾ ಬಂದವರು.

ಈಗ ಪಿಡಿಪಿಯವರು ನೀಡುತ್ತಿರುವ ವಿವರಣೆಯ ಪ್ರಕಾರ 'ಕಾಶ್ಮೀರ ಕಣಿವೆಯಿಂದ ಮಿಲಿಟರಿ ಪಡೆಗಳನ್ನು ಕ್ರಮೇಣವಾಗಿ ವಾಪಸ್ ಕರೆಸಿಕೊಳ್ಳುವ ಭರವಸೆ ಕೂಡ ಕೇಂದ್ರದಿಂದ ಸಿಕ್ಕಿದೆ'ಯಂತೆ. ಹಾಗಾದರೆ ಇವರಿಬ್ಬರೂ ಇದುವರೆಗೂ ಹೊಂದಿದ್ದ ನಿಲುವು ಕೇವಲ ತೋರಿಕೆಗೆ ಮಾತ್ರವೇ?

ಈ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ಬಿಜೆಪಿಯ ನಾಯಕರು ಬಾಯೇ ಬಿಚ್ಚುತ್ತಿಲ್ಲ. ಬದಲಿಗೆ ದೇಶ ಭಕ್ತಿಯ, ರಾಷ್ಟ್ರ ಭದ್ರತೆಯ ಬಗ್ಗೆ ಸೋಗಲಾಡಿ ಭಾಷಣ ಶುರು ಮಾಡಿಬಿಡುತ್ತಾರೆ. "ನಮಗೆ ದೇಶಭಕ್ತಿಯ ಬಗ್ಗೆ ಬೋಧನೆ ಮಾಡಲು ಬರಬೇಡಿ" ಎಂದು ಪ್ರಧಾನಿ ಮೋದಿ ಸಂಸತ್‌ನಲ್ಲಿ ಗುಡುಗಿದ್ದಾರೆ.

ಎಲ್ಲರೂ ಅವರವರ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಕಾಶ್ಮೀರದಲ್ಲಿ ಹಳೆಯ ಗಾಯದ ರಕ್ತ ನಿಲ್ಲುವ ಮುನ್ನವೇ ಹೊಸ ಗಾಯದಿಂದ ರಕ್ತ ಹೊರಹೊಮ್ಮತೊಡಗುತ್ತದೆ. ಈ ರಕ್ತಸಿಕ್ತ ಅಧ್ಯಾಯಕ್ಕೆ ಕೊನೆಯೆಂಬುದು ಉಂಟೆ?

ದೆಹಲಿಯಲ್ಲಿ ಲಂಕೇಶ್ ಪತ್ರಿಕೆ ಬೇಕಿದೆ' ಎಂದಿದ್ದ ಮೆಹತಾ

ಕೇದ ಭಾನುವಾರ ಅಪ್ಪನ 80ನೇ ಹುಟ್ಟುಹಬ್ಬ ಮತ್ತು ಪತ್ರಿಕೆಯ ಮಾನೋತ್ಸವದ ಸಮಾರಂಭ ಪ್ರಾರಂಭವಾಗುವ ಹೊತ್ತಿಗೆ ತಮ್ಮ ಕಿಷನ್‌ರಾಜ್ ಮು ಕೆಟ್ಟ ಸುದ್ದಿ ತಂದ. ಅದು ಆಗತಾನೆ ದೆಹಲಿಯಲ್ಲಿ ಹಿರಿಯ ಪತ್ರಕರ್ತ ನೋದ್ ಮೆಹತಾ ಅವರು ಅಸುನೀಗಿದ್ದ ಸುದ್ದಿ.

ನಾನು ತುಂಬಾ ಮೆಚ್ಚುತ್ತಿದ್ದ ಇಂಗ್ಲಿಷ್ ಪತ್ರಕರ್ತರಲ್ಲಿ ಮೆಹತಾ ಪ್ರಮುಖರು. ಮು ಮತ್ತು ನನ್ನ ತಂಗಿ ಇಬ್ಬರೂ ಮೆಹತಾ ಅವರು ಸಂಪಾದಕರಾಗಿದ್ದ ಟ್‌ಲುಕ್' ಪತ್ರಿಕೆಯನ್ನು ತೆರೆಯುತ್ತಿದ್ದದ್ದೇ ಕೊನೆ ಪುಟದಿಂದ. ಯಾಕೆಂದರೆ ರು ಆಗಾಗ ಕೊನೆ ಪುಟದಲ್ಲಿ ಬರೆಯುತ್ತಿದ್ದ 'ಡೆಲ್ಲಿ ಡೈರಿ' ನಮ್ಮಿಬ್ಬರಿಗೂ ಬಾ ಮಜಾ ಕೊಡುತ್ತಿತ್ತು.


ರಾಜಕಾರಣಿಗಳ ಬಗ್ಗೆ ಲೇವಡಿ, ಚೆಡ್ಡಿಗಳ ಬಗ್ಗೆ ತಮಾಷೆ, ಸ್ವತಃ ತನ್ನ ಯೂ ಜೋಕ್ ಮಾಡುತ್ತಿದ್ದ ಮೆಹತಾ ಅಪ್ಪಟ ಜಾತ್ಯತೀತ ವ್ಯಕ್ತಿಯಾಗಿದ್ದರು. ವ್ಯಕ್ತಿ ಸ್ವಾತಂತ್ರ್ಯದಲ್ಲಿ ಅಪಾರ ನಂಬಿಕೆ ಇಟ್ಟಿದ್ದ ಅವರು ತಮ್ಮ ವಿರುದ್ಧ ವಾ ಅವರ ಪತ್ರಿಕೆಯ ನಿಲುವಿನ ವಿರುದ್ಧ ಬರುತ್ತಿದ್ದ ಪತ್ರಗಳನ್ನೇ ಹೆಚ್ಚಾಗಿ ಟ್‌ಲುಕ್'ನಲ್ಲಿ ಸಂತೋಷದಿಂದಲೇ ಪ್ರಕಟಿಸುತ್ತಿದ್ದರು.

ಖುಷ್ವಂತ್ ಸಿಂಗ್‌ರಂತೆಯೇ ಮೆಹತಾ ಕೂಡ ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ದು ದಂತಕತೆಯಾಗಿದ್ದರು. ಸಂಪಾದಕರಾಗಿಯೇ ಪತ್ರಿಕೋದ್ಯಮಕ್ಕೆ ಎಂಟ್ರಿ ಟ್ಟ ಮೆಹತಾ ಮೊದಲು ಸಂಪಾದಕರಾಗಿದ್ದು 'ಡೆಬೊನೇರ್' ಪತ್ರಿಕೆಗೆ. 'ಡೆಬೊನೇರ್' ಪತ್ರಿಕೆಯು ಮಹಿಳೆಯರ ನಗ್ನ ಚಿತ್ರಗಳನ್ನು ಪ್ರಕಟಿಸುವ ಲಕ ಸಂಚಲನ ಮೂಡಿಸಿತ್ತು. ಆದರೆ ಆ ಪತ್ರಿಕೆಯಲ್ಲಿ ಪ್ರಖ್ಯಾತ ಲೇಖಕರೂ ಯುತ್ತಿದ್ದರು. ಈ ಎರಡು ಕಾರಣಗಳಿಗೆ ಅಪ್ಪ ಆ ಪತ್ರಿಕೆಯನ್ನು ತರುತ್ತಿದ್ದರು. ನೂ ಅದನ್ನು ಓದುತ್ತಿದ್ದೆ.

ಆಮೇಲೆ ಮೆಹತಾ ಸಂಪಾದಕರಾಗಿದ್ದು 'ದಿ ಇಂಡಿಪೆಂಡೆಂಟ್' ಎಂಬ ಪತ್ರಿಕೆಗೆ. ಮುಂಬೈಯಲ್ಲಿ ಮುದ್ರಣಗೊಳ್ಳುತ್ತಿದ್ದ 'ಇಂಡಿಪೆಂಡೆಂಟ್' ಅನ್ನು ಟಿಸುತ್ತಿದ್ದದ್ದು ದಿ ಟೈಮ್ಸ್ ಆಫ್ ಇಂಡಿಯಾದ ಮಾಲೀಕರಾದ ಜೈನ್‌ಗಳು. ಹತಾ ಸಂಪಾದಕತ್ವದಲ್ಲಿ ಆ ಪತ್ರಿಕೆ ಅದೆಷ್ಟು ಜನಪ್ರಿಯವಾಯಿತೆಂದರೆ 'ದಿ ್ಡ್ ಲೇಡಿ ಆಫ್ ಬೋರಿಬಂದರ್' ಎಂದೇ ಖ್ಯಾತವಾಗಿರುವ ಟೈಮ್ಸ್ ಕೆಗೇ ಅದು ಸೆಡ್ಡು ಹೊಡೆಯಲಾರಂಭಿಸಿತು. ಆಗಿನ್ನೂ ಟೈಮ್ಸ್ ಮುಂಬೈಯಲ್ಲಿ ತ್ರ ಮೊದಲ ಸ್ಥಾನದಲ್ಲಿದ್ದು ಇತರೆ ನಗರಗಳಲ್ಲಿ ಇತರೆ ಪತ್ರಿಕೆಗಳಿಗಿಂತ ದೆ ಇತ್ತು. ಆದರೆ ಮೆಹತಾ ತುಂಬ ದಿನಗಳ ಕಾಲ ಅಲ್ಲಿ ಉಳಿಯಲಿಲ್ಲ. ್ಮ ಎಂದಿನ ಜಾಯಮಾನದಂತೆ ಪತ್ರಿಕೆಯ ಮಾಲೀಕರೊಂದಿಗೆ ಜಗಳವಾಡಿ ರಬಿದ್ದರು. ಅವರ ನಿರ್ಗಮನದ ನಂತರ 'ಇಂಡಿಪೆಂಡೆಂಟ್' ಕುಸಿದು ನೆಗೊಂದು ದಿನ ಕಣ್ಣುಮುಚ್ಚಿತು.

ಆನಂತರ ಅವರು ಮುಂಬೈನಿಂದ ದೆಹಲಿಗೆ ವಾಸ್ತವ್ಯವನ್ನು ಬದಲಾಯಿಸಿ ಯನಿಯರ್' ಪತ್ರಿಕೆಯ ಸಂಪಾದಕರಾದರು. 'ಪಯನಿಯರ್' ಪತ್ರಿಕೆಗೆ ಸದೊಂದು ಉತ್ಸಾಹಿ ಯುವಕರ ತಂಡ ಕಟ್ಟಿಕೊಂಡ ಮೆಹತಾ ದೆಹಲಿಯ ರೆ ಪತ್ರಿಕೆಗಳಿಗೆ ಸವಾಲು ಹಾಕಿದರು. ಆದರೆ ಆ ಪತ್ರಿಕೆಯಲ್ಲೂ ಹತಾ ದೀರ್ಘ ಕಾಲ ಉಳಿಯಲಿಲ್ಲ. ಅವರು ಹೋದನಂತರ 'ಪಯನಿಯರ್' ಜೀವಾಳವನ್ನೇ ಕಳೆದುಕೊಂಡು ಸೊರಗುತ್ತಾ ಸಾಗಿತು.

ನಾನು ಹಲವು ವರ್ಷಗಳ ಕಾಲ ಇಂಗ್ಲಿಷ್ ಮಾಧ್ಯಮದಲ್ಲೂ, ದೆಹಲಿಯಲ್ಲೂ ಸ ಮಾಡಿದ್ದರೂ ಎಂದೂ ಮೆಹತಾ ಅವರನ್ನು ಭೇಟಿಯಾಗುವ ಅಥವಾ ಅವರ ಅಡಿ ಕೆಲಸ ಮಾಡುವ ಅವಕಾಶ ಸಿಗಲಿಲ್ಲ.



ಅವರನ್ನು ಭೇಟಿ ಆಗಿದ್ದು ಬೆಂಗಳೂರಿನ ಲಾ ಸ್ಕೂಲ್ ಆಯೋಜಿಸಿದ್ದ ಒಂದು ಸೆಮಿನಾರ್‌ನಲ್ಲಿ. ಅವತ್ತು ಅವರು ಹೇಗೆ ನಮ್ಮ ಸುಶಿಕ್ಷಿತ ವರ್ಗಗಳು ಕೋಮುವಾದಿಗಳಾಗುತ್ತಿವೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು.

ನಾನು 2003ರಲ್ಲಿ ಪತ್ರಿಕೆಯ 24ನೇ ವಾರ್ಷಿಕ ವಿಶೇಷಾಂಕಕ್ಕೆ ಒಂದು ಲೇಖನ ಬರೆದು ಕೊಡಿ ಎಂದು ಮೆಹತಾ ಅವರನ್ನು ಕೇಳಿದಾಗ ಅವರು ಒಪ್ಪಿಕೊಂಡರು. ಅಪ್ಪನ ಬಗ್ಗೆ, ನನ್ನ ಬಗ್ಗೆ ಮತ್ತು ಪತ್ರಿಕೆಯ ಬಗ್ಗೆ ತರುಣ್ ತೇಜಪಾಲ್‌ನಿಂದ ಮಾಹಿತಿ ಪಡೆದು ನನಗೆ ಅಚ್ಚರಿ ಮೂಡಿಸುವಂತಹ ಲೇಖನವನ್ನು ಮೆಹತಾ ಕಳುಹಿಸಿದರು. ಆ ಲೇಖನದ ಶೀರ್ಷಿಕೆಯೇ 'ದೆಹಲಿಯಲ್ಲಿ ಲಂಕೇಶ್ ಪತ್ರಿಕೆ ಬೇಕಿದೆ'!

ನಮ್ಮ ಓದುಗರಿಗೆ ಇಲ್ಲಿ ಆ ಲೇಖನದ ಹಲವು ಭಾಗಗಳನ್ನು ನೀಡುತ್ತಿದ್ದೇನೆ.

"'ಲಂಕೇಶ್ ಪತ್ರಿಕೆ' ಬಗ್ಗೆ ನನಗೆ ಹೆಚ್ಚು ತಿಳಿದಿದೆ ಎಂಬುದಾಗಿ ಸಾಧಿಸಲು ಸಾಧ್ಯವಿಲ್ಲವಾದರೂ ಪತ್ರಿಕೆಯನ್ನು ಗಂಭೀರವಾಗಿ ಗಮನಿಸಿದಾಗ ಲಂಡನ್ ಮೂಲದ 'ಪ್ರವೇಟ್ ಐ', ಪ್ಯಾರೀಸ್ ಮೂಲದ 'ಲಿ ಕಾನಾರ್ಡ್ ಎನ್‌ಚೇನ್' ಹಾಗೂ ನ್ಯೂಯಾರ್ಕ್ ಮೂಲದ 'ನ್ಯೂಯಾರ್ಕರ್' ನೆನಪಾಗುತ್ತದೆ.

ನಿಜ, ನಾನು 'ಲಂಕೇಶ್ ಪತ್ರಿಕೆ'ಯನ್ನು ತುಂಬಾ ಉನ್ನತ ಕಂಪನಿಗಳಿಗೆ ಹೋಲಿಸುತ್ತಿದ್ದೇನೆ. ಆದರೆ ಮೇಲೆ ತಿಳಿಸಿರುವ ಎಲ್ಲಾ ಪತ್ರಿಕೆಗಳು ಹಾಸ್ಯ ಟೀಕೆ, ವಿಡಂಬನೆ, ಗುಟ್ಟುರಟ್ಟು ಮಾಡುವುದು, ಸ್ಕ್ಯಾಂಡಲ್ ಎಲ್ಲವನ್ನೂ ಮೇಳೈಸಿ ಹಂತಹಂತವಾಗಿ ಯಶಸ್ಸಿನ ವಿರಳತದ ಹಾದಿಯಲ್ಲಿ ಸಾಗಲು ಯತ್ನಿಸಿದವು.

ಹಾಸ್ಯಕ್ಕೆ ಒತ್ತುಕೊಟ್ಟ ಪತ್ರಿಕೆಗಳ ಆಯಸ್ಸು ಭಾರತದಲ್ಲಿ ಬಹಳ ಕಡಿಮೆ. 2003ರಲ್ಲಿ ಕಡೇ ಪಕ್ಷ ಇಂಗ್ಲಿಷಿನಲ್ಲೂ ಪೂರ್ಣ ಪ್ರಮಾಣದ ಇಲ್ಲವೇ ಅಲ್ಪ ಪ್ರಮಾಣದ ಹಾಸ್ಯ ಪ್ರಧಾನದ ವಾರಪತ್ರಿಕೆಗಳಾಗಲಿ, ಟ್ಯಾಬ್ಲಾಯ್ಡ್‌ಗಳಾಗಲಿ ಇಲ್ಲವೇ ಇಲ್ಲ. ಹಲವು ಪತ್ರಿಕೆಗಳು ಈ ನಿಟ್ಟಿನಲ್ಲಿ ಅಸಂಬದ್ಧ ಪ್ರಯತ್ನ ನಡೆಸಿ ಕೊನೆಗೆ ದಿವಾಳಿಯೆದ್ದಿವೆ. ಆದರೆ ಸ್ವತಂತ್ರ ಭಾರತದಲ್ಲಿ ಕೇವಲ 'ಶಂಕರ್ ವೀಕ್ಲಿ' ಎಂಬ ವಾರಪತ್ರಿಕೆ ಮಾತ್ರ ಹಾಸ್ಯ ಪ್ರಧಾನವಾಗಿತ್ತು. ಆದರೂ ಕ್ರಮೇಣ ತನ್ನ ಅಸಂಖ್ಯಾತ ಗುಣಗಳಿಂದಾಗಿ ಕೊನೆಗೆ ರಾಜಕೀಯ ಹಾಗೂ ರಾಜಕಾರಣಿಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ ಅದಕ್ಕೆ ಪತ್ರಿಕೆಯನ್ನು ಕೇಂದ್ರೀಕರಣಗೊಳಿಸಿತು.

ಮನುಷ್ಯನ ಸ್ವಪ್ರತಿಷ್ಠೆಯನ್ನು ನಿಗ್ರಹಿಸಲು, ಸ್ವಯಂ ಪರಿಹಾಸ್ಯಕ್ಕೆ, ವಿನೋದ ಜ್ಞಾನ ಅಗತ್ಯ. ರೋಷ, ದ್ವೇಷ, ಅಟ್ಟಹಾಸಗಳಲ್ಲಿ ಮುಳುಗಿಹೋಗಿರುವ ಮಂದಿ ತಮ್ಮನ್ನು ನೋಡಿಕೊಂಡು ತಾವೇ ನಗಲಾರರು. ಸರಿ ಪ್ರಮಾಣದ ಜ್ಞಾನವೇ ಅವರಿಗಿರುವುದಿಲ್ಲ. ರಾಜಧಾನಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಈ ರಾಜಕಾರಣಿಗಳು, ಮಂತ್ರಿಗಳು ಥಳಾಗಿ ಎದ್ದು ಕಾಣಿಸಿಕೊಳ್ಳುತ್ತಾ ಅವರು ಪ್ರದರ್ಶಿಸುವ ಕೃತಕ ನಯಗಾರಿಕೆ, ಮುಖಸ್ತುತಿ, ಉತ್ಪ್ರೇಕ್ಷೆಯ ಹೊಗಳಿಕೆ, ಕೈಮುಗಿಯಲು ಮುನ್ನುಗ್ಗುವ ಪರಿ ನಿಜಕ್ಕೂ ನೋಡಲು ಒಳ್ಳೆಯ ಕಾಮಿಡಿ.

ಭಾರತೀಯರು ಒಟ್ಟಾರೆ ಹಾಸ್ಯ ಪ್ರವೃತ್ತಿ ಇಲ್ಲದವರು ಎಂಬುದನ್ನು ಈ ಪ್ರಬಂಧದಲ್ಲಿ ಹೇಳದೆಹೋದರೆ ಅದು ಅಸಂಸ್ಕೃತಿ ಹಾಗೂ ಅನ್ಯಾಯದ ತೀರ್ಮಾನವಾಗುತ್ತದೆ. ಆದಾಗ್ಯೂ, ವಾಸ್ತವದಲ್ಲಿ ಒಮ್ಮೆ ನಾವು ಅಧಿಕಾರ, ಪದವಿಯ ಪೋಷಾಕು ಧರಿಸಿದೆವೆಂದರೆ ನಾಟಕದ ಪಾತ್ರಗಳಂತೆ ರೂಪಾಂತರಗೊಳ್ಳುತ್ತೇವೆ. ಸ್ವಯಂ ಪರಿಹಾಸದ ಸಾಮರ್ಥ್ಯವೇ ಇಲ್ಲವಾಗುತ್ತದೆ. ನಮ್ಮ ನ್ಯೂನತೆಗಳು, ಅತಿರೇಕಗಳು, ದಿಢೀರನೆ ಅದೃಶ್ಯವಾಗುತ್ತವೆ. ಈ ಸಂಸ್ಕೃತಿಗೆ ತುರ್ತು ಚಿಕಿತ್ಸೆ ಎಂದರೆ ಅದು ಹಾಸ್ಯ.

ಈ ಸಮಸ್ಯೆಗೆ ಉಪಶಮನ ನೀಡಲು ಪ್ರಾಯಶಃ ಲಂಕೇಶ್ ಪತ್ರಿಕೆಯ ದೆಹಲಿ ಮುದ್ರಣದ ಇಂಗ್ಲಿಷ್ ಅವತರಣಿಕೆಯ ಅಗತ್ಯವಿದೆ. ಒಂದು ವಿಷಯದ ಬಗ್ಗೆ ನಾನು ಗ್ಯಾರಂಟಿ ಕೊಡಬಲ್ಲೆ; ಪತ್ರಿಕೆಗೆ ಸಾಮಗ್ರಿಯ ಕೊರತೆ ಖಂಡಿತ ಬಾರದು."

ಮೆಹತಾ ಅವರು ಒಂದು ಬೀದಿ ನಾಯಿಯನ್ನು ಸಾಕುತ್ತಿದ್ದರು. ಆ ನಾಯಿಗೆ ಅವರಿಟ್ಟಿದ್ದ ಹೆಸರು 'ಎಡಿಟರ್'. ಯಾರಾದರೂ "ನೀವೇ ಓರ್ವ ಎಡಿಟರ್ ಆಗಿದ್ದು ಯಾಕೆ ನಿಮ್ಮ ನಾಯಿಗೆ ಅದೇ ಹೆಸರನ್ನು ಇಟ್ಟಿದ್ದೀರಿ?" ಎಂದು ಪ್ರಶ್ನಿಸಿದರೆ ಮೆಹತಾ ಅವರು ಕೊಡುತ್ತಿದ್ದ ಉತ್ತರ "ಯಾಕೆ ಅಂದರೆ ಎಲ್ಲಾ ಸಂಪಾದಕರಂತೆ ನನ್ನ ನಾಯಿಯೂ ಹಠಮಾರಿ ಮತ್ತು ಮೊಂಡುಸ್ವಭಾವದ್ದು. ತನಗೆ ಎಲ್ಲಾ ಗೊತ್ತು ಎಂಬ ನಿಲುವಿನದ್ದು. ಸ್ವಪ್ರತಿಷ್ಠೆಯಿಂದ ತುಂಬಿಹೋಗಿರುವ ಸಂಪಾದಕರನ್ನು - ಸ್ವತಃ ನಾನೂ ಸೇರಿದಂತೆ - ಒಂದಿಷ್ಟು ತಮಾಷೆ ಮಾಡಲು ನನ್ನ ನಾಯಿಗೆ ರೂಪಕವಾಗಿ ಎಡಿಟರ್ ಎಂದೇ ಹೆಸರಿಟ್ಟಿದ್ದೇನೆ."

ಮುಖ್ಯವಾಹಿನಿಯ ಮಾಧ್ಯಮಗಳು ಕಾರ್ಪೊರೇಟೀಕರಣಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಜಾತ್ಯತೀತ ಮತ್ತು ಪ್ರಾಮಾಣಿಕ ಸಂಪಾದಕರಾಗಿದ್ದ ವಿನೋದ್ ಮೆಹತಾ ಇನ್ನಷ್ಟು ಕಾಲ ನಮ್ಮೊಂದಿಗೆ ಇರಬೇಕಿತ್ತು.

● ಗೌರಿ

ಅಂಬಿಗಾ ನಾ ನಿನ್ನ ನಂಬಿದೆ

ಮಹಿಳಾ ದಿನಾಚರಣೆಯಂದು "ಅಂಬಿಗ ನಾನಿನ್ನ ಬಿದೆ. ಜಗದಂಬಾರ್ ನಿನ್ನ ನಾ ನಂಬಿದೆ" ಎಂದು ಡೇಳುತ್ತ ಸಿದ್ದಾಮಯ್ಯನನ್ನ ತದೇಕಚಿತ್ತದಿಂದ ನೋಡುತ್ತ ನಪದದ ನೃತ್ಯ ಮಾಡಿದ ಮೋಟಮ್ಮನ ಮೋಡಿ ಏನೂ ರ್ಗಲಿಲ್ಲವಂತಲ್ಲಾ. ಅದಕ್ಕೂ ಮೊದಲು ಮೋಟಮ್ಮನನ್ನು ಬ್ಬಿಸಿದ ಮಹಿಳಾ ಮಣಿಗಳು, "ನಿಜಕ್ಕೂ ನೀವು ಮಂತ್ರಿ, ಖ್ಯಮಂತ್ರಿಯಾಗಲು ಯೋಗ್ಯರು" ಎಂದು ಹೊಗಳಿ, ರಿ ಮಾತು ಸಿದ್ದುಗೂ ತಲುಪುವಂತೆ ಮಾಡಿದ್ದರಂತಲ್ಲಾ. ಗುಳುನಗಲೂ ಚೌಕಾಸಿ ಮಾಡಿದ ಸಿದ್ದು ಯಾಕೆ ೋಟಮ್ಮನ ಕಡೆ ಮನಸು ಮಾಡಲಿಲ್ಲ ಅಂದರೆ, ೋಟಮ್ಮ ಇಂದಿರಾ ಗಾಂಧಿ ಕಾಲದ ನಾಯಕಿ, ಶಿಕ್ಷಣ ಖೆಯ ಗುಮಾಸ್ತೆಯನ್ನು ಡಿ.ಬಿ. ಚಂದ್ರೇಗೌಡ ಕರೆದು ಂಗ್ರೆಸ್ ಟಿಕೆಟ್ ಕೊಟ್ಟಿದ್ದರಿಂದ ಎಮ್ಮೆಲ್ಲೆಯಾದರು. ಗಾಗಿ ಚಂದ್ರೇಗೌಡನೇ ಆಕೆಯ ಗಾಡ್‌ಫಾದರ್. ಇನ್ನ ಸ್ಎಂ ಕೃಷ್ಣ ಆಕೆಯನ್ನು ಮಂತ್ರಿ ಮಾಡಿದರು. ರಾಣಿ ೀಶ್ ಜೊತೆ ಸೇರಿಕೊಂಡು ಹಾಡೇಳುತ್ತ ಕವನ ಬರೆಯುತ್ತ ಲ ಹಾಕಿದ ಮೋಟಮ್ಮ ಬೆಂಗಳೂರಲ್ಲಿ ಭವ್ಯವಾದ ನೆ ಕಟ್ಟಿಕೊಂಡು ಹಾಯಾಗಿದ್ದಾರೆ. ಆದಕ್ಕಾಗಿಯೇ ೂಡಿಗೆರೆಯಲ್ಲಿ ನಿಂತ ಚಂದ್ರಪ್ಪನ ಪರ ಓಟು ಕೇಳಲಿಲ್ಲ, ಕ್ಕಮಗಳೂರು ಶಾಂತೇಗೌಡನ ಪರ ಮತ ಯಾಚಿಸಲಿಲ್ಲ, ೋಗಲಿ ಈ ಸರ್ಕಾರದ ದಲಿತ ಕಾರ್ಯಕ್ರಮಗಳನ್ನ ಲ್ಲೂ ಹೇಳಲಿಲ್ಲ. ಹೀಗಿರುವಾಗ ಮೋಟಮ್ಮ ಮಂತ್ರಿ ಗಲು ಯಾವ ಮಾಟ ಮಾಡಿದರೂ ಏನೂ ಗುವುದಿಲ್ಲವಂತಲ್ಲಾ, ಥೂತ್ತೇರಿ!

* * *

"ನಮ್ಮ ಭಾರತೀಯರು ವಿದೇಶಿ ಬ್ಯಾಂಕುಗಳಲ್ಲಿ ರಿಸಿರುವ ಸಾವಿರಾರು ಕೋಟಿ ಹಣವನ್ನು ಪಡಿಸಿಕೊಂಡು ಭಾರತದ ಪ್ರತಿ ಪ್ರಜೆಯ ಅಕೌಂಟಿಗೆ ಲಕ್ಷ ಹಾಕುತ್ತೇನೆ. ಅದಕ್ಕಾಗಿ ನೀವು ನನಗೆ ಕೇವಲ ದಿನ ಈ ದೇಶದ ಪ್ರಧಾನಿ ಮಾಡಿದರೆ ಸಾಕು. ಕಾಂಗ್ರೆಸ್‌ಗೆ ಅರವತ್ತು ವರ್ಷ ಕೊಟ್ಟ ನೀವು ನನಗೆ 60 ದಿವಸ ಕೊಡಲಾರಿರಾ. ಭಾಯಿಯೋ ಔರ್ ಬೆಹನೊ" ಎಂದು ಕೂಗಿದ್ದ ಮೋದಿ, ಆ ಬಗ್ಗೆ ಚಕಾರವೆತ್ತದೆ ಇಡಿಗಂಟು ಕದ್ದ ಕಳ್ಳನಂತೆ ಸುಮ್ಮನಾಗಿದ್ದಾರಂತಲ್ಲಾ. ಮೋದಿ ಪ್ರಧಾನಿಯಾದಂದಿನಿಂದ ಕಾದು ಕಾದು ಸುಸ್ತಾದ ಜನ ಕಡೆಯಬಾರಿ ತಮ್ಮ ಅಕೌಂಟಿಗೆ ಯಾವುದಾದರೂ ಹಣ ಬಂದು ಬಿದ್ದಿದೆಯೇ ಎಂದು ನೋಡಿ ಪೆಚ್ಚಾದರಂತಲ್ಲಾ. ಕಡೆಗೆ ಜೇಟ್ಲಿ ಎಂಬ ಸುಳ್ಳಪ್ಪನನ್ನ ಕೇಳಲಾಗಿ, "ನಾವು ಸದ್ಯಕ್ಕೆ ವಿದೇಶಿ ಬ್ಯಾಂಕುಗಳಲ್ಲಿರುವ ಹಣದ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವ ಚರ್ಚೆಯಲ್ಲಿ ನಿರತರಾಗಿದ್ದೇವೆ. ವಿದೇಶಿ ಬ್ಯಾಂಕಿನಲ್ಲಿರುವ ಹಣದ ತೆರಿಗೆಯಿಂದ ಭವ್ಯ ಭಾರತದ ಅಭಿವೃದ್ಧಿ ಕೈಗೊಳ್ಳುತ್ತೇವೆ. ಅಲ್ಲಿಗೆ ಸದರಿ ಹಣದಿಂದ ಶ್ರೀಸಾಮಾನ್ಯನ ಸೇವೆ ಮಾಡಿದಂತಾಗುತ್ತದೆ. ವಿದೇಶಿ ಹಣ ನೇರ ನಿಮ್ಮ ಅಕೌಂಟಿಗೆ ಬರುತ್ತದೆ ಎಂಬ ಮಾತು ಕೇವಲ ಸಾಂದರ್ಭಿಕವಾದ ಮಾತಷ್ಟೇ. ಎಲ್ಲಾದರೂ ಅಂತಹ ಹಣವನ್ನು ಭಾರತದ ಕೋಟಿ ಕೋಟಿ ಜನರ ಅಕೌಂಟಿಗೆ ಹಾಕಲು ಸಾಧ್ಯವೇ" ಎಂದನಂತಲ್ಲಾ. ಅಪ್ಪಕ್ಕೂ ಸುಳ್ಳಿನಿಂದಲೇ ಹುಟ್ಟಿ, ಸುಳ್ಳಿನಿಂದಲೇ ಬದುಕುತ್ತ, ಅದನ್ನೇ ಹಾಸುಹೊಕ್ಕಾಗಿಸಿಕೊಂಡ ಪಕ್ಕಾ ಕಳ್ಳರ ಮಾತನ್ನು ನಂಬುವಷ್ಟು ಮುಗ್ಧರೇ ಭಾರತೀಯರು, ಥೂತ್ತೇರಿ!!



ಥೂತ್ತೇರಿ

ಯಾಹೂ

* * *

"ಶಿವಮೊಗ್ಗೆಯಲ್ಲಿ ನಡೆದ ಕೋಮು ಗಲಭೆಗೆ ಕಾರಣವಾದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸಂಘಟನೆಯನ್ನು ನಿಷೇಧಿಸಬೇಕು" ಎಂದು ಬಿಜೆಪಿಗಳು ಸರಕಾರವನ್ನು ಒತ್ತಾಯಿಸಿವೆಯಂತಲ್ಲಾ. ಸದರಿ ಒತ್ತಾಯದ ಸಂದರ್ಭದಲ್ಲಿ ಹಾಜರಿದ್ದ ಯು.ಟಿ. ಖಾದರ್ "ಹೌದು, ಜನರ ಪ್ರಾಣಕ್ಕೇ ಸಂಚಕಾರ ತರುವಂತಹ ಸೋಂಕಿಗೆ ನಿಷೇಧ ಹೇರಬೇಕೆಂದು ನಾನಾಗಲೇ ವೈದ್ಯರಿಗೆ ಸಲಹೆ ಕೊಟ್ಟಿದ್ದೇನೆ" ಎಂದರಂತಲ್ಲಾ. ಇದು ಅರ್ಥವಾಗದ ಚೆಡ್ಡಿಗಳು "ವೈದ್ಯರಿಗೇಕೆ ಸಲಹೆ ಕೊಟ್ಟಿದ್ದೀರಿ?" ಎಂದು ಕೇಳಲಾಗಿ, "ಎಚ್1ಎನ್1 ಬಹಳ ಡೇಂಜರು ಸಾರ್. ಈಗಾಗ್ಲೆ ಎಷ್ಟು ಜನ ಬಲಿಯಾಗಿದ್ದಾರೆ ಗೊತ್ತಾ? ಅದ್ಕೆ ನಾವು ಸೀರಿಯಸ್ಸಾಗಿ ವರ್ಕ್ ಮಾಡ್ತಾಯಿದ್ದಿವಿ" ಎಂದು ಖಾದರ್ ವಿವರಿಸಿದರಂತಲ್ಲಾ. ಚೆಡ್ಡಿಗಳು "ಓಹೊ, ಈ ಖಾದರ್ ತಲೆಯಲ್ಲಿ ಬರೀ ಎಚ್1ಎನ್1ನ್ನೇ ತುಂಬಿಕೊಂಡಿದೆ" ಎಂದುಕೊಂಡು ಹೊರಟರಂತಲ್ಲಾ. ರಾಷ್ಟ್ರಪಿತ ಗಾಂಧೀಜಿಯನ್ನ ಕೊಂದಾಗ ನಿಷೇಧಗೊಂಡು, ಬಾಬರಿ ಮಸೀದಿ ಕೆಡವಿದಾಗ ನಿಷೇಧಗೊಂಡು, ಇನ್ನೂ ಕೂಡ ದೇಶದ ಮಾನವಂತರ ಕಣ್ಣಿಗೆ ಮಣ್ಣೆರಚುತ್ತಲೇ ಸಾಗುತ್ತಿರುವ ಈ ಚೆಡ್ಡಿಗಳು ಕೇವಲ 8 ವರ್ಷದ ಪಾಪ್ಯುಲರ್ ಸಂಘಟನೆಯನ್ನು ನಿಷೇಧಿಸಲು ಹೋರಾಡುತ್ತಿರುವುದು ನಾಚಿಕೆಗೇಡು ಎಂಬ ಉತ್ತರ ಖಾದರನಿಗೆ ಹೊಳೆಯಲೇ ಯಿಲ್ಲವಂತಲ್ಲಾ. ಆದರೂ "ಈ ಖಾದರ್ ನಮ್ಮನ್ನೇ ಹಂದಿ ಜ್ವರದ ಜನ ಎಂದು ಭಾವಿಸಿದನೋ ಹೇಗೆ" ಎಂದು ಕೊಂಡು ಚೆಡ್ಡಿಗಳು ಬರುತ್ತಾಇದ್ದಾರಂತಲ್ಲಾ, ಥೂತ್ತೇರಿ!!


ಪ್ರಭಾಶೆಟ್ಟಿ, ಪತಿ-ಮಗಳು ಮೇಘನಾಳೊಂದಿಗೆ ಸಂತೋಷದ ಕ್ಷಣಗಳಲ್ಲಿ


ಪ್ರಭಾಳ ಸಹೋದರ ಶಿವಪ್ರಸಾದ್ ಶೆಟ್ಟಿ


ಪ್ರಭಾಳ ಪತಿ ಅರುಣ್‌ಕುಮಾರ್ ಮಾಧ್ಯಮಗಳ ಮುಂದೆ



ಕನ್ನಡ ಕುವರಿಯ ಸಿಡ್ನಿ ದುರಂತ

ಅದು ಯಾವುದೇ ಹಳ್ಳಿಗಾಡಿನ ನಿರ್ಜನ ಪೊದೆಗಂಟಗಳ ಕತ್ತಲ ದಾರಿಯೇನಲ್ಲ. ಆಸ್ಟ್ರೇಲಿಯಾದ ರಾಜಧಾನಿ ಸಿಡ್ನಿಯ ಹೊರವಲಯದ ಜನನಿಬಿಢ ಪ್ಯಾರಮಟ್ಟಾ ಬಡಾವಣೆಯ ರೈಲ್ವೇ ಸ್ಟೇಷನ್ ಪಕ್ಕದ ಏರಿಯಾ. ಸಮಯ ರಾತ್ರಿ ಒಂಬತ್ತೂವರೆಯಿರಬೇಕು. ವೆಸ್ಟ್‌ಮಿಡ್ ಉಪನಗರದ ವ್ಯಾಪ್ತಿಗೊಳಪಡುವ ಈ ರೈಲು ನಿಲ್ದಾಣಕ್ಕೆ ತನ್ನ ಬದುಕಿನ ಕಟ್ಟ ಕಡೆಯ ಪಯಣವೋ ಎಂಬಂತೆ ಬಂದಿಳಿದವಳ ಹೆಸರು ಪ್ರಭಾ ಅರುಣ್‌ಕುಮಾರ್ ಶೆಟ್ಟಿ.


41 ವರ್ಷದ ಬೆಂಗಳೂರು ಮೂಲದ ವೃತ್ತಿಯಿಂದ ಐಟಿ ಕನ್ಸಲ್ಟೆಂಟ್ ಆಗಿರುವ ಪ್ರಭಾ ಪ್ಯಾರಮಟ್ಟಾ ರೈಲ್ವೇ ನಿಲ್ದಾಣದಲ್ಲಿಳಿದವಳು ಪಕ್ಕದ ಜನದಟ್ಟಣೆಯ ಬೀದಿಯನ್ನು ಹಾಯ್ದೇ ತನ್ನ ಅಪಾರ್ಟ್‌ಮೆಂಟಿನ ಹಾದಿ ಹಿಡಿದು ನಡೆಯುತ್ತಿದ್ದಾಳೆ. ಆಕೆಯ ಅಪಾರ್ಟ್‌ಮೆಂಟಿರುವುದು ಕೇವಲ 500 ಮೀಟರ್ ದೂರದಲ್ಲಿ, ಆದರೆ ರೈಲು ನಿಲ್ದಾಣಕ್ಕೂ ಅಪಾರ್ಟ್‌ಮೆಂಟಿಗೂ ಮಧ್ಯೆ ಪಾರ್ಕೊಂದಿದೆ. ಅದರ ಹೆಸರು ಪ್ಯಾರಮಟ್ಟಾ ಪಾರ್ಕ್!

ರಾತ್ರಿ ಒಂಬತ್ತೂವರೆಯ ಮಬ್ಬುಗತ್ತಲಲ್ಲಿ ಆ ಪಾರ್ಕ್ ಪಕ್ಕದ ಕಾಲುದಾರಿ ಹಿಡಿದು ತನ್ನ ಅಪಾರ್ಟ್‌ಮೆಂಟ್ ಸೇರಿಕೊಳ್ಳುವ ತವಕದಲ್ಲಿದ್ದ ಪ್ರಭಾ ಯಥಾವತ್ತಿನಂತೆ ತನ್ನ ಮೊಬೈಲ್ ಫೋನಿನಿಂದ ಬೆಂಗಳೂರಿನಲ್ಲಿದ್ದ ಪತಿ ಅರುಣ್‌ಕುಮಾರ್‌ಗೆ ಫೋನಾಯಿಸಿದ್ದಾರೆ. ಅದು ಪಾರ್ಕ್ ಕಾಲುದಾರಿಯ ಪ್ರಖರ ಬೆಳಕಿಲ್ಲದ ಮಬ್ಬಾದ ತಾಣ. ಯಾವುದೋ ನೆರಳು ಸರಿದಂತೆ ಇನ್ನಾರೋ ತನ್ನನ್ನು ಸಮೀಪಿಸಿದಂತೆ ಹೆಜ್ಜೆ ಸಪ್ಪಳ. ತಿರುಗಿ ನೋಡುತ್ತಾಳೆ ಅದು ಸಾವಿನಂತಿದ್ದ ಮಾನವಾಕೃತಿ. ಇತ್ತ ಮೊಬೈಲಿನಲ್ಲಿ ಮಾತಾಡುತ್ತಿದ್ದ ಪತಿ ಅರುಣ್‌ಕುಮಾರ್‌ಗೆ ತನ್ನ ಪತ್ನಿ ಕಿಟಾರನೆ ಕಿರುಚಿಕೊಂಡಿದ್ದು, ಯಾರೋ ಇಂಗ್ಲಿಷಿನಲ್ಲಿ ಗುರುಗುಟ್ಟಿದ್ದು, ಎಳೆದಾಟದ ಸದ್ದು ಅಸ್ಪಷ್ಟವಾಗೇ ಕೇಳಿ ಬರುತ್ತಿತ್ತು.

ಪ್ರಭಾಳ ಆರ್ತನಾದದ ಮಧ್ಯೆಯೇ ಆಕೆ ಇಂಗ್ಲಿಷಿನಲ್ಲಿ ಚೀರಾಡುತ್ತಿದ್ದದ್ದು ಸ್ಪಷ್ಟವಾಗೇ ಕೇಳಿಸುತ್ತಿತ್ತು, **Take whatever you want, my purse, my money.... Just dont hurt me** ಅಂದರೆ 'ನಿನಗೆ ಏನು ಬೇಕಾದರೂ ತೆಗೆದುಕೋ. ನನ್ನ ಪರ್ಸು ನನ್ನ ದುಡ್ಡು.... ಆದರೆ ನನಗೇನೂ ಮಾಡಬೇಡ!'

ಕ್ಷಿಪ್ರವಾಗಿ ಏಕಾಏಕಿ ಸಂಭವಿಸಿದ ಆಘಾತವನ್ನೇ ನಿರೀಕ್ಷಿಸದಿದ್ದ ಪತಿ ಅರುಣ್ ಏನದು, ಏನಾಗ್ತಿದೆ? ಎಂದು ಕೇಳುತ್ತಿರುವಾಗಲೇ ಏನೋ ಎಳೆದಾಟ, ಕೊಸರಾಟ ನಡೆದಂತೆ ಅರೆಕ್ಷಣದಲ್ಲೇ ಪ್ರಭಾಳ ಚೀತ್ಕಾರ ಕೇಳಿಬಂತು. "ಡಾರ್ಲಿಂಗ್... ಅವ್ನು ನನ್ನನ್ನು ಕುಯ್ದು ಬಿಟ್ಟ...!!"

ಅಷ್ಟೇ ಏನೋ ಭಾರದ ವಸ್ತುವೊಂದು ಬಿದ್ದಂತೆ, ಇನ್ನೇನು ಸರಿದಾಡಿದಂತೆ ಪತ್ನಿಯ ನರಳಾಟ, ಚೀರಾಟದ ನಡುವೆಯೇ ಆಕೆಯ ಫೋನು ಡಿಸ್‌ಕನೆಕ್ಟಾಯಿತು. 'ಡಾರ್ಲಿಂಗ್... ನನ್ನನ್ನು ಕುಯ್ದುಬಿಟ್ಟ..!' ಎಂಬ ಪತ್ನಿಯ ಅಂತಿಮ ಚೀತ್ಕಾರಕ್ಕೆ ಇತ್ತ ಪತಿ ಅರುಣ್‌ಶೆಟ್ಟಿಗೆ ತಲೆಸುತ್ತು ಬಂದಂತಾಯ್ತು, ಏನಾಗುತ್ತಿದೆ ಎಂಬುದೂ ಅರ್ಥವಾಗದೇ ಅರುಣ್ ಆಕೆಯ ಸಿಡ್ನಿಯ ರೂಂಮೇಟ್‌ಗೆ ಫೋನಾಯಿಸಿದ.


ಸಿಸಿಟಿವಿಯಲ್ಲಿ ಸೆರೆಯಾಗಿರುವ ಪ್ರಭಾ ಶೆಟ್ಟಿ

ಆಕೆಗಿದು ಅರ್ಥವಾಗದ ಆಘಾತವೇ. ಪತ್ನಿಯ ಸಹೋದ್ಯೋಗಿಯೊಬ್ಬರಿಗೆ ಫೋನು ಹಚ್ಚಿ ನೋಡಿದ. ಅವರಿಗೇನೂ ಅರ್ಥವಾಗಲಿಲ್ಲ.

ಇತ್ತ ಏಕಾಏಕಿ ಕಡಿತಗೊಂಡ ಪ್ರಭಾಳ ಮೊಬೈಲಿಗೆ ಕೊನೆಯ ಕರೆಯಲ್ಲೇ ಆಕೆಯ ಭಯಾನಕ ಅಂತ್ಯದ ಚಿತ್ರಣವಿತ್ತು, ಪ್ರತಿನಿತ್ಯ ಆಕೆ ಪ್ಯಾರಮಟ್ಟಾ ರೈಲ್ವೇ ಸ್ಟೇಷನ್ನಿನಲ್ಲಿ ಇಳಿದದ್ದೇ ತನ್ನ ಅಪಾರ್ಟ್‌ಮೆಂಟಿನ ರೂಂಮೇಟ್‌ಗಳಿಗೆ ಫೋನ್ ಮಾಡುತ್ತಿದ್ದದ್ದು ವಾಡಿಕೆ. ರೂಂಮೇಟ್‌ಗಳೇ ರೈಲ್ವೇ ಸ್ಟೇಷನ್ನಿನತನಕ ಬಂದು ಆಕೆಯನ್ನು ಕರೆದೊಯ್ಯುತ್ತಿದ್ದರು. ಅದು ಆಸ್ಟ್ರೇಲಿಯಾ ಎಂಬ ಅತ್ಯಾಧುನಿಕ ರಾಷ್ಟ್ರದಲ್ಲಿ ಪದೇಪದೇ ಭಾರತೀಯರ ಮೇಲಾಗುತ್ತಿರುವ ದಾಳಿ, ಹಲ್ಲೆ ಕೊಲೆ, ಅತ್ಯಾಚಾರಗಳು ಹುಟ್ಟು ಹಾಕಿರುವ ಟೆರರ್. ಆದರಲ್ಲೂ ಪ್ಯಾರಮಟ್ಟಾ ಪಾರ್ಕ್ ಹೇಳಿಕೇಳಿ **Funks** ಅಂದರೆ ಪುಂಡುಪೋಕರಿಗಳ ಕೂಡು ತಾಣ. ಈ ಹಿಂದೆ ಒಂದೆರಡು ರಾಬರಿ, ಪಾರ್ಕ್ ಪಕ್ಕ ನಡೆದುಹೋಗುತ್ತಿದ್ದವರನ್ನು ಅಡ್ಡಗಟ್ಟಿದ್ದು, ಯಾರೋ ಹೊಡೆದಾಡಿಕೊಂಡಿದ್ದು ಇನ್ನಾರೋ ಕತ್ತಲಲ್ಲಿ ಕೂತು ಡ್ರಗ್ ಸೇವಿಸುತ್ತಿದ್ದದ್ದು, ನಿಗೂಢ ಪಡ್ಡೆಗಳು, ಕುಡುಕರು, ಯಾರ್‍ಯಾರೋ ಆಗಂತುಕರು ಠಳಾಯಿಸುವುದು ಇತ್ಯಾದಿಗಳಿಂದಲೇ ಪ್ಯಾರಮಟ್ಟಾ ಪಾರ್ಕ್‌ಗೊಂದು ಕುಖ್ಯಾತಿಯಿತ್ತು.

ಇದು ಗೊತ್ತಿದ್ದೇ ಪ್ರಭಾರ ರೂಂಮೇಟ್‌ಗಳು ಆಕೆಯನ್ನು ರೈಲ್ವೇ ಸ್ಟೇಷನ್ನಿನಿಂದ ಅಪಾರ್ಟ್‌ಮೆಂಟಿನ ತನಕ ಕರೆದೊಯ್ಯುತ್ತಿದ್ದದ್ದು. ಆದರೆ ಅದೇನಾಯಿತೋ ಮಾರ್ಚ್ 7ರ ಶನಿವಾರ ರಾತ್ರಿ ಪ್ರಭಾ ತನ್ನ ರೂಂಮೇಟ್‌ಗೆ ಫೋನ್ ಮಾಡುವುದನ್ನೇ ಮರೆತುಬಿಟ್ಟರು. ಅದು ವೀಕೆಂಡ್ ವಿರಾಮದಲ್ಲಿದ್ದ ತನ್ನ ಗೆಳತಿಯರಿಗೇಕೆ ತೊಂದರೆಯೆಂಬ ಕಾಳಜಿಯ ಫಲ. ಇನ್ನೇನು ಪಾರ್ಕ್ ಸಮೀಪಿಸಿದ್ದೇ ಏನು ನಡೆಯಬಾರದಿತ್ತೋ ಅದೇ ಸಂಭವಿಸಿತ್ತು. ಆಕ್ರಂದನ ಕೇಳಿದ ಯಾರೋ ದಾರಿಹೋಕರು ಧಾವಿಸಿ ಬರುವ ಹೊತ್ತಿಗೆ ದಾಳಿಕೋರನೇ ನಾಪತ್ತೆ, ಪ್ರಭಾ ಪಾರ್ಕ್‌ನ ರಕ್ತದ ರಾಡಿಯ ಮಧ್ಯೆ ನರಳಾಡುತ್ತಿದ್ದರು. ನೆರವಿಗೆ ಬಂದವರು ಪೊಲೀಸರಿಗೆ ಸುದ್ದಿ ಮುಟ್ಟಿಸಿ ಅಲ್ಲಿಗೆ ಪೊಲೀಸರು ಬರುವಷ್ಟರಲ್ಲೇ ಪ್ರಭಾ ಪ್ರಜ್ಞಾಹೀನಸ್ಥಿತಿ ತಲುಪಾಗಿತ್ತು, ಅಲ್ಲಿನ ಪೊಲೀಸರು ವೆಸ್ಟ್‌ಮೀಡ್‌ನ ಆಸ್ಪತ್ರೆಗೆ ಪ್ರಭಾರನ್ನು ಹೊತ್ತೊಯ್ದರಾದರೂ ರಾತ್ರಿ 12.45ರ ಹೊತ್ತಿಗೆ ಆಕೆಯ ಉಸಿರೇ ನಿಂತುಹೋಗಿತ್ತು.

ಇದು ಆಸ್ಟ್ರೇಲಿಯಾದ ಸಿಡ್ನಿಯ ಯಾವುದೋ ಮೂಲೆಯೊಂದರಲ್ಲಿ ನಮ್ಮೂರಿನ ಹೆಣ್ಣುಮಗಳೊಬ್ಬಳಿಗಾದ ದುರ್ಗತಿ. ಏನಿದು, ಯಾಕಾಯಿತು, ಕೊಂದವರ್‍ಯಾರು, ಉದ್ದೇಶವೇನಿತ್ತು; ಎಲ್ಲವೂ ನಿಗೂಢ. ಕೊಂದ ರೀತಿ ಎಂತಹ ಪೈಶಾಚಿಕ. ಪ್ರಭಾ ಪ್ರಾಯದ ಹುಡುಗಿಯೇನಲ್ಲ, ಸಹಸ್ರಾರು ಮೈಲಿ ದೂರದ ತನ್ನದಲ್ಲದ, ಹೊತ್ತು ಗೊತ್ತಿಲ್ಲದೆ ದುಡಿದು ತನ್ನ ಪಾಡಿಗೆ ತಾನಿದ್ದ ಏಕಾಂಗಿಯನ್ನು ಈ ರೀತಿ ಕೊಲ್ಲಲು ಕಾರಣಗಳೇ ಇಲ್ಲ, ಪ್ರಭಾ ಕರ್ನಾಟಕದ ಹೆಣ್ಣುಮಗಳು. ಕಳೆದ ಹದಿನೈದು ವರ್ಷಗಳಿಂದ ತನ್ನ ಪತಿ ಅರುಣ್‌ಕುಮಾರ್ ಶೆಟ್ಟಿ ಜೊತೆ ಬೆಂಗಳೂರಿನ ಬಸವೇಶ್ವರ ನಗರದಲ್ಲಿ ವಾಸಿಸುತ್ತಿರುವಾಕೆ. ಪ್ರತಿಷ್ಠಿತ ಮೈಂಡ್ ಟ್ರೀ ಎಂಬ ಐಟಿ ಕಂಪೆನಿಯಲ್ಲಿ ಆಕೆ ಸೀನಿಯರ್ ಐಟಿ ಕನ್ಸಲ್ಟೆಂಟ್. ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕು ಕಲ್ಲಡ್ಕ ಸಮೀಪದ ಅಮ್ಟೂರು ಆಕೆಯ ಹುಟ್ಟೂರು.

ಹುಟ್ಟಾ ರೈತಾಪಿ ಮನೆತನದ ಮಹಾಬಲಶೆಟ್ಟಿ ಮತ್ತು ಸರೋಜಿನಿ ಶೆಟ್ಟಿ ದಂಪತಿಗಳ ಮೂರು ಹೆಣ್ಣು ಮೂವರು ಗಂಡುಮಕ್ಕಳ ಪೈಕಿ ಪ್ರಭಾರೇ ಹಿರಿಯವರು. ಸುಳ್ಯದ ಕೆವಿಜಿ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಮದುವೆಯಾಗಿದ್ದು ಬೆಂಗಳೂರಿನ ಅರುಣ್‌ಕುಮಾರ್ ಶೆಟ್ಟಿಯನ್ನು, ವೃತ್ತಿಯಿಂದ ಸಿವಿಲ್ ಇಂಜಿನಿಯರ್ ಆಗಿರುವ ಅರುಣ್‌ಶೆಟ್ಟಿಗೆ ತನ್ನದೇ ಕಟ್ಟಡ ನಿರ್ಮಾಣ ಸಂಸ್ಥೆಯಿದೆ. 2002ರಲ್ಲಿ ಮದುವೆಯಾದ ಹೊಸದರಲ್ಲಿ ಪತಿ ಜೊತೆಗೇ ಬೆಂಗಳೂರಿನ ಶೆಟ್ಟಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪ್ರಭಾ ಪ್ರತಿಷ್ಠಿತ 'ಮೈಂಡ್ ಟ್ರೀ' ಕಂಪೆನಿ ಸೇರಿದ್ದು 2010ರಲ್ಲಿ, ಮಗಳು




ಮೈಸೂರು ರಸ್ತೆಯ ಮೈಂಡ್ ಟ್ರೀ ಕಾಂಪಸ್

ಒಂದೇ ತಿಂಗಳಲ್ಲಿ ಮೂರು ದಾಳಿ ಮಹಿಳೆಯರ ಪಾಲಿಗೆ ಈ ಬಡಾವಣೆಯೇ ನರಕದ ದ್ವಾರ!

ಪ್ರಭಾ ಕೊಲೆಯಾದ ಸಿಡ್ನಿಯ ವೆಸ್ಟ್‌ಮಿಡ್ ಬಡಾವಣೆ ಮತ್ತು ಅಲ್ಲಿನ ಪ್ಯಾರಮಟ್ಟಾ ಏರಿಯಾದಲ್ಲಿ ಇತ್ತೀಚೆಗೆ ಒಂದರ ಮೇಲೊಂದರಂತೆ ಮಹಿಳೆಯರ ವಿರುದ್ಧದ ಅಪರಾಧಿ ಪ್ರವೃತ್ತಿ ಭುಗಿಲೆದ್ದಿದೆ. ಕಳೆದ ನವೆಂಬರ್ ತಿಂಗಳೊಂದರಲ್ಲೇ ಮೂವರು ಮಹಿಳೆಯರನ್ನು ಅಲ್ಲಿನ ಸ್ಟ್ರೀಟ್ ಫಂಕ್ಸ್ ಅಂದರೆ ಬೀದಿ ಕಾಮಣ್ಣರು ಪೀಡಿಸಿದ ಪ್ರಕರಣಗಳಾಗಿವೆ. 2014ರ ನವೆಂಬರ್ 5ರಂದು ಇದೇ ಬಡಾವಣೆಯ ಅಂಡರ್‌ಪಾಸ್‌ನಲ್ಲಿ ನಡೆದುಹೋಗುತ್ತಿದ್ದ 21ರ ಹರೆಯದ ಯುವತಿಯೊಬ್ಬಳನ್ನು ಬೀದಿ ಕಾಮುಕನೊಬ್ಬ ಎಳೆದೊಯ್ದು ಪೀಡಿಸಿದ್ದ. ಇದರ ಮರುದಿನವೇ ಪಕ್ಕದ ಅಲೆಕ್ಸಾಂಡ್ರಾ ವಿವ್ ಎಂಬ ಅಪಾರ್ಟ್‌ಮೆಂಟ್ ಪಕ್ಕ ಒಂಟಿಯಾಗಿ ನಡೆದು ಹೋಗುತ್ತಿದ್ದ 21ರ ಹರೆಯದ ಮಹಿಳೆಯನ್ನು ನಡುರಸ್ತೆಯಲ್ಲೇ ಅತ್ಯಾಚಾರಕ್ಕೆ ಯತ್ನಿಸಲಾಯ್ತು.

ಇದಾಗಿ ಐದನೇ ದಿನಕ್ಕೆ ಅಂದರೆ ನವೆಂಬರ್ 11ರಂದು ಪ್ರಭಾ ಕೊನೆಯುಸಿರೆಳೆದ ವೆಸ್ಟ್‌ಮಿಡ್ ಆಸ್ಪತ್ರೆಯ ಪಕ್ಕದಲ್ಲೇ ತನ್ನ ಕೆಲಸ ಮುಗಿಸಿಕೊಂಡು ಕಾರಿಗೆ ಹತ್ತುತ್ತಿದ್ದ 22ರ ಯುವತಿಯ ಮೇಲೆ ಮೂರನೇ ದಾಳಿ ನಡೆಯಿತು. ಈ ಮೂರು ದಾಳಿಗಳ ಮುಖ್ಯ ಲಕ್ಷಣವೇ ಆಗಂತುಕನೊಬ್ಬ ಹಿಂದಿನಿಂದ ಯುವತಿಯರನ್ನು ಹಿಂಬಾಲಿಸಿ ಅತ್ಯಾಚಾರಕ್ಕೆ ಯತ್ನಿಸುತ್ತಿದ್ದದ್ದು!


ಎರಡನೇ ಪ್ರಕರಣ ಅಂದರೆ ನವೆಂಬರ್ 6ರಂದು ಯಾವ ಅಲೆಕ್ಸಾಂಡ್ರಾ ವಿವ್ ಅಪಾರ್ಟ್‌ಮೆಂಟ್ ಬಳಿ ಏಕಾಂಗಿಯಾಗಿ ನಡೆದುಕೊಂಡು ಹೋಗುತ್ತಿದ್ದ 21ರ ಯುವತಿಯ ಮೇಲೆ ದಾಳಿಯಾಯಿತೋ ಈಗ ಪ್ರಭಾ ಕೊಲೆಯಾಗಿರುವುದು ಅದೇ ಅಲೆಕ್ಸಾಂಡ್ರಾ ವಿವ್‌ಗೆ ಕೇವಲ 800 ಮೀಟರ್‌ಗಳ ಅಂತರದಲ್ಲಿ!

ಪ್ಯಾರಮಟ್ಟಾ ಬಡಾವಣೆಗುಂಟ ಏಕಾಏಕಿ ತಲೆಎತ್ತಿದ ಒಂಟಿ ಮಹಿಳೆಯರ ಮೇಲಿನ ದಾಳಿಯ ವಿರುದ್ಧ ನ್ಯೂಸೌತ್‌ವೇಲ್ಸ್ ಪೊಲೀಸರು ಇನ್ನಿಲ್ಲದ ಹೋರಾಡಿದರು. Perverts ಅಂದರೆ ಇಂಥ ಬೀದಿ ವಿಕೃತರನ್ನು ಹಿಡಿಯಲೆಂದೇ ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಯಿತು. ಇಲ್ಲಿಗೆ ಮೂರು ತಿಂಗಳ ಹಿಂದೆಯೇ ವೆಸ್ಟ್‌ಮಿಡ್ ಸುತ್ತಮುತ್ತ ಮಹಿಳೆಯರು ಒಂಟಿಯಾಗಿ ಓಡಾಡಕೂಡದೆಂದು ಪೊಲೀಸರು ನೋಟಿಸು, ಪ್ರಚಾರ ಕಾರ್ಯವನ್ನೂ ಹಮ್ಮಿಕೊಂಡರು. ಬಹುಶಃ ಪ್ರಭಾಗೆ ಇದು ಗೊತ್ತಾಗಲಿಲ್ಲವೋ ಅಥವಾ ಗೊತ್ತಿದ್ದೂ 41ರ ಇಳಿವಯಸ್ಸಿನ ತನ್ನನ್ನು ಯಾರೇನು ಮಾಡಿಯಾರು ಎಂಬ ನಿರ್ಲಕ್ಷ್ಯವೋ ಗೊತ್ತಿಲ್ಲ.

ಏನಾಗಬಾರದಿತ್ತೋ ಅದು ನಡೆದೇಹೋಯಿತು. ಮುಗ್ಧೆ ಪ್ರಭಾ ಗೊತ್ತಿದ್ದೂ ದುಸ್ಸಾಹಸಕ್ಕೆ ಕೈಹಾಕಬಾರದಿತ್ತು. ಇದು ಆಸ್ಟ್ರೇಲಿಯಾದ ಸಿಡ್ನಿಯ ಕೇವಲ ಒಂದು ಕೊಂಪೆಯ ವಿಕೃತಿಯಾದರೆ ಅಲ್ಲಿನ ಬೇರೆ ಬೇರೆ ನಗರಗಳಲ್ಲಿ ಇಂಥ ಪ್ರಕರಣಗಳು ಅದೆಷ್ಟೋ ಬೀದಿಬೀದಿಗಳ ತುಂಬಾ ಕೀಚಕರ ಹಿಂಡೆಷ್ಟೋ...?



ಪತ್ರಿಕೆಯೊಂದರಲ್ಲಿ ಪ್ರಕಟವಾದ ಸುದ್ದಿ


ಪ್ರಭಾ ಕೊಲೆ ತನಿಖೆಯಲ್ಲಿ ಸಿಡ್ನಿ ಪೊಲೀಸರು

...ಮೇಘನಾಳಿಗೀಗ ಹತ್ತರ ವಯಸ್ಸು. ನಾಲ್ಕನೇ ತರಗತಿ ...ಮುತ್ತಿದ್ದಾಳೆ.

...ಓದಿದ್ದೇ ಕಂಪ್ಯೂಟರ್ ಸೈನ್ಸ್ ಎಂದಮೇಲೆ ಅದರ ...ದ್ದೇಶ ಕೂಡ ದುಡ್ಡು ದುಡಿಯುವ ಮಾನವ ಯಂತ್ರದಂತಾಗುವುದು ತಾನೆ? ಬೆಂಗಳೂರೆಂಬುದೇ ದೇಶದ ಸಿಲಿಕಾನ್ ಸಿಟಿಯಾಗಿರುವಾಗ ಸಹಜವಾಗೇ ಪ್ರಭಾ ಉನ್ನತ ...ದ್ದೆಯ ಲಕ್ಷ ಲಕ್ಷ ಸಂಬಳದ ಆಮಿಷಕ್ಕೆ ಬಲಿಯಾಗಿದ್ದಾರೆ. ಮೈಸೂರು ರಸ್ತೆಯಲ್ಲಿ 'ಮೈಂಡ್ ಟ್ರೀ ಇನ್‌ಗ್ಲೋಬಲ್ ...ಲೇಜ್'ನಲ್ಲಿ ಐಟಿ ಕನ್ಸಲ್ಟೆಂಟ್ ಆಗಿ ಒಂದು ವರ್ಷ ...ಯುವ ಹೊತ್ತಿಗೇ ಪ್ರಭಾ ತನ್ನ ಶ್ರಮ ಮತ್ತು ಶಿಸ್ತಿನಿಂದ ...ಮನ ಸೆಳೆದಿದ್ದರು. ಅದರ ಪರಿಣಾಮ ಮಾತ್ರ ...ತಟವಾಗಿತ್ತು.

...ಆಸ್ಟ್ರೇಲಿಯಾದಂಥ ಲೋಲುಪ ದೇಶಕ್ಕೆ ಅಗದೀ ...ಮ್ಮದರಕ್ಕೆ ಸಿಗಬಲ್ಲ ಭಾರತದ ಐಟಿ ಜೀತದಾಳುಗಳೇ ...ಚ್ಚು ಇಷ್ಟ. ವಿಪರೀತ ಸಂಬಳ ನೀಡಬೇಕಿಲ್ಲ. ಭಾರತದ ...ದರದಲ್ಲಿ ದುಪ್ಪಟ್ಟು ಸಂಬಳ ಕೊಟ್ಟರೂ ಅದರ ಐದು ಪಟ್ಟು ಆಸ್ಟ್ರೇಲಿಯನ್ ಡಾಲರ್ ದರದ ಸಂಬಳವನ್ನು ಲಪಟಾಯಿಸಬಹುದಲ್ಲ? ಆಸ್ಟ್ರೇಲಿಯನ್ ತಂತ್ರಜ್ಞರಾದರೆ ಬೇಕಾಬಿಟ್ಟಿ ಸೌಲಭ್ಯವನ್ನೂ ಕೇಳುತ್ತಾರೆ. ವೀಕೆಂಡ್ ಮೋಜು ಮಸ್ತಿ ಬಿಟ್ಟಿರಲಾರರು. ಓವರ್‌ಟೈಂ ಕೆಲಸಕ್ಕೂ ಚಕ್ಕರ್ ಹಾಕುತ್ತಾರೆ. ಆದರೆ ಭಾರತೀಯ ಕೆಲಸಗಾರರು ಹಾಗಲ್ಲ. ತಲೆತಗ್ಗಿಸಿ ದುಡಿಯುತ್ತಾರೆ. ಕೆಲಸದ ನಿಯಮ ಮತ್ತು ಷರತ್ತುಗಳು ಈ ದೇಶದ ಕಾಯ್ದೆ ಮತ್ತು ನಿಯಮಾವಳಿಗೆ ತಕ್ಕಂತೆ ಇಲ್ಲಿನ ರೂಪಾಯಿ ಮೌಲ್ಯದಲ್ಲೇ ಒಪ್ಪಂದವಾಗಿರುತ್ತದೆಯಾದ್ದರಿಂದ ಹತ್ತು ಪರ್ಸೆಂಟ್ ಸಂಬಳ ನೀಡಿ ನೂರು ಪರ್ಸೆಂಟಿನ ಕೆಲಸ ಪಡೆಯಬಹುದು!

ಇನ್ನೂ ವಿಪರ್ಯಾಸವೆಂದರೆ ಭಾರತೀಯ ತಾಂತ್ರಿಕರಿಗೆ ಮನೆಭತ್ಯೆ ಪ್ರತಿನಿತ್ಯ ಮನೆಯಿಂದ ಕಚೇರಿಗೆ ಕಾರು-ಕ್ಯಾಬಿನ ಸೌಲಭ್ಯ ಏನೊಂದನ್ನೂ ನೀಡಬೇಕಿಲ್ಲ. ಕೊಟ್ಟರೂ ಅದಕ್ಕೆ ಅಲ್ಲಿನ ರೇಟು ವಿಧಿಸುತ್ತಾರಾದ್ದರಿಂದ ಆ ದುಡ್ಡು ಉಳಿಸಲು ಇಲ್ಲಿಂದ ಹೋದವರು ರೈಲು ಬಸ್ಸುಗಳನ್ನೇ ಬಳಸುತ್ತಾರೆ. ಮೂರ್ನಾಲ್ಕು ಮಂದಿ ಸೇರಿಕೊಂಡು ಬಾಡಿಗೆ ಮನೆ ಮಾಡುತ್ತಾರೆ. ವೀಕೆಂಡ್ ಪಾರ್ಟಿಗಳಿಲ್ಲ. ಐಷಾರಾಮೀ ಹೊಟೇಲುಗಳು ಬೇಕಿಲ್ಲ. ಮನೆಯಲ್ಲೇ ಅಡುಗೆ, ಲಾಂಡ್ರಿಗಳೂ ಬೇಕಿಲ್ಲ ದುಂದುವೆಚ್ಚವಂತೂ ಇಲ್ಲವೇ ಇಲ್ಲ. ಭಾರತೀಯ ಐಟಿ ಜೀತದಾಳುಗಳ ಇಂಥ ಮನಸ್ಥಿತಿಯನ್ನು ಚೆನ್ನಾಗಿಯೇ ಬಳಸಿಕೊಂಡ 'ಮೈಂಡ್ ಟ್ರೀ' ಕಂಪೆನಿ ಪ್ರಭಾರನ್ನು ಶುರುವಿನಲ್ಲಿ ಒಂದು ವರ್ಷ ಕಾಂಟ್ರಾಕ್ಟಿನ ಮೇಲೆ ಸಿಡ್ನಿಗೆ ಕರೆಸಿಕೊಂಡಿತ್ತು.

2013ರ ಹೊತ್ತಿಗೆ ಒಂದು ವರ್ಷದ ಗುತ್ತಿಗೆಯೇನೋ ಮುಗಿಯಿತು. ಆದರೆ ಪ್ರಭಾರ ಕಮ್ಮಿರೇಟಿನ ಕಷ್ಟದ ದುಡಿಮೆ ಮತ್ತು ಓವರ್‌ಟೈಮ್ ಕೆಲಸ ಗೊಣಗಾಡದೇ ಮಾಡುವ ಶಿಸ್ತಿನ ಮತ್ತೊಬ್ಬರು ಸಿಗಬೇಕಲ್ಲ. ಒಂದು ವರ್ಷದ ಕಾಂಟ್ರಾಕ್ಟನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಲಾಯಿತು. ಅದು ಮುಗಿದ ಮೇಲೆ ಇನ್ನೂ ಒಂದು ವರ್ಷ ದುಡಿಯುವಂತೆ ಕೇಳಿಕೊಂಡಿತು. ಮೂರು ವರ್ಷ ಮುಗಿದರೂ ಅಲ್ಲಿಗೇ ಮುಗಿಸದೆ ಅದನ್ನು ನಾಲ್ಕನೇ ವರ್ಷಕ್ಕೆ ಮುಂದುವರೆಸಿತು. ಮುಂಬರುವ ಏಪ್ರಿಲ್‌ಗೆ ಪ್ರಭಾರ ನಾಲ್ಕನೇ ವರ್ಷದ ಕಾಂಟ್ರಾಕ್ಟು ಮುಗಿಯುತ್ತಿತ್ತು. ವರ್ಷಕ್ಕೊಮ್ಮೆಯೋ ಎರಡು ಸಾರಿಯೋ ಬೆಂಗಳೂರಿಗೆ ಬಂದು ಗಂಡ ಮಗಳನ್ನು ಮಾತಾಡಿಸಿಕೊಂಡು ಹೋಗುವುದು, ಇಲ್ಲಿ ರಜೆ ಸಿಕ್ಕಾಗೆಲ್ಲ ಪತಿ ಅರುಣ್ ಮಗಳ ಸಮೇತ ಆಸ್ಟ್ರೇಲಿಯಾಕ್ಕೆ ಹೋಗಿ ಒಂದೆರಡು ದಿನ ಪತ್ನಿಯ ಜೊತೆಗಿದ್ದು ಬರುವುದೇ ಕಳೆದ ನಾಲ್ಕು ವರ್ಷಗಳ ಸಾಂಸಾರಿಕ ಪಡಿಪಾಟಲಾಗಿ ಹೋಯಿತು.

ಇನ್ನೊಂದು ತಿಂಗಳೊಳಗೆ ತನ್ನ ಕಾಂಟ್ರಾಕ್ಟು ಮುಗಿಯಿತೆಂದರೆ ಬೆಂಗಳೂರಿಗೆ ಬಂದು ಮಗಳು ಪತಿಯೊಂದಿಗೆ ಹಾಯಾಗಿದ್ದು ಬಿಡುವ ಕನಸು ಹೊತ್ತೇ ಪ್ರಭಾ ಸಾಕಷ್ಟು ದುಡ್ಡು ಕಲೆ ಹಾಕಲು ಹೆಣಗಾಡುತ್ತಿದ್ದರು. ಓವರ್‌ಟೈಮ್ ಕೆಲಸ, ವೀಕೆಂಡ್‌ಗಳಲ್ಲೂ ದುಡಿಮೆ ಮತ್ತು ರಾತ್ರಿ ತಡವಾದರೂ ಟ್ಯಾಕ್ಸಿ ಹಿಡಿಯದೇ ರೈಲಲ್ಲೇ ಬಂದು ಅಲ್ಲಿಂದ ನಡಕೊಂಡೇ ಅಪಾರ್ಟ್‌ಮೆಂಟ್ ಸೇರಿಕೊಳ್ಳುವ ಕಂಜೂಸುತನ. ಅದು ಮಾರ್ಚ್ 7ರ ಶನಿವಾರಕ್ಕೂ ಯಥಾವತ್ತು ನಡೆದೇ ಇತ್ತು. ಸಿಡ್ನಿಯ ರೋಡ್ಸ್ ಏರಿಯಾದ ಕಕ್ಷಿದಾರ ಸಂಸ್ಥೆಯೊಂದರಲ್ಲಿ ರಾತ್ರಿ ಒಂಬತ್ತರವರೆಗೂ ಓವರ್‌ಟೈಂ ಕೆಲಸ ಮಾಡಿದ ಪ್ರಭಾ ರೈಲು ಹತ್ತುವ ಹೊತ್ತಿಗೆ ಹೈರಾಣಾಗಿದ್ದರು. ವೆಸ್ಟ್‌ಮೀಡ್ ಏರಿಯಾದ ಪ್ಯಾರಮಟ್ಟಾ ರೈಲು ನಿಲ್ದಾಣದಿಂದ ತಮ್ಮ ರೂಂಮೇಟ್‌ಗಳಿಗೆ ಫೋನ್ ಮಾಡುವುದನ್ನೇ ಮರೆತರು. ಬಹುಶಃ ರೂಂಮೇಟುಗಳು ಬಂದು ಕರೆದೊಯ್ದಿದ್ದರೆ ಅನಾಹುತ ತಪ್ಪುತ್ತಿತ್ತೇನೊ.

ಒಬ್ಬರೇ ಪಾರ್ಕ್ ಪಕ್ಕದ ಮಬ್ಬುಗತ್ತಲ ರಸ್ತೆಯಲ್ಲೇ ನಡಕೊಂಡು ಹೋಗಲೆತ್ನಿಸಿದ್ದಾರೆ. ಆದರೆ ಆವತ್ತು ಮಾತ್ರ ಅದು ಪ್ರತಿ ಶನಿವಾರದ ರಾತ್ರಿಯಾಗಿರಲಿಲ್ಲ. ಯಾವ ಕ್ರಿಮಿನಲ್ ತನ್ನ ವೀಕೆಂಡ್ ವಿಕೃತಿಗಾಗಿ ಹೊಂಚಿ ಕೂತಿದ್ದನೋ ಅಥವಾ ಪ್ರಭಾ ಮ್ಯಾನೇಜರಾಗಿದ್ದ ಮೈಂಡ್ ಟ್ರೀ ಕಂಪೆನಿಯ ಯಾವ ಕರ್ಮಕ್ಕೆ ಆಕೆ ತಲೆಕೊಡಬೇಕಿತ್ತೋ ಗೊತ್ತಿಲ್ಲ. ಅದು ದರೋಡೆಕೋರನಾ, ಡ್ರಗ್ ಆ್ಯಡಿಕ್ಟಾ, ಕುಡುಕನಾ, ಕಾಮುಕನಾ ಅಥವಾ ಸುಪಾರಿ ಹಂತಕನಾ?

ನಸುಗತ್ತಲ, ಪಾರ್ಕ್‌ರಸ್ತೆಯ ಆ ನೀರವದ ಸಾವಿನ ಸುಳಿಗೆ ಅನಾಯಾಸವಾಗಿ ಸಿಲುಕಿಬಿಟ್ಟರು ಪ್ರಭಾ. ಬೀಸಿದ ಒಂದೇ ಏಟಿಗೆ ಕತ್ತೇ ಸೀಳಿಹೋಗಿತ್ತು. ಡಾರ್ಲಿಂಗ್.... ನನ್ನನ್ನು ಕುಯ್ದುಬಿಟ್ಟ... ಎಂದು ವಾಕ್ಯವನ್ನೇ ಮುಗಿಸಿಲ್ಲ. ಅದಕ್ಕೂ ಮೊದಲೇ ಮಾತು ನಿಂತಾಗಿತ್ತು. ಪತಿ, ಮಗಳಿದ್ದೂ ಸಹಸ್ರಾರು ಮೈಲಿಯಾಚೆಗೆ ಬಂದು ಹೆಣಗಾಡಬೇಕಾದ ದುರ್ಗತಿ. ಮಾಡಿದ ಕೆಲಸಕ್ಕೆ ಪುಡಿಗಾಸಿನ ಸಂಭಾವನೆ ಕೊಟ್ಟು ಲಾಭ ಬಾಚುವ ಕಂಪೆನಿ, ಅದಕ್ಕೆ ಜೀತದಾಳುಗಳನ್ನು ರವಾನಿಸುವ ಇಲ್ಲಿನ ಏಜೆಂಟರು, ತನ್ನ ದೇಶದ ಮಹಿಳೆಯರನ್ನು ಕಾಪಾಡಲಾಗದ ಆಸ್ಟ್ರೇಲಿಯಾ ಪೊಲೀಸರು ಮತ್ತು ಸಂದಿಗೊಂದಿಗಳಲ್ಲೂ ಇಟ್ಟಾಡುವ ಆಸ್ಟ್ರೇಲಿಯಾದ ಫಂಕ್‌ಗಳು; ಎಲ್ಲರೂ ಸೇರಿಕೊಂಡೇ ಪ್ರಭಾಳನ್ನು ಕೊಂದಿದ್ದಾರೆ.




ಕೊಲೆ ನಡೆದ ಸ್ಥಳದಲ್ಲಿ ಹೂಗುಚ್ಛವಿಟ್ಟು ಸಂತಾಪ

ಕ್ರಿಕೆಟ್ ದರ್ಪ, ರೇಸಿಸಂ ಮತ್ತು ಭಾರತೀಯರ ಮೇಲಿನ ದಾಳಿಗಳೆಂದರೆ...!

ಕಳೆದ ಕೆಲ ವರ್ಷಗಳಿಂದ ಬೇರೆ ವಿಚಿತ್ರವಲ್ಲದೇ ಹೋದರೂ ನಿರ್ದಿಷ್ಟ ಒಂದು ಸಂಗತಿಗೆ ಆಸ್ಟ್ರೇಲಿಯಾದ ಕುಖ್ಯಾತಿ ಮುಗಿಲು ಮುಟ್ಟಿದೆ. ಅದು ಭಾರತೀಯರ ವಿರುದ್ಧದ ತಾರತಮ್ಯ ಮತ್ತು ಹಿಂಸೆ. ಅದು ಯಾವ ಮಟ್ಟಕ್ಕೆಂದರೆ ಆಂಧ್ರಾ ಮೂಲದ ವಿದ್ಯಾರ್ಥಿನಿಯೊಬ್ಬಳನ್ನು ನಡುರಸ್ತೆಯಲ್ಲೇ ಎಳೆದೊಯ್ದು ಅತ್ಯಾಚಾರವೆಸಗಿ ಕೊಂದದ್ದು!


ಮತ್ತೊಬ್ಬ ಪಂಜಾಬಿ ವಿದ್ಯಾರ್ಥಿಯನ್ನು ಮೆಲ್ಬೋರ್ನ್‌ನಲ್ಲಿ ಅಪಹರಿಸಿ ಕೊಂದೆಸೆದದ್ದು, ... ಒಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ, ಮಗದೊಬ್ಬ ಮೆಡಿಕೋನ ಹೊಟ್ಟೆಗೆ ಚಾಕು ಹಾಕಿದ್ದು, ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಗುಜರಾತಿ ಯುವತಿಯೊಬ್ಬಳ ಮೇಲೆ ನಡೆದ ಅತ್ಯಾಚಾರ, ಪಬ್ ಒಂದರಲ್ಲಿ ಇಂಡಿಯನ್ ವಿದ್ಯಾರ್ಥಿಗಳ ಮೇಲೆ ನಡೆದ ಮಾರಕ ಗುಂಪು ದಾಳಿ- ಹೀಗೆ ಆಸ್ಟ್ರೇಲಿಯಾದ ವಿವಿಧ ನಗರಗಳಲ್ಲಿ ಆಗಾಗ ಭಾರತೀಯರ ವಿರುದ್ಧದ ಹಿಂಸೆಗಳೇ ಮೇಲಿಂದ ಮೇಲೆ ವರದಿಯಾಗುತ್ತಿವೆ.

ಇದು ಆಸ್ಟ್ರೇಲಿಯಾದ ವಿಕೃತ ರೇಸಿಸಂ. ಯಾವುದೋ ಕಾಲಘಟ್ಟವೊಂದರಲ್ಲಿ ... ಕ್ರಿಮಿನಲ್‌ಗಳು, ದರೋಡೆಕೋರರು, ವಂಚಕರು, ವಿಕೃತರನ್ನೆಲ್ಲ ಶಿಕ್ಷೆಯಾಗಿ ಆಸ್ಟ್ರೇಲಿಯಾಕ್ಕೆ ಗಡಿಪಾರು ಮಾಡುತ್ತಿದ್ದರಂತೆ. ಹಾಗೆ ಗಡಿ ಪಾರಾಗಿ ಬಂದವರಿಂದಲೇ ಬ್ರಿಟಿಷ್ ವಸಾಹತು ರೂಪದಲ್ಲಿ ತಲೆ ಎತ್ತಿದ್ದು ಆಸ್ಟ್ರೇಲಿಯಾ. ಮುಂದೆ ಅಲ್ಲಿನ ಮೂಲ ನಿವಾಸಿಗಳನ್ನೇ ಒದ್ದೋಡಿಸಿ ಬಿಳಿಯರು ಆಕ್ರಮಿಸಿಕೊಂಡರು. ನೂರಾರು ವರ್ಷಗಳ ಕಾಲಾಂತರದಲ್ಲಿ ಆಸ್ಟ್ರೇಲಿಯಾ ಅದ್ಭುತ ನಾಗರಿಕ ರಾಷ್ಟ್ರವಾಗಿ ಅಭಿವೃದ್ಧಿಯಾಯಿತಾದರೂ ಅದರ ವಂಶವಾಹಿಯಲ್ಲಿ ಅಡಗಿದ್ದ ಬ್ರಿಟೀಷ್ ರಕ್ತಗುಣ ಮಾತ್ರ ಹಾಗೇ ಉಳಿದುಬಂತು.


ಅಲ್ಲಿನ ಮೂಲ ನಿವಾಸಿಗಳಷ್ಟೇ ಅಲ್ಲ, ತೃತೀಯ ಜಗತ್ತಿನ ಯಾರನ್ನು ಕಂಡರೂ ಈ ತಲೆಮಾರಿನ ಆಸ್ಟ್ರೇಲಿಯನ್‌ಗೆ ಅಸಹನೆ ಭುಗಿಲೇಳುತ್ತದೆ. ಅದರಲ್ಲೂ ಭಾರತೀಯರೆಂದರೆ ಇನ್ನೂ ಹೊಟ್ಟೆಕಿಚ್ಚು. ಏಕೆಂದರೆ ಭಾರತೀಯರ್‍ಯಾರೂ ಅವರಂತೆ ವೀಕೆಂಡ್ ದುಂದುವೆಚ್ಚ ಐಷಾರಾಮಕ್ಕಿಳಿಯದೇ ಡಾಲರ್ ಡಾಲರ್ ಕೂಡಿ ಹಾಕಿ ಆರ್ಥಿಕವಾಗಿ ತಮಗಿಂತ ಬಲಾಢ್ಯರಾಗುತ್ತಾರೆಂಬ ಅಸೂಯೆ. ಇದಲ್ಲದೇ ಅಗದೀ ಕಮ್ಮಿ ಸಂಬಳಕ್ಕೆ ದುಡಿಯುವ ಮೂಲಕ ಭಾರತೀಯರು ತಮ್ಮನ್ನೆಲ್ಲ ನಿರುದ್ಯೋಗಿಗಳನ್ನಾಗಿ ಮಾಡುತ್ತಾರೆಂಬ ಆತಂಕವೂ ... ಹೆಚ್ಚುತ್ತಿದೆ. ಇಂಥ ಮನಸ್ಸಿಗೆ ರೇಸಿಸಮ್ ಅಂದರೆ ವರ್ಣಭೇದವೂ ಸೇರಿಕೊಂಡು ... ಭಾರತೀಯರ ಮೇಲಿನ ಸರಣಿ ದಾಳಿ ದೌರ್ಜನ್ಯಗಳು. ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ದುರಹಂಕಾರಕ್ಕೂ ಈಗ ...

ಆದರೆ ಕೊಂದ ರೀತಿಯಿದೆಯಲ್ಲ ಅದು ಆಸ್ಟ್ರೇಲಿಯಾದ ಅನಾಗರಿಕತೆಯಲ್ಲದೇ ಮತ್ತೇನು.

■ ರಾ. ಸೋಮನಾಥ್



ಕುಟುಂಬದ ನಾಲ್ವರನ್ನು ಕಳೆದುಕೊಂಡ ವೆಂಕಟರಾಯಪ್ಪ



ಕಂಬಾಲಪಲ್ಲಿಯಲ್ಲಿ [illegible] ಬೂದಿಯಾದ ದಲಿತರ ಭಾವಚಿತ್ರಗಳು. ([illegible]ವರು ಮತ್ತು ನಾಲ್ಕನೆಯವರನ್ನು [illegible])

ಸಂದರ್ಶನ

‘ಅವರ್ಗೆ ಶಿಕ್ಷೆ ಆಗಿರೋದು ನನ್ನ ಕಿವಿಗೆ ಬಿದ್ರೆ ಸಾಕು’

ಕರ್ನಾಟಕವನ್ನೇ ಬೆಚ್ಚಿ ಬೀಳಿಸಿದ ಭೀಕರ ಮಾರಣಹೋಮ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯ 7 ದಲಿತರನ್ನು ಕೊಂದದ್ದು. 2000 ಇಸವಿಯ ಮಾರ್ಚ್ 11 ರಂದು ನಡೆದ ಈ ನರಮೇಧಕ್ಕೆ 15 ವರ್ಷದ ಮುದಿತನ. ಹೈ ಕೋರ್ಟ್ ಮರು ವಿಚಾರಣೆಗೆ ಆದೇಶಿಸದೆ ಆರೋಪಿಗಳೆಲ್ಲರನ್ನೂ ಖುಲಾಸೆಗೊಳಿಸಿದೆ. ಆದರೆ ಕೊಂದ ಆರೋಪಿಗಳನ್ನು ಪತ್ತೆಹಚ್ಚಲು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಮರು ವಿಚಾರಣೆಗೂ ಆಸ್ಪದ ನೀಡಿಲ್ಲ. ನ್ಯಾಯಾಲಯದ ಕೆಲಸ ಕೇವಲ ಆರೋಪಿಗಳನ್ನು ವಿಚಾರಿಸಿ ಸಾಕ್ಷಿಗಳ ಕೊರತೆಯಿಂದ ಆರೋಪಿಗಳನ್ನು ಖುಲಾಸೆಗೊಳಿಸಿ ಸುಮ್ಮನಿರುವುದೇ? ಕೊಲೆಗಾರರನ್ನು ಪತ್ತೆ ಹಚ್ಚುವ ಪ್ರಕ್ರಿಯೆಯಲ್ಲಿ ನ್ಯಾಯಾಲಯದ ಪಾತ್ರ ಏನೂ ಇಲ್ಲವೆ? ಜಸ್ಸಿಕಾ ಲಾಲ್ ಮತ್ತು ಬೆಸ್ಟ್ ಬೇಕರಿ ಪ್ರಕರಣಗಳಲ್ಲಿದ್ದ ಬದ್ಧತೆ ಕಂಬಾಲಪಲ್ಲಿಯ ಪ್ರಕರಣದಲ್ಲಿ ಏಕೆ ಕಂಡುಬರುತ್ತಿಲ್ಲ? ಸತ್ತವರು ದಲಿತರೆಂಬ ಕಾರಣಕ್ಕಾಗಿಯೇ? ಎಂಬ ಪ್ರಶ್ನೆಗಳು ನಾಗರಿಕರ ತಲೆಯಲ್ಲಿ ಹೊಕ್ಕಿವೆ. ಸುಪ್ರೀಂ ಕೋರ್ಟಿಗೆ ಸರ್ಕಾರ ಮೇಲ್ಮನವಿ ಸಲ್ಲಿಸಿ ಅದು ಪುರಸ್ಕೃತಗೊಂಡಿರುವ ಸಂದರ್ಭದಲ್ಲಿ ತನ್ನ ಕುಟುಂಬದ ನಾಲ್ಕು ಜೀವಗಳು ತನ್ನ ಕಣ್ಣೆದುರೇ ಬೂದಿಯಾದದ್ದನ್ನು ಕಂಡ ವೆಂಕಟರಾಯಪ್ಪನ ಜೀವ ಕೊನೆಗಾಲದಲ್ಲಿ ಏನು ಬಯಸುತ್ತಿದೆ ಎಂಬುದನ್ನು ಅರಿಯುವ ಪ್ರಯತ್ನವೇ ಈ ಸಂದರ್ಶನ. ವೆಂಕಟರಾಯಪ್ಪ ಕಣ್ತುಂಬಿಕೊಂಡೇ ಉತ್ತರಿಸಿದರು.

** ಸಂದರ್ಶಕ: ಹೈ ಕೋರ್ಟ್ ಸಹ ಎಲ್ಲಾ ಆರೋಪಿಗಳನ್ನು ಖುಲಾಸೆ ಮಾಡಿದೆ. ಈ ತೀರ್ಪಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?*

ವೆಂಕಟರಾಯಪ್ಪ ನನಗೇನು ತಿಳಿಯತ್ತೆ? ನಿಮ್ಮಂತೋರು ಯಾರಾದ್ರು ಬಂದು ಹೇಳಬೇಕು ಅಷ್ಟೆ. ನಾನು ಸಾಯೋದ್ರೊಳಗೆ ನ್ಯಾಯ ಸಿಕ್ಕರೆ ಸಾಕು.

** ಸಂ: ಕಂಬಾಲಪಲ್ಲಿಯ ಪ್ರಕರಣ ಸುಪ್ರೀಂಕೋರ್ಟಿಗೆ ಹೋಗಿದೆ. ಅಲ್ಲಿ ಗೆಲ್ಲಬಹುದಾ?*

ವೆಂ: ವಯಸ್ಸಾಯ್ತು, ನ್ಯಾಯ ನಮ್ಮಂತೋರಿಗೆ ಸಿಗತ್ತಾ? ನಿಮ್ಮಂತ ಹೋರಾಟಗಾರರು ನನಗೆ ನ್ಯಾಯ ಸಿಗೋ ತರ ಮಾಡಬೇಕು. ನೀವು ಹೇಳಿದ ಕಡೆ ಹೆಬ್ಬೆಟ್ಟು ಒತ್ತುತ್ತೀನಿ. ಅವರ್ಗೆ ಶಿಕ್ಷೆ ಆಗಿರೋದು ನನ್ನ ಕಿವಿಗೆ ಬಿದ್ರೆ ಸಾಕು.



ವೆಂಕಟರಾಯಪ್ಪನ ಜೊತೆ ಎನ್.ವೆಂಕಟೇಶ್ ಮತ್ತು ಎಚ್. ಮುನಿವೆಂಕಟಪ್ಪ

** ಸಂ: ಸರ್ಕಾರ ನಿಮ್ಮ ಪರವಾಗಿ ಸುಪ್ರೀಂ ಕೋರ್ಟಿಗೆ ಹೋಗಿದೆ. ಇಲ್ಲೀವರೆಗೆ ನಿಮಗೆ ಏನೇನು ಸೌಕರ್ಯ ಮಾಡಿಕೊಟ್ಟಿದೆ?*

ವೆಂ: ಸರ್ಕಾರದವರು ಹಣ ಕೊಟ್ರು. ಎಲ್ಲರಿಗೂ ಮನೆ ಕಟ್ಟಿಸಿಕೊಟ್ರು. ಸೊಸೆಗೆ ಕೆಲಸ ಕೊಟ್ರು. ಆದ್ರೆ ಅವ್ಳು ಕೊರಗಿ ಸೀಮೆ ಎಣ್ಣೆ ಸುರುವಿಕೊಂಡು ಸತ್ತಳು. ಸೌಕರ್ಯ ಬಂತು ಆದ್ರೆ ಮಕ್ಕಳು ಬರ್ತಾರೇನ್ರಪ್ಪಾ? ನ್ಯಾಯ ಸಿಗ್ತಾದೇನ್ರಪಾ? ಇಲ್ಲಿ ಇರೋ ಜನರೆಲ್ಲ ನನ್ನ ಮಕ್ಕಳನ್ನ ನೆನೆಸ್ಬೇಕು. ಅವರು ಪ್ರಾಣ ಕೊಟ್ಟು ಇಲ್ಲಿನ ಜನರಿಗೆ ಜೀವನ ಕೊಟ್ರು. ಆದ್ರೆ ನಮ್ಮಂತೋರ್ಗೆ ಸೌಕರ್ಯ ಸಿಗಬೇಕಂದ್ರೆ ಯಾರಾದ್ರು ಸಾಯಲೇಬೇಕಾ?

** ಸಂ: ಈ ಹದಿನೈದು ವರ್ಷ ಹೇಗೆ ಜೀವನ ಮಾಡಿದ್ರಿ? ಆ ಘಟನೆ ಇನ್ನೂ ನೆನಪಿದೆಯಾ?*

ವೆಂ: ಹೀಗೆ ಮಾಡ್ತಾ ಇದಿವಿ. ಎಲ್ಲಾ ನೆನಪಿದೆ. ಕಂಬಾಲಪಲ್ಲಿಗೆ ಮೊದಲ ಮೂರು ವರ್ಷ ಸಮಾಧಿಗೆ ಪೂಜೆ ಮಾಡೋಕೆ ಹೋದೆ. ಆಮೇಲೆ ಮನಸ್ಸಾಗಲಿಲ್ಲ. ನನ್ನ ಮಕ್ಕಳ ಕೊಂದವರ ಮುಖ ನೋಡಿದ್ರೆ ಕಣ್ಣು ಚುಚ್ಚತ್ತೆ. ನೋವಾಗತ್ತೆ. ಶಿಕ್ಷೆ ಕೊಡ್ಸೋಕೆ ಆಗ್ಲಿಲ್ವಲ್ಲ ಅಂತ ನಾಚಿಕೆ ಆಗತ್ತೆ.

** ಸಂ: ಹಾಗಾದ್ರೆ ಕಂಬಾಲಪಲ್ಲಿಯ ಜೊತೆ ಸಂಬಂಧವೇ ಇಲ್ಲವೆ?*

ವೆಂ: ನಾನು ಹೋಗಲ್ಲ. ನನ್ನ ಸಂಬಂಧಿಕರು ಪ್ರತಿ ವರ್ಷ ಹೋಗಿ ಸಮಾಧಿಗೆ ಪೂಜೆ ಮಾಡಿಕೊಂಡು ಬರುತ್ತಾರೆ ಅಷ್ಟೆ. ಜಮೀನು ಪಾಳು ಬಿದ್ದಿದೆ.

** ಸಂ: ನೀವು ಕೋರ್ಟಿನಲ್ಲಿ ಸಾಕ್ಷಿ ಸರಿಯಾಗಿ ಹೇಳಲಿಲ್ಲವಂತಲ್ಲ, ಯಾಕೆ?*

ವೆಂ: ನಾನು ಎಲ್ಲಾ ಹೇಳಿದ್ನಪ್ಪ, ಜಡ್ಜ್ ಮುಂದೆ ನಡೆದಿದ್ದೆಲ್ಲಾ ಹೇಳಿದೆ. ಇಂತಿಂತವ್ರೆ ಮಾಡಿದ್ರು ಅಂತ ಹೇಳಿದೆ. ಕೊನೇಲಿ ವಕೀಲ ನಿನಗೆ ಕಣ್ಣು ಸ್ವಲ್ಪ ಮಂಜಲ್ಲವಾ ಅಂತಂದ ಅದಕ್ಕೆ ಹೌದು ಸ್ವಲ್ಪ ಅಂದೆ ಅಷ್ಟೆ. ಇದನ್ನೇ ಮುಂದು ಮಾಡಿ ನಾನು ಹೇಳಿದ್ದನ್ನೆಲ್ಲ ಬಿಟ್ಟುಬಿಟ್ಟವರೆ.

** ಸಂ: ಕೊಂದವರು ಯಾರು ಅಂತ ನೆನಪಿದೆಯಾ? ಮರುವಿಚಾರಣೆ ಬಂದ್ರೆ ಸತ್ಯ ಹೇಳ್ತೀರಾ?*

ವೆಂ: ಹೇಳ್ತೀನಿ. ಪ್ರತಿಯೊಬ್ಬ ಕೊಲೆಗಾರರ ಹೆಸರನ್ನೂ ಹೇಳ್ತೀನಿ. ಪತ್ತೆ ಹಚ್ಚುತ್ತೀನಿ. ಯಾರೇ ಆಗ್ಲಿ ಕೊಲೆಗಾರರಿಗೆ ಶಿಕ್ಷೆ ಆಗಬೇಕಲ್ವಾ? ಆವತ್ತು ಸಾಮಲು ನರಸಪ್ಪ ನನ್ನ ಕಾಪಾಡದೇ ಇದ್ದಿದ್ದರೆ ನಾನು ಇವತ್ತು ಬದುಕ್ತಾ ಇರಲಿಲ್ಲ.

** ಸಂ: ನ್ಯಾಯ ಸಿಗದೇ ಇದ್ದದ್ದಕ್ಕೆ ನಿಮಗೆ ಯಾರ ಮೇಲೆ ಬೇಸರವಿದೆ? ಪೊಲೀಸ್, ಸಂಘಟನೆ, ನ್ಯಾಯಾಲಯ, ಸರ್ಕಾರ?*

ವೆಂ: ಅವರನ್ನ ಯಾರು ಪೋಲಿಸ್ ಅಂದಿದ್ದು? ಅವರು ಮಾಡಿದ ಅನ್ಯಾಯ ಅವರೇ ಅನುಭವಿಸುತ್ತಾರೆ. ದಲಿತ ಸಂಘದವರು ಆರಂಭದಲ್ಲಿ ಜೊತೇಲಿ ಇದ್ರು. ಆಮೇಲೆ ಅವರೂ ಕೈಬಿಟ್ರು. ಈಗ ಎನ್.ವೆಂಕಟೇಶಪ್ಪ ಬಂದು ಹೋಗ್ತಾ ಕ್ಷೇಮ ವಿಚಾರಿಸಿಕೊಳ್ತಾರೆ. ಎಲ್ಲ ವಿಚಾರ ಅವರೇ ಹೇಳ್ತಾರೆ. ಇನ್ಯಾರು ಬರೋದಿಲ್ಲ, ನಮ್ಮನ್ನ ಮಾತಾಡ್ಸೋರೆ ಇಲ್ಲ.

** ಸಂ: ಕೊನೆಯದಾಗಿ ಏನು ಹೇಳೋಕೆ ಇಷ್ಟ ಪಡ್ತೀರಾ?*

ವೆಂ: ಏನು ಹೇಳಲಿ? ಮಿನಿಸ್ಟರ್, ಪೊಲೀಸ್, ತಹಸೀಲ್ದಾರ್, ಡಿ.ಸಿ ಎಲ್ಲಾ ಬಂದ್ರು. ಏನು ಮಾಡಿದ್ರು? ಏನೂ ಮಾಡ್ಲಿಲ್ಲ, ನನ್ನ ಕಣ್ಣ ಮುಂದೆ ಬಾಗಿಲು ಹಾಕಿ ಬೆಂಕಿ ಇಟ್ರಪ್ಪ, ಪೊಲೀಸು ಅಲ್ಲೆ ಇದ್ರು. ಅವರಿಗೆ ಎಲ್ಲಾ ಗೊತ್ತು, ಹಿಂದೆ ನನ್ನ ದೊಡ್ಡ ಮಗ ಸತ್ತಾಗ಼್ಲೂ ನ್ಯಾಯ ಸಿಗಲಿಲ್ಲ, ನನ್ನ ಮಗ ಶ್ರೀರಾಮ ಹುಲಿಯಂಗಿದ್ದವ್ನ ಸಾಯಿಸಿಬಿಟ್ರು. ರಾಜ ಮಹಾರಾಜರೇ ಹೋದ್ರು. ನನ್ನ ಪ್ರಾಣ ಹೋದ್ರು ಸರಿ ಕೋರ್ಟಲ್ಲಿ ಸತ್ಯ ಹೇಳ್ತೀನಿ. ಆದ್ರೆ ನಂಗೆ ಸಪೋರ್ಟ್ ಮಾಡೋರು ಯಾರು? ನಿಮ್ಮಂತೋರು ಆಗಾಗ ಬಂದು ಸಾಯೋ ಮುದುಕನಿಗೆ ಶಕ್ತಿ ಕೊಡ್ಬೇಕು.

- ಸಂದರ್ಶಕರು: ಎನ್. ವೆಂಕಟೇಶ್,
ಎಚ್.ಮುನಿವೆಂಕಟಪ್ಪ ವಿಕಾಸ ಆರ್ ಮೌರ್ಯ


ಕಿರುಗತೆ ನನ್ನ ಕನಸು

ನಿಜಕ್ಕೂ ಅದೊಂದು ಕರಾಳ ರಾತ್ರಿ. ಮಹಾನಗರಿಯಲ್ಲಿ ಮಿಣುಕುವಷ್ಟೂ ಬೆಳಕಿರಲಿಲ್ಲ, ಕಗ್ಗತ್ತಲು ಕವಿದಿತ್ತು, ಚಳಿಯು ಮೈಕೊರೆಯುತ್ತಿತ್ತು.

ಎಲ್ಲಾ ಬೆಳಕಿನ ಆಕರಗಳೂ ತಮ್ಮ ಅತಿ ಅಪರೂಪದ ರಜೆ ಪಡೆದಿದ್ದವು. ಜನ ಬೀದಿಯಲ್ಲಿ ಓಡಾಡುವುದಕ್ಕೆ ಹೆದರಿ ತಮ್ಮ ಗೂಡನ್ನು ಸೇರುತ್ತಿದ್ದರು. ಎಲ್ಲರಿಗೂ ವಿಚಿತ್ರ ಮಂಪರು ಕವಿಯುತಿತ್ತು, ಕ್ಷಣದಲ್ಲಿ ಎಲ್ಲರೂ ಪ್ರಜ್ಞೆ ತಪ್ಪಿದ್ದರು. ಬೀದಿಗಳಲ್ಲಿ, ಮನೆಗಳಲ್ಲಿ, ಸ್ಲಮ್‌ಗಳಲ್ಲಿ... ಎಲ್ಲೆಂದರಲ್ಲಿ ಜನರು ಮೂರ್ಛೆ ಹೋಗಿದ್ದರು. ಹೆಣಗಳಿಗೂ ದೇಹಗಳಿಗೂ ವ್ಯತ್ಯಾಸ ಕಾಣುತ್ತಿರಲಿಲ್ಲ, ಕಂಡರೂ ನೋಡುವವರ್‍ಯಾರು? ಎಲ್ಲರೂ ಅದೇ ಸ್ಥಿತಿಯಲ್ಲಿದ್ದರು.

ಇದ್ದಕ್ಕಿದ್ದಂತೆ ನಗರದ ಮಧ್ಯದಲ್ಲಿ ಸಣ್ಣ ಕಿಡಿಯೊಂದು ಕಾಣಹತ್ತಿತು. ಬರಬರುತ್ತಾ ಕಿಡಿಯು ಹರಡಿ ಬೆಂಕಿಯ ಪರಕಾಯ ಪ್ರವೇಶ ಮಾಡಿತ್ತು. ಬೆಂಕಿಯ ಕೆನ್ನಾಲಿಗೆಗಳು ಆಕಾಶವನ್ನು ಸುಡುವಷ್ಟು ಎತ್ತರಕ್ಕೇರಿದ್ದವು. ನೋಟಕ್ಕೆ ಸಿಲುಕುತ್ತಿರಲಿಲ್ಲ, ನನ್ನ ಕಣ್ಣುಗಳೂ ಮಂಜಾಗುತ್ತಿದ್ದವು. ನಾನು ನೋಡಲಾಗುತ್ತಿರಲಿಲ್ಲ, ಆದರೆ ಅಸ್ಪಷ್ಟವಾಗಿ ಗುರುತಿಸಬಹುದಿತ್ತು.

ಎಲ್ಲರ ಮನದಿಂದಲೂ ಕೆಟ್ಟ ಆಲೋಚನೆಗಳು ಹೊರಕ್ಕೆ ಬರಲಾರಂಭಿಸಿದವು. ಎಣಿಸಿದ್ದರೆ ಮನುಷ್ಯರಿಗಿಂತ ಅವೇ ಹೆಚ್ಚಾಗಿದ್ದವು. ಪ್ರತಿಯೊಬ್ಬನಲ್ಲೂ ಎಷ್ಟು ಸಹಸ್ರವಿದ್ದವೋ ಏನೋ? ಒಂದಂತೂ ಸ್ಪಷ್ಟ, ಮನುಷ್ಯರು ಅವುಗಳಿಂದ ಬಿಡುಗಡೆ ಹೊಂದಲಾರಂಭಿಸಿದ್ದರು. ಆದರೆ ಯಾರಿಗೂ ಪ್ರಜ್ಞೆ ಇರಲಿಲ್ಲ, ಎಲ್ಲಾ ಕೆಟ್ಟ ಆಲೋಚನೆಗಳೂ ಹಿಮದಂತಹ ಶ್ವೇತವಸ್ತ್ರವನ್ನು ಹೊಂದಿದ್ದವು, ಯಾವುದೋ ಘನಕಾರ್ಯಕ್ಕೆ, ಒೀಲಿಕೆಯೊಂಬಂತೆ ಅಸಮಾನತೆ ಹೇಳಿತ್ತು



“ಮಾನವನೇ, ನಿನ್ನ ಉಳಿವಿಗೆ ತಳಪಾಯವಾಗಿದ್ದ ನಾನೇ ನಿನ್ನನ್ನು ಬಿಡುತ್ತಿದ್ದೇನೆ. ಹೋಗು ನನ್ನಿಂದ ದೂರ ಹೋಗು. ಸಮಾನತೆಯನ್ನು ಆನಂದಿಸು, ಮನುಷ್ಯನನ್ನು ಪ್ರೀತಿಸು. ವ್ಯರ್ಥವಾಗಿ ಜೀವಿಸಿದ ಮೇಲೆ ದಕ್ಕಿದ ಬೊಗಸೆಯಷ್ಟು ದಿನಗಳಲ್ಲಿ ಸಾರ್ಥಕವಾಗಿ ಬದುಕು.”


ಹೀಗೇ ಮದ, ಮತ್ಸರ, ಕಾಮ, ಲೋಭ, ಜಡತ್ವ, ಜಾತಿವೈಷಮ್ಯ, ಕೋಮುವಾದ, ಮತಾಂಧತೆ... ಹೀಗೇ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ ಬೆಂಕಿಯ ಮುಂದೆ ವೃತ್ತಾಕಾರದಲ್ಲಿ ನಿಂತವು. ಅವುಗಳಲ್ಲಿ ಅಸ್ಪಷ್ಟತೆ ಇರಲಿಲ್ಲ, ಹೆದರಿಕೆಯಿರಲಿಲ್ಲ, ನೋವಿನ ಗಾಳಿಯೂ ಸೋಂಕಿರಲಿಲ್ಲ, ಪ್ರತಿಯೊಂದೂ ದಿಟ್ಟವಾಗಿದ್ದವು, ಬೆಂಕಿಯಂತೆ ಪ್ರಖರವಾಗಿ ಸೂರ್ಯನಂತೆ ಕೇಸರಿ ಬಣ್ಣದಲ್ಲಿ ಹೊಳೆಯುತ್ತಿದ್ದವು. ಮೊದಲೇ ಏನೋ ನಿರ್ಧರಿಸಿದಂತೆ, ಏರ್ಪಾಡು ಮಾಡಿಕೊಂಡಂತೆ ವಿಚಿತ್ರವಾಗಿ ಕೂಗುತ್ತಿದ್ದವು. ಅವುಗಳ ಭಾಷೆ ವಿಚಿತ್ರವಾಗಿತ್ತು, ಆದರೆ ಅರ್ಥವನ್ನು ಅಸ್ಪಷ್ಟವಾಗಿ ಗ್ರಹಿಸಬಹುದಿತ್ತು.

ಹೀಗೆ ಸಾವಿರ ಕೂಗುಗಳ ನಂತರ ಕೊನೆಯಲ್ಲಿ ಜೋರಾಗಿ ಅವುಗಳ ಧ್ವನಿ ಮಾರ್ದನಿಸಿತು: “ಇಷ್ಟು ಸಾವಿರ ವರ್ಷಗಳಲ್ಲಿ ಯಶಸ್ವಿಯಾಗಿ ಮನುಷ್ಯನನ್ನು ಆಳಿದೆವು. ಅವನ ಹುಟ್ಟಿನಿಂದಲೂ ನಾವು ಅವನ ಜೊತೆಗಿದ್ದೆವು. ಅವನೇ ನಮಗೆ ಬಂಡಾಯವನ್ನೊಡ್ಡಿ ನಮ್ಮ ಚಕ್ರಾಧಿಪತ್ಯವನ್ನು ಕೊನೆಗಾಣಿಸಬಹುದೆಂಬ ಹೆದರಿಕೆಯಲ್ಲಿದ್ದೆವು. ಮಾನವನ ಸಂತತಿಯ ಉಗಮದ ದಿನಗಳು ಅಷ್ಟು ದಿಟ್ಟವಾಗಿದ್ದವು. ಆದರೆ ಅವನ ಸಂತತಿಯು ಬೆಳೆಯುತ್ತಾ ಹೋದಂತೆ, ತಲೆಮಾರುಗಳು ನೂರು ತಲೆಗಳಿಗೆ ಹಸ್ತಾಂತರವಾದಂತೆ ಮಾನವ ನಿಜಕ್ಕೂ ಬಲಹೀನನಾದ. ಮತ್ತೆ ನಮಗೆ ಪ್ರತಿರೋಧವನ್ನೊಡ್ಡುವುದಿರಲಿ ಮನುಷ್ಯ ಮನುಷ್ಯನಿಗೇ ವಿರೋಧಿಯಾದ, ಮನುಷ್ಯರನ್ನೇ ಒತ್ತೆಯಾಗಿರಿಸಿಕೊಂಡು ಬದುಕತೊಡಗಿದ, ಕೊನೆಗೆ ಸಾಮಂತನಾದ. ಅದಕ್ಕೇ ಇಂದು ಆ ಕೂಪದಿಂದ ಹೊರಬರಲಾರದೆ ಒದ್ದಾಡುತ್ತಿದ್ದಾನೆ. ಇಡೀ ಮಾನವನ ಸಂತತಿಯು ಅವನತಿಯೆಡೆಗೆ ಸಾಗುತ್ತಿದೆ. ಇಂದು ಅವನ ಸ್ಥಿತಿಯನ್ನು ನೋಡಲಾಗುತ್ತಿಲ್ಲ, ಅವನನ್ನು ಒತ್ತೆಯಾಗಿರಿಸಿಕೊಂಡು ಅವನಿಂದ ಪಡೆಯುವಂತಹದ್ದು ಇನ್ನೇನೂ ಉಳಿದಿಲ್ಲ. ಅದಕ್ಕೆ ನಾವೇ ಅವನನ್ನು ಬಿಟ್ಟು ಸಹಸ್ರ ಗ್ರಹಗಳಾಚೆ, ಹೊಸ ಭೂಮಿಯ ಹುಡುಕಾಟಕ್ಕೆ ಹೊರಡುತ್ತಿದ್ದೇವೆ. ಇನ್ನಾದರೂ ಮಾನವ ಮತ್ತೊಬ್ಬನನ್ನು ಮಾನವನಂತೆ ಕಾಣಲಿ” ಎಂದು ಎಲ್ಲವೂ ದಟ್ಟವಾಗಿ ಆವರಿಸಿದ್ದ ಬೆಂಕಿಗೆ ಹತ್ತಿರವಾದವು.

ಅಷ್ಟು ಚಳಿಯಲ್ಲಿ ಬಹುಶಃ ಬೆಚ್ಚಗೆ ಇರಲು ಏನೋ ಮಾಡುತ್ತಿವೆ ಎಂದುಕೊಂಡೆ. ಆದರೆ, ಒಮ್ಮೆಗೇ ಎಲ್ಲವೂ ಬಲಗಾಲನ್ನೆತ್ತಿ ಕನಸುಗಳ ಜೋಳಿಗೆಯನ್ನೊತ್ತ ನವವಧುವಿನಂತೆ, ಬೆಂಕಿಯೊಳಗೆ ಪ್ರವೇಶಿಸಿದವು. ಆಕಾಶವನ್ನು ಮುತ್ತಿಕ್ಕಿ ಜ್ವಾಲೆಗಳು ವಾಪಸ್ಸಾದವು. ಮೋಡ ಕವಿಯುತ್ತಿತ್ತು, ಬೆಂಕಿಯ ಅಟ್ಟಹಾಸ ಮುಗುಳ್ನಗೆಗೆ ಇಳಿದಿತ್ತು, ಆದರೂ ಮೆಲ್ಲನೆ ನಗುತಿತ್ತು.

- ಮನಸ್ವಿ ಧಾರವಾಡ

ಕರಾವಳಿಯಲ್ಲಿ ಹಿಂದೂ ಸಮಾಜೋತ್ಸವ: ನಾಲ್ಕು ಪ್ರತಿಕ್ರಿಯೆಗಳು



ರಾಮರಾಜ್ಯ ಎಂಬ ಶಬ್ದ ಬಹಳ ಕಾಲದಿಂದ ಕೇಳಿಕೇಳಿ ಸವಕಲಾಗಿದೆ. ಬಹುಶಃ ಅದಕ್ಕಾಗಿ ಕೃಷ್ಣ ಧರ್ಮ ಎಂಬ ಹೊಸ ಶಬ್ದವನ್ನು ಈಗ ಉಡುಪಿಯ ವಿಎಚ್‌ಪಿ ಸಮಾಜೋತ್ಸವದಲ್ಲಿ ಮೊದಲಬಾರಿಗೆ ಚಲಾವಣೆಗೆ ತರಲಾಗಿದೆ. ಕೃಷ್ಣ ಧರ್ಮ ಅಂದರೆ ಅರ್ಥವೇನು? ರಾಮನ ಧರ್ಮಕ್ಕಿಂತ ಕೃಷ್ಣನ ಧರ್ಮ ಬೇರೆಯಾಗಿದೆಯೇ? ಧರ್ಮದ ಹೆಸರಲ್ಲಿ ಸಾವಿರಾರು ಮದುವೆಯಾಗಿದ್ದರೂ ಪತಿವ್ರತೆ ತುಳಸಿಯನ್ನು ಮೋಸದಿಂದ ಕೆಡಿಸುವಂತಹ ಕೃಷ್ಣ ಧರ್ಮವೇ? ಅಥವಾ ಬೇರೆ ಎಲ್ಲಾ ಹಿಂದೂ ದೇವರು ತಮ್ಮ ಕೃಷ್ಣನ ಅಧೀನದ ಗುಲಾಮರು/ ಸೇವಕರು ಎಂದು ಹೇಳುವುದೇ ಕೃಷ್ಣ ಧರ್ಮವೇ? ಅಥವಾ ದೇವರ ಮಠದಲ್ಲಿ ಪಂಕ್ತಿಭೇದ, ಜಾತಿಭೇದ ನಡೆಸುವುದೇ ಕೃಷ್ಣ ಧರ್ಮವೇ? ನಿಜವಾಗಿ ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣ ಬೋಧಿಸಿದ್ದು ಹಿಂಸೆ ಮತ್ತು ಬಂಧುಗಳ ಹತ್ಯೆ ಹಾಗೂ ಹದಿನೆಂಟು ಕೋಟಿ ನಿರಪರಾಧಿ ಯೋಧರ ಮತ್ತು ಮೂಕಪ್ರಾಣಿಗಳ ಮಾರಣಹೋಮ. ಜತೆಗೆ ಜಾತಿಯ ಹೆಸರಲ್ಲಿ ಸಮಾಜದ ಶಾಶ್ವತ ವಿಘಟನೆ ಹಾಗೂ ಅದಕ್ಕೆ ತಕ್ಕಂತೆ ಸಮಾಜದ ಮೇಲೆ ಚಿತ್ರವಿಚಿತ್ರ ರೂಪದ ದೇವರ ಹೇರಿಕೆ. ಅಂದರೆ ಅದುವೇ ಈಗಿನ ವಿಎಚ್‌ಪಿಯ ಕೃಷ್ಣ ಧರ್ಮವೇ? ಕೃಷ್ಣ ಧರ್ಮದ ಬದಲಾಗಿ ಶಿವಧರ್ಮ ಎಂಬ ಶಬ್ದ ಯಾಕೆ ಉಡುಪಿಯಲ್ಲಿ ವಿಎಚ್‌ಪಿ ಉಪಯೋಗಿಸಲಿಲ್ಲ? ಬಹುಶಃ ಈ ಶಬ್ದ ಮೈಸೂರಿನ ಅಥವಾ ಹುಬ್ಬಳ್ಳಿಯ ಸಮಾಜೋತ್ಸವಕ್ಕೆ ರಿಸರ್ವ್ ಆಗಿರಬಹುದು. ಎಷ್ಟಾದರೂ ಸಂಘ ಪರಿವಾರದವರದ್ದು ಊರಿಗೆ ತಕ್ಕಂತೆ ಭಾಷೆ, ಕೇರಿಗೆ ತಕ್ಕಂತೆ ವೇಷ. ಒಟ್ಟಾರೆ ಇದು ಒಂದು ನಾಟಕ ಕಂಪನಿ.

ಉಡುಪಿಯಲ್ಲಿ ವಿಎಚ್‌ಪಿ ಸಮಾಜೋತ್ಸವಕ್ಕೆ ಮೂರು ದಿನ ಮುಂಚೆ ಪೇಜಾವರ ಶ್ರೀಗಳು ಒಂದು ದಲಿತ ಕೇರಿಗೆ ಭೇಟಿ ಕೊಟ್ಟ ಬಗ್ಗೆ ರಾಜ್ಯವ್ಯಾಪಿ ಪ್ರಚಾರ ನಡೆಯಿತು. ಅಲ್ಲಿ ಸ್ವಾಮೀಜಿಯವರು ಅಸ್ಪೃಶ್ಯತೆ ತೊಲಗಿಸುವ ಬಗ್ಗೆ ದೊಡ್ಡದಾಗಿ ಮಾತನಾಡಿದರೂ ಅಲ್ಲಿದ್ದ ಒಂದು ಗಂಟೆ ಅವಧಿಯಲ್ಲಿ ಅವರು ಯಾರನ್ನೂ ಮುಟ್ಟಲಿಲ್ಲ ಎಲ್ಲಿಯೂ ನೀರು ಕುಡಿಯಲಿಲ್ಲ! ಒಂದು ವರ್ಷದ ಮಗುವಿನ ಕೈಗೂ ಪ್ರಸಾದದ ಹೂವು ಕೊಟ್ಟದ್ದು ಕೈತಾಗದಂತೆ ಜಾಗ್ರತೆ ವಹಿಸಿಯೇ. ಅಲ್ಲಿ ದಲಿತರು ಪೂಜಿಸುವ ಬಬ್ಬುಸ್ವಾಮಿ ದೈವಸ್ಥಾನದ ಹತ್ತಿರವೂ ಇವರು ತಮ್ಮ ಪಾದುಕೆ ತೆಗೆಯಲಿಲ್ಲ. ನಂತರ ಎಲ್ಲರಿಗೂ ಗೊತ್ತಾಗಿದ್ದು ಶ್ರೀಗಳು ದಲಿತ ಕೇರಿಗೆ ಭೇಟಿಕೊಟ್ಟು ಸಂಚಲನ ಮೂಡಿಸಿದ್ದು ಮೂರು ದಿನದ ಬಳಿಕ ಉಡುಪಿಯಲ್ಲಿ ನಡೆಯಲಿರುವ ಹಿಂದೂ ಸಮಾಜೋತ್ಸವಕ್ಕೆ ಮಾಧ್ಯಮದಲ್ಲಿ ಸುಲಭವಾಗಿ ರಾಜ್ಯವ್ಯಾಪಿ ಪ್ರಚಾರ ಕೊಡುವುದಕ್ಕಾಗಿ ಮಾತ್ರ.

ವಿಎಚ್‌ಪಿಯವರು ಕೋಟಿಗಟ್ಟಲೆ ಖರ್ಚು ಮಾಡಿದ್ದರೂ ಸಮಾಜೋತ್ಸವಕ್ಕೆ ಇಷ್ಟೊಂದು ಪರಿಣಾಮಕಾರಿ ಪ್ರಚಾರ ಸಿಗಲು ಸಾಧ್ಯವಿರಲಿಲ್ಲ. ಎಂತಹ ಅದ್ಭುತ ಪ್ರಚಾರ ಯೋಜನೆ ಪೇಜಾವರ ಶ್ರೀಗಳದ್ದು! ಅದೂ ಸಂಪೂರ್ಣ ಪುಕ್ಕಟ್ಟೆ! ಆದರೂ ಅಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಹಿಂದೂ ಧರ್ಮೀಯರೊಳಗೂ ಅಂತರ್ಜಾತಿ ವಿವಾಹ ಸರಿಯಲ್ಲ ಎಂದು ಹೇಳಿ ಈ ಇಳಿವಯಸ್ಸಿನಲ್ಲೂ ಇರುವ ತಮ್ಮ ದ್ವಂದ್ವ ವ್ಯಕ್ತಿತ್ವ ಮಾತ್ರ ತೆರೆದಿಟ್ಟರು. ದಲಿತರ ಬಗ್ಗೆ ನಿಜವಾದ ಕನಿಕರವಿದ್ದರೆ ಸ್ವಾಮೀಜಿಗಳು ಪತ್ರಕರ್ತರನ್ನು ಬೆನ್ನಿಗಿಟ್ಟುಕೊಂಡು ಅಲ್ಲಿಗೆ ಹೋಗುತ್ತಿರಲಿಲ್ಲ ಹಾಗೂ ಅಲ್ಲಿಯೇ ಪತ್ರಿಕಾಗೋಷ್ಠಿ ನಡೆಸುತ್ತಿರಲಿಲ್ಲ, ಯಾವುದೇ ಪ್ರಚಾರವಿಲ್ಲದೇ ಅವರು ಹೋಗಿಬರುತ್ತಿದ್ದರು.

- ಹರೀಶ್ ಎಂ. ಆರ್, ಉಡುಪಿ

ವಿಎಚ್‌ಪಿ ಹುಟ್ಟಿದ್ದು ಮುಂಬೈಯಲ್ಲಿ ಆದರೆ ಬೆಳೆದಿದ್ದು ಮಧ್ಯಪ್ರದೇಶದಲ್ಲಿ, ಹೀಗಿರುವಾಗ ಅದಕ್ಕೆ ಐವತ್ತು ವರ್ಷವಾಗಿದ್ದಕ್ಕೆ ಕೇವಲ ಕರ್ನಾಟಕದಲ್ಲಿ ಮಾತ್ರ ಯಾಕೆ ಹಿಂದೂ ಸಮಾಜೋತ್ಸವ ಆಚರಿಸಲಾಗುತ್ತಿದೆ? ಬೇರೆ ರಾಜ್ಯಗಳಲ್ಲಿ ಯಾಕಿಲ್ಲ? ಇಂತಹ ದೊಡ್ಡ ಉತ್ಸವ ಆಯೋಜಿಸಿ ನಗರದ ಎಲ್ಲ ರಸ್ತೆಗಳನ್ನು ಬಂದ್ ಮಾಡಿಸಿ ಇಡೀ ನಗರದ ಜನತೆಗೆ ಅನಾನುಕೂಲತೆ ಉಂಟುಮಾಡಿದ ಮಾತ್ರಕ್ಕೆ ಹಿಂದೂ ಧರ್ಮ ಉದ್ಧಾರವಾಗುತ್ತದೆಯೇ? ಸ್ವತಃ ಹಿಂದೂಗಳೇ ಕೇಳುತ್ತಿರುವ ಪ್ರಶ್ನೆಯಿದು. ಇದು ಸಮಾಜೋತ್ಸವ ಆದುದರಿಂದ ಸಮಾಜಕ್ಕೆ ಉಪಯೋಗವಾಗುವ ಕೆಲಸ ಮಾಡುವುದು ಬಿಡಿ ಕಡೆಪಕ್ಷ ಸಮಾಜಕ್ಕೆ ಕೆಡುಕಾಗುವ ಕೆಲಸವನ್ನಾದರೂ ಇವರು ಮಾಡಬಾರದಿತ್ತು. ಈ ಸಮಾಜೋತ್ಸವಕ್ಕೆ ಕೋಟ್ಯಾಂತರ ಸಂಖ್ಯೆಯಲ್ಲಿ ಕೇಸರಿ ಪ್ಲಾಸ್ಟಿಕ್ ಬಂಟಿಂಗ್ಸ್ ಮತ್ತು ಬ್ಯಾನರ್‌ಗಳನ್ನು ಜಿಲ್ಲೆಯಲ್ಲೆಲ್ಲ ಕಟ್ಟಿ ಇನ್ನೂ ಐದು ವರ್ಷಕ್ಕಾಗುವಷ್ಟು ಪ್ಲಾಸ್ಟಿಕ್ ಕಸ ಉತ್ಪಾದಿಸಿ ಪರಿಸರ ಕೆಡಿಸಿದ್ದಂತೂ ನಿಜ. ಆದರೆ ಇಂತಹ ಸಾಮಾಜಿಕ ವಿಷಯಗಳ ಬಗ್ಗೆ ಯೋಚಿಸುವಷ್ಟು ವಿವೇಕವುಳ್ಳ ನೇತಾರ ಸಮಾಜೋತ್ಸವದ ಹಿಂದೆ ಇಲ್ಲದಿರುವುದು ದುರಂತ. ಕೇವಲ ಮುಸ್ಲಿಮರ ಮತಾಂಧತೆ ಹಾಗೂ ಕ್ರೈಸ್ತರ ಮತಾಂತರದ ಹೆದರು ಬೊಂಬೆ ತೋರಿಸಿ ಬಿಸಿ ರಕ್ತದ ಅರೆಸಾಕ್ಷರ ಹಿಂದೂ ಯುವಕರನ್ನು ಈ ಕೆಲಸದಲ್ಲಿ ತೊಡಗಿಸಲಾಗಿದೆ. ನೀವು ವೀರರು ಶೂರರು ಕ್ಷತ್ರಿಯರು, ಹಾಗಾಗಿ ಧರ್ಮವನ್ನು ರಕ್ಷಿಸುವುದು ನಿಮ್ಮ ಕರ್ತವ್ಯ - ಎಂದೆಲ್ಲಾ ಹೇಳಿ ಉಬ್ಬಿಸಿ ಪ್ರಚೋದಿಸಿ ಶೂದ್ರ ಯುವಕರನ್ನು ಮುಂದೆ ದೂಡಿ ಮೇಲ್ಜಾತಿ ನೇತಾರರು ಅದರ ಫಲ ತಾವು ಉಣ್ಣುತ್ತಿದ್ದಾರೆ ಅಷ್ಟೇ. ಇದು ಇಂದು ನಿನ್ನೆಯದಲ್ಲ, ಪುರಾಣಕಾಲದಿಂದ ನಡೆದುಕೊಂಡು ಬರುತ್ತಿರುವ ಅಪ್ಪಟ ಆರ್ಯ ಪದ್ಧತಿಯಿದು. ದುಡಿಯುವವನು ಶೂದ್ರ ಅದರ ಫಲ ಉಣ್ಣುವವನು ವೈದಿಕ [illegible].

ಒಂದು ವೇಳೆ ನಮ್ಮ ದೇಶಕ್ಕೆ ನೆರೆಯ ವೈರಿ ದೇಶದಿಂದ ಘೋರ ಆಪತ್ತು ಬಂದರೆ ಈ ಹಿಂದೂ ಸಮಾಜೋತ್ಸವಕ್ಕೆ ಸೇರಿರುವ ವೀರ ಶೂರ ಕ್ಷಾತ್ರತೇಜದ ಸೋಕಾಲ್ಡ್ ದೇಶಭಕ್ತರಲ್ಲಿ ಎಷ್ಟು ಜನರು ಮಿಲಿಟರಿ ಸೇರಿ [illegible] ತಯಾರಿದ್ದಾರೆ? ಒಂದು ಯೂನಿಟ್ ರಕ್ತದಾನ [illegible] ಹೇಳಿದಾಗ ಹೆದರಿ ಚಡ್ಡಿ ಒದ್ದೆ ಮಾಡಿಕೊಳ್ಳುವ ಈ ಕೇಸರಿ [illegible] ವೀರ ಶೂರ ಕ್ಷತ್ರಿಯರು ಎಂದಾದರೂ ಮಿಲಿಟರಿ ಸೇರುವುದು [illegible]? ಸಮಾಜೋತ್ಸವದ ಪ್ರಚಾರಕ್ಕೆ ಹೆಲ್ಮೆಟ್ ಇಲ್ಲದೇ ಸ್ಕೂಟರ್ ಮೇಲೆ [illegible] ಮೆರವಣಿಗೆ ಹೋಗುವ ವೀರವನಿತೆಯರಲ್ಲಿ ಹೆಚ್ಚಿನವರು ತಮ್ಮ ಮನೆಯ ಗಂಡಸರು ಮಿಲಿಟರಿ ಸೇರುವುದಕ್ಕೆ ದೊಡ್ಡ ಅಡ್ಡಿಯಾಗಿರುತ್ತಾರೆ. ಒಟ್ಟಾರೆ ಈ ಸಮಾಜೋತ್ಸವವು ಧರ್ಮದ ಹೆಸರಲ್ಲಿ ಸಮಾಜಕ್ಕೆ ಒಂದಿಷ್ಟೂ ಉಪಯೋಗವಿಲ್ಲದ ಆಷಾಢಭೂತಿಗಳ ಒಂದು ಬಯಲುನಾಟಕ ಅಷ್ಟೇ.

- ಜಿ. ರವಿಕಿರಣ ರೈ, ಮಂಗಳೂರು

ಕರಾವಳಿಯಲ್ಲಿ ಎರಡು ವಾರದಲ್ಲಿ ಎರಡು ಹಿಂದೂ ಸಮಾಜೋತ್ಸವ ನಡೆಯಿತು. ಈ ಸಾರಿ ಮಂಗಳೂರು-ಉಡುಪಿಯಲ್ಲಿ ಜರುಗಿದ ಎರಡೂ ಹಿಂದೂ ಸಮಾಜೋತ್ಸವದ ಫ್ಲೆಕ್ಸ್ ಬ್ಯಾನರ್‌ಗಳಲ್ಲಿ ವಿವೇಕಾನಂದರ ಚಿತ್ರ ಕಡಿಮೆಯಾಗಿದೆ. ಕಾರಣ ಈಗ ಎಲ್ಲರಿಗೂ ಗೊತ್ತಾಗಿದೆ - ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದೊಳಗೆ ದೇವರ ಹೆಸರಲ್ಲಿ ನಡೆಯುವ ಕಂದಾಚಾರ ಹಾಗೂ ಮೋಸಗಳ ವಿರುದ್ಧ ಬಹಿರಂಗ ಬಂಡಾಯ ಸಾರಿದ್ದರು. ಹಾಗಾಗಿ ಕೆಳ ಕಾಯಸ್ಥ ಜಾತಿಯವರಾಗಿದ್ದ ವಿವೇಕಾನಂದರಿಗೆ ಬಂಗಾಲಿ ಬ್ರಾಹ್ಮಣರು ವಿಪರೀತ ಕಿರುಕುಳ ಕೊಟ್ಟು ಅವರ ಆರೋಗ್ಯ ಹಾಳಾಗುವಂತೆ ಮಾಡಿ ಅವರು ಕೇವಲ 39 ವರ್ಷ ವಯಸ್ಸಿನಲ್ಲಿಯೇ ತೀರಿಕೊಳ್ಳುವಂತೆ ಮಾಡಿದ್ದರು, ಇಲ್ಲದಿದ್ದರೆ ಅವರು ಇನ್ನೂ ಕೆಲವು ವರ್ಷ ಬದುಕಿರುತ್ತಿದ್ದರು.

ಈ ಸಾರಿ ವಿಎಚ್‌ಪಿಯವರ ಬ್ಯಾನರ್‌ಗಳಲ್ಲಿ ಉಗ್ರನರಸಿಂಹನು ಹಿರಣ್ಯಕಶಪುವಿನ ಹೊಟ್ಟೆ ಬಗೆಯುವ ಚಿತ್ರಗಳಿಗೆ ಹೆಚ್ಚು ಒತ್ತು ಕೊಡಲಾಗಿತ್ತು. ಇದು ಅಲ್ಪಸಂಖ್ಯಾತ ಧರ್ಮದವರಿಗೆ ಹಿರಣ್ಯಕಶಪುನ ಅವಸ್ಥೆ ನಿಮಗೂ ಬರಬಹುದು ಎಂಬ ಎಚ್ಚರಿಕೆ ಕೊಡುವ ಉದ್ದೇಶದಿಂದ ಮಾಡಿದ್ದು ಎಂಬುದು ಒಬ್ಬ ವಿಎಚ್‌ಪಿ ಸ್ವಯಂಸೇವಕನ ವಿವರಣೆ. ನಿಜವಾಗಿ ನರಸಿಂಹ ಒಬ್ಬ ಆರ್ಯ ನೇತಾರ ಹಾಗೂ ಹಿರಣ್ಯಕಶಪು ಅಸುರರು ಎಂದು ಕರೆಯಲಾಗುತ್ತಿದ್ದ ಬುಡಕಟ್ಟು ಜನಾಂಗದ ನೇತಾರನಾಗಿದ್ದ. ಉಗ್ರನರಸಿಂಹ ಹಿರಣ್ಯಕಶಪುವಿನ ಹೊಟ್ಟೆ ಬಗೆಯುವುದು ಎಂದರೆ ಆರ್ಯರು ಸಿಂಹದ ಮಾರುವೇಷ ತೊಟ್ಟು ಕಂಬದ ಹಿಂದೆ ಅಡಗಿ ಕುಳಿತು ನಿರಾಯುಧ ಹಿರಣ್ಯಕಶಪುನ ಮೇಲೆ ಮೋಸದಿಂದ ದಾಳಿ ಮಾಡಿ ಕೊಂದಿದ್ದರ ಸಂಕೇತ. ಹಾಗಾದರೆ ವಿಎಚ್‌ಪಿಯವರು ನಮ್ಮಂತಹ ಬುಡಕಟ್ಟು ಜನರ ಮೇಲೆ ಇಂತಹದ್ದೇ ಮೋಸ ಈಗಲೂ ಮುಂದುವರಿಸುವರೆ?

ವಿಎಚ್‌ಪಿ ಮೆರವಣಿಗೆಯಲ್ಲಿ ಶ್ರೀರಾಮನ ಫ್ಲೆಕ್ಸ್‌ಗಳೂ ಅನೇಕವಿದ್ದವು. ಯಾರಿಗೂ ತೊಂದರೆ ಕೊಡದೇ ಅರಣ್ಯದಲ್ಲಿ ತನ್ನಷ್ಟಕ್ಕೆ ತಾನೇ ತಪಸ್ಸು ಮಾಡುತ್ತಿದ್ದ ಶೂದ್ರ ಶಂಭೂಕನನ್ನು ವಿನಾಕಾರಣ ಕೊಂದ ರಾಮನಿವನು. ಯಾರೋ ಒಬ್ಬ ತಲೆಕೆಟ್ಟ ಬ್ರಾಹ್ಮಣ ಬಂದು ತನ್ನ ಮಗನ ಸಾವಿಗೆ ಶೂದ್ರನೊಬ್ಬನ ತಪಸ್ಸು ಕಾರಣವೆಂದು ಹೇಳಿದ ತಕ್ಷಣ ಹಿಂದೆಮುಂದೆ ಆಲೋಚಿಸದೇ ಶಂಭೂಕನನ್ನು ಕೊಂದ ರಾಮನಿವನು. ಇಂತಹ ರಾಮನ ಅಮಾನುಷ ಕೃತ್ಯ ಕಂಡು ಆಕಾಶದಿಂದ ದೇವತೆಗಳು ಪುಷ್ಪ ವೃಷ್ಟಿ ಮಾಡಿ ನಲಿದಾಡಿದರಂತೆ! ಎಂತಹ ಶತಮೂರ್ಖ ದೇವತೆಗಳು ನಮ್ಮ ದೇಶದ ಆಕಾಶದಲ್ಲಿ ಇದ್ದಿರಬಹುದು!

ಯಾರೋ ಒಬ್ಬ ಮಡಿವಾಳ ಏನೋ ಹೇಳಿದನೆಂದು ತನ್ನ ತುಂಬು ಗರ್ಭಿಣಿ ಹೆಂಡತಿಯನ್ನು ನಿರ್ದಯೆಯಿಂದ ಅರಣ್ಯಕ್ಕೆ ಅಟ್ಟಿದ ಪುರುಷ ಪ್ರಧಾನ ಸಮಾಜದ ಪ್ರತಿನಿಧಿ ಈ ಪುರುಷೋತ್ತಮ. ಇಂತಹ ದಲಿತ-ದ್ವೇಷಿ ಸ್ತ್ರೀ-ವಿರೋಧಿ ರಾಮನನ್ನು ಆರಾಧಿಸುವ ಹಿಂದೂ ಸಂಘಟನೆ ಅದೇ ಹಳೆಯ ಪೌರಾಣಿಕ ಕಾಲದ ಚಾಳಿ ಈಗಲೂ ಮುಂದುವರಿಸದೇ ಇರುವರೆ? ಸಹ್ಯಾದ್ರಿ ಬುಡದ ಕರಾವಳಿಯ ಅರಣ್ಯ ನಾಶ ಮಾಡಿ ಅದಕ್ಕೆ ಪರಶುರಾಮ ಸೃಷ್ಟಿ ಎಂದು ಹೆಸರಿಟ್ಟು, ಕಾಡಿನ ಪ್ರಾಣಿಗಳನ್ನು ಹಾಗೂ ನಾಗರಹಾವುಗಳನ್ನು ಕೊಂದು ಅದಕ್ಕೆ ಜನಮೇಜಯನ ಸರ್ಪಸತ್ರ ಯಜ್ಞ ಎಂದು ಕರೆದು, ನಂತರ ಬುಡಕಟ್ಟು ಜನರನ್ನು ಕೊಂದು ಅದಕ್ಕೆ ಕ್ಷತ್ರಿಯ ಸಂಹಾರ ಎಂದು ಕರೆದ ಪರಿಸರ ವಿರೋಧಿ ಅಹಂಕಾರಿ ಪರಶುರಾಮನ ಸ್ತಬ್ಧ ಚಿತ್ರವೂ ಮೆರವಣಿಗೆಯಲ್ಲಿ ರಾರಾಜಿಸುತ್ತಿತ್ತು, ಇಂತಹ ಜೀವವಿರೋಧಿ ಭಾರ್ಗವನ ಅನುಯಾಯಿಗಳಾದ ವಿಎಚ್‌ಪಿಯವರಿಂದ ಯಾವ ಜನಪರ ಸೇವೆ ನಿರೀಕ್ಷಿಸಲು ಸಾಧ್ಯ?

- ವೀರಪ್ಪ ದಿ.ಎನ್, ಮಂಗಳೂರು

[illegible]

ವಿಶ್ವ ಹಿಂದೂ ಪರಿಷತ್‌ನ ಸ್ವರ್ಣ ಮಹೋತ್ಸವದ ಅಂಗವಾಗಿ ಮೊನ್ನೆ ಮಂಗಳೂರಿನಲ್ಲಿ ಸಾಧ್ವಿ ಬಾಲಿಕಾ ಸರಸ್ವತಿ ಎಂಬಾಕೆ ನೀಡಿದಂತಹ ವಿಕಾರ ಭಾಷಣ ಕೇಳಿ ಮಂಗಳೂರಿಗರಾರೂ ಅಚ್ಚರಿ ಪಟ್ಟಿಲ್ಲ. ಒಂದು ವೇಳೆ ತಬ್ಬಿಬ್ಬಾಗಿದ್ದೇನಾದರೂ ಇದ್ದರೆ ಅದು ಅದೇ ಬಾಲಿಕೆ ಮಾತ್ರ. ಯಾಕೆಂದರೆ ನಂತರ ಭಾಷಣ ಮಾಡಿದವರ್‍ಯಾರೂ ಅವಳ ಮಾತಿಗೆ ಬೆಂಬಲಿಸುವಂತಹ ಮಾತನ್ನೇ ಆಡಲಿಲ್ಲ ಎಂಬುದು. ಚಕ್ರಗಳು ತಿರುಗುತ್ತಲೇ ಇರುತ್ತವೆ. ಒಂದು ಸಮಯದಲ್ಲಿ ಉಗ್ರ ಭಾಷಣಕಾರರಾದ ಮುತಾಲಿಕ್, ತೊಗಾಡಿಯಾರಂತವರು ಕಡಿಯಿರಿ-ಕೊಚ್ಚಿರಿ ಎನ್ನುತ್ತಾ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿದ್ದುದುಂಟು. ಈಗಲೂ ಅವರದ್ದು ಉಗ್ರ ಭಾಷಣವೇ ಇದ್ದರೂ ಕೂಡ ಈ ಕಡಿಯಿರಿ ಕೊಚ್ಚಿರಿಗಳು ಬಹಳಷ್ಟು ತಣ್ಣಗಾಗಿ ಬಿಟ್ಟಿವೆ ಎಂಬುದು ಅಷ್ಟೇ ಸತ್ಯ. ಇಂಥಾದ್ದೇ ಮಾತನ್ನಾಡುತ್ತಿದ್ದ ಭಜರಂಗದಳದ ಮಹೇಂದ್ರ ಕುಮಾರ್‌ರಂತವರು ಇದೀಗ ಜ್ಞಾನೋದಯವಾದವರಂತೆ ಮಾತನಾಡುತ್ತಿದ್ದಾರೆ. ಇಟ್ಟಿಗೆ ಅದ್ವಾನಿಯಂತೂ ಈಗ ಥೇಟ್ ಸಂತನೇ ಆಗಿ ಹೋಗಿದ್ದಾನೆ.

ಮಂಗಳೂರಿಗೆ ಆರಂಭದಲ್ಲಿ ಬಂದಾಗ ವಿಷಕಾರುತ್ತಲೇ ಭಾಷಣ ಮಾಡಿದ್ದ ಮೋದಿ ಲೋಕಸಭಾ ಚುನಾವಣಾ ಸಮಯದಲ್ಲಿ ಬಂದಾಗ ತಪ್ಪಿಯೂ ಅಂತಹ ಮಾತನ್ನಾಡದೇ ಬರೀ ಅಭಿವೃದ್ಧಿಯ ಕುರಿತಷ್ಟೇ ಕೊರೆದು ಹೋಗಿದ್ದ. ಹೀಗಾಗಿ ವಾತಾವರಣ ಪೂರ್ತಿಯಾಗಿ ತಿಳಿಯಾಗಿರದಿದ್ದರೂ ಇಂತಹ ಮಾತುಗಳಿಗೆ ಮೊದಲಿನಂತಹ ಕೇಳುಗ ವರ್ಗ ಈಗ ಖಂಡಿತಾ ಇಲ್ಲ.

ಹಿಂದೂ ಸಮಾವೇಶದಲ್ಲಿ ಜನರು ಒಟ್ಟಾಗುವುದು ಹಿಂದೂ ಧರ್ಮದ ಶ್ರೇಷ್ಠ ಪರಂಪರೆಯ ಕಾರಣಕ್ಕಲ್ಲ, ಇನ್ನೊಂದು ಧರ್ಮೀಯರ ಮತಾಂತರ, ಗೋಹತ್ಯೆ, ಲವ್ ಜಿಹಾದ್‌ನಂತಹ ಹೊಸ ಹೊಸತಾಗಿ (ಬಾಬರಿ ಮಸೀದಿ ಹಳತಾಯಿತು; ಈಗ ಲವ್ ಜಿಹಾದ್ ಇತ್ಯಾದಿ) ಬಣ್ಣ ಕಟ್ಟಲ್ಪಟ್ಟ ಸಂಗತಿಗಳಿಂದ ಉದ್ರೇಕಿತರಾಗಿ ತಮ್ಮ ಸಾಮರ್ಥ್ಯ ತೋರಿಸುವ ಹುಸಿ ಹುಮ್ಮಸಿನಿಂದಷ್ಟೇ ಎಂಬುದು ಎಲ್ಲರಿಗೂ ತಿಳಿದಿರುವಂತಹದ್ದೇ. ಹೀಗಿರುವಾಗ ಇಂತಹ ಉದ್ರೇಕಕಾರಿ -ಪ್ರಚೋದನಕಾರಿ ಭಾಷಣಗಳಿಲ್ಲದ ಹಿಂದೂ ಸಮಾವೇಶಗಳಾದರೂ ಯಾತಕ್ಕೆ?


ಈ ಕಾರಣಕ್ಕೇ ಇಂತಹ ಬಾಲಿಕೆಗಳು ಹುಟ್ಟಿಕೊಳ್ಳುತ್ತಲೇ ಇರುತ್ತಾರೆ ಅಥವಾ ತಯಾರು ಮಾಡಲ್ಪಡುತ್ತವೆ. ನಮ್ಮ ಸಾಂಪ್ರದಾಯಿಕ ವೈರಿ ದೇಶ ಎನಿಸಿದ ಪಾಕಿಸ್ತಾನಕ್ಕೆ ಹೋಗಿ 'ರಾಮಭೂಮಿ ಕಟ್ಟಿ, ಮುಸ್ಲಿಮರ ತಲೆ ಕಡಿಯಿರಿ, ಕೈ ಕಡಿಯಿರಿ' ಎಂದಿದ್ದ ಈಕೆ ನಿಜಕ್ಕೂ ಧೈರ್ಯಶಾಲಿಯೇ ಆಗಿದ್ದರೆ ಯಾರೂ ಏನೂ ಮಾಡುವುದಿಲ್ಲ ಎಂದು ಗೊತ್ತಿದ್ದೂ ಏಕಾಂಗಿಯಾಗಿ ಮಂಗಳೂರಿನ ಯಾವುದೋ ಬೀದಿಯಲ್ಲಿ ಅಡ್ಡಾಡಿ ಬರಲಿ ನೋಡುವಾ. ಊಹುಂ, ಬಾಯಲ್ಲಿ ಕಡಿಯಿರಿ ಕೊಚ್ಚಿರಿ ಎಂದು ಇತರರನ್ನು ಪ್ರಚೋದಿಸುವವರು ಇಂತಹ ಸಣ್ಣ ಧೈರ್ಯವನ್ನೂ ಕೂಡ ಹೊಂದಿರಲಾರರು. (ಉಳಿದವರನ್ನು ಪ್ರಚೋದಿಸುವ ಕಲ್ಲಡ್ಕದ ಡಾನ್‌ನಂತವರು ಬಾಡಿಗಾರ್ಡ್‌ಗಳಿಲ್ಲದೇ ಎಂದೂ ಹೊರ ಇಣುಕಿ ಸಹ ನೋಡುವುದಿಲ್ಲ) ಯಾಕೆಂದರೆ ಇವರ ಬಂಡವಾಳ ಕೇವಲ ಬಾಯಷ್ಟೇ. ಎದುರಿಗೆ ಕೂತವರು ಚಪ್ಪಾಳೆ ತಟ್ಟುತ್ತಾರೆ, ಅದನ್ನು ಕೇಳಿ ಮತ್ತಷ್ಟು ಉತ್ತೇಜಿತರಾಗಿ ರುಂಡ ಕಡಿಯಿರಿ, ರಕ್ತ ಕುಡಿಯಿರಿ ಎನ್ನುವ ಮಟ್ಟಕ್ಕೂ ಹೋಗಲು ಹೇಸುವುದಿಲ್ಲ ಇವರುಗಳ ಹೊಲಸು ಬಾಯಿ.

ಹಿಂದೂ ಧರ್ಮದ ದೊಡ್ಡ ನಾಯಕರೆನಿಸಬೇಕಾದರೆ, ನೀವು ಪರಮಹಂಸರ, ವಿವೇಕಾನಂದರ ಮೌಲ್ಯಗಳನ್ನು ಅನುಸರಿಸಬೇಕೆಂದೇನಿಲ್ಲ, ಅಷ್ಟೇ ಯಾಕೆ ನೀವೊಬ್ಬ ಹಿಂದೂವೇ ಆಗಬೇಕೆಂದೇನೂ ಇಲ್ಲ, ಇಂತಹ ಹೊಲಸು ಉದ್ರೇಕಕಾರಿ ಕೀಳು ಮಾತುಗಳನ್ನು ಆಡಲು ಕಲಿತರೆ ಸಾಕು. ನೀವು ಆಡುವ ರೀತಿ, ವ್ಯಗ್ರತೆ ಇತ್ಯಾದಿಗಳ ಆಧಾರದಲ್ಲಿ ನಿಮಗೆ ದಿಢೀರ್ ಪಟ್ಟ ಸಿಕ್ಕಿ ಎಲ್ಲೆಲ್ಲಿಯೂ ನಿಮ್ಮ ದಿಕ್ಕು ತಪ್ಪಿಸುವ "ದಿಕ್ಸೂಚಿ" ಭಾಷಣಕ್ಕೆ ಡಿಮಾಂಡ್ ಒದಗುತ್ತದೆ. ಪಾರ್ಸಿ ಅಪ್ಪ-ಸಿಖ್ ಧರ್ಮೀಯ ತಾಯಿಗೆ ಜನಿಸಿದ ವರುಣ್ ಗಾಂಧಿ 'ಕಡಿ, ಕೊಚ್ಚು' ಎನ್ನುತ್ತಲೇ ಹಿಂದೂ ಮತಾಂಧರ ಕಣ್ಮಣಿ ಎನಿಸಲಿಲ್ಲವೇ?

ಹಿಂದೂ ಧರ್ಮಕ್ಕೆ ಸೆಡ್ಡು ಹೊಡೆದು ಮಹಾವೀರನಿಂದ ಮರುಹುಟ್ಟುಪಡೆದ ಅಥವಾ ಅದಕ್ಕೂ ಪ್ರಾಚೀನವಾದ ವೃಷಭನಾಥ ನೇಮಿನಾಥನಂತವರ ಅಹಿಂಸಾ ತತ್ವ ಸಾರುವ ಜೈನ ಧರ್ಮೀಯರು ತಮ್ಮ ಇಂತಹ ವಿಶೇಷತೆಗಳಿಂದಲೇ ಇಲ್ಲಿ ಚಾಲ್ತಿಯಲ್ಲಿಲ್ಲವೇ? ಉಡುಪಿಯಲ್ಲಿ ನಡೆದ ಸಮಾಜೋತ್ಸವದಲ್ಲಿ ಮಾತಾಡುತ್ತಾ ಪೇಜಾವರರು ನಮ್ಮದು ಕೋಮುವಾದವಲ್ಲ ಪ್ರೇಮವಾದ ಎಂದು ತಮ್ಮ ಅನಿಷ್ಟ ಪರಂಪರೆಯನ್ನು ಮೇಲಕ್ಕೆತ್ತಲು ನೋಡಿದರು. ಆದರೆ ತೊಗಾಡಿಯಾ, ಬಾಲಿಕಾ ಸರಸ್ವತಿ, ಕಲ್ಲಡ್ಕ ಡಾನ್‌ನಂತವರ ಮಾತನ್ನು ಕೇಳಿದರೆ ಇದು ಯಾವ ರೀತಿಯ ಪ್ರೇಮವ್ಯಾಧಿ ಎಂಬುದು ಯಾರಿಗೂ ಅರ್ಥವಾಗದೇ ಇರದು ಬಿಡಿ.

[illegible]

ಬಸವಣ್ಣ ಅನುಭಾವಿಯಾದ ಕ್ರಮ



ದ್ವಿದಳ ಧಾನ್ಯವೊಂದು ತೇವಾಂಶದ ಭೂಮಿಗೆ ಬಿದ್ದಾಗ ಅದರೊಳಗಿನ ಬೀಜಮೂಲವು ಮೊಳಕೆಯೊಡೆಯುವುದಕ್ಕಾಗಿ ಆ ದ್ವಿದಳದೊಳಗಿನ ಜೀವಶಕ್ತಿಯನ್ನೇ ತಿನ್ನುವುದು! ತದನಂತರವೆ ಅದರ ಬೇರುಗಳು ಭೂಮಿಗೆ ಇಳಿಯುತ್ತವೆ. ಭೂಸತ್ವ ಮತ್ತು ಜಲಸತ್ವದೊಂದಿಗೆ ಮೊಳಕೆಯೊಡೆದ ಬೀಜವು ಸಸಿಯ ರೂಪವನ್ನು ತಾಳುತ್ತದೆ. ಗಾಳಿ, ಬೆಳಕು ಮತ್ತು ಆಕಾಶದ ಸಹಾಯದೊಂದಿಗೆ ಬೆಳೆಯುತ್ತದೆ. ಹೀಗೆ ಬೀಜವೊಂದು ತನ್ನೊಳಗಿನ ಶಕ್ತಿಯಿಂದ ಕ್ರಿಯಾಶೀಲವಾಗು ತ್ತದೆ. ನಂತರ ಪಂಚಮಹಾಭೂತಗಳ ಸಹಾಯದೊಂದಿಗೆ ಬೆಳೆದು ಫಲನೀಡುತ್ತದೆ. ಈ ತೆರನಾಗಿ ಅದು ಪಂಚಮಹಾಭೂತಗಳನ್ನೆಲ್ಲ ತನ್ನೊಳಗೆ ತೆಗೆದುಕೊಂಡು ತನ್ನೊಳಗಿನದೆಲ್ಲವನ್ನೂ ಲೋಕಕ್ಕೆ ಅರ್ಪಿಸುತ್ತದೆ. ಕೊನೆಗೆ ಪಂಚಮಹಾಭೂತಗಳಲ್ಲಿ ಲೀನವಾಗುತ್ತದೆ.

ಬರಿ ಹೊರಗಿನ ಶಕ್ತಿಯಿಂದ ಏನನ್ನೂ ಸಾಧಿಸಲಿಕ್ಕಾಗದು. ಒಳಗೆ ಶಕ್ತಿಯಿದ್ದಾಗ ಮಾತ್ರ ಹೊರಗಿನ ಶಕ್ತಿಗಳು ಸಹಾಯಕ್ಕೆ ಬರುತ್ತವೆ. ಸಸ್ಯಲೋಕವೂ ಸೇರಿದಂತೆ, ಜೀವಜಗತ್ತಿನ ಪ್ರತಿಯೊಂದು ಜೀವವೂ ಇದೇ ತೆರನಾಗಿ ವಿಕಸನಗೊಳ್ಳುತ್ತದೆ. ನಂತರ ಬಯಲಿನೊಳಗೆ ಬಯಲಾಗುತ್ತದೆ. ಬಸವಧರ್ಮ ಕೂಡ ಇದೇ ತೆರನಾದ ನಿಸರ್ಗಧರ್ಮದ ಮೇಲೆಯೇ ನಿಂತಿದೆ.

ಎಲ್ಲ ಮಾನವರೂ ಬಸವಣ್ಣ ಆಗ ಬಲ್ಲರು. ಹಾಗಾಗಲು ಮೊದಲಿಗೆ ಬಸವಣ್ಣನವರಂತೆ ಅವರ ಒಳಲೋಕದೊಳಗೂ ಜೀವಕಾರುಣ್ಯದ ಶಕ್ತಿ ಇರಬೇಕು. ಅದು ಹೊರಲೋಕದ ಅನುಭವದೊಂದಿಗೆ ವಿಕಸನಗೊಳ್ಳಬೇಕು. ಒಳ ಮತ್ತು ಹೊರಲೋಕಗಳು ದ್ವೈವತ್ವವನ್ನು ಕಳೆದುಕೊಂಡು ವಿಕಸಿತ ಮನಸ್ಸಿನೊಳಗೆ ಅದ್ವೈತವಾಗಬೇಕು. ಇಡೀ ಪ್ರಪಂಚವನ್ನು ತನ್ನೊಳಗೆ ತೆಗೆದುಕೊಂಡು ತನ್ನೊಳಗಿನದೆಲ್ಲವನ್ನೂ ಇಡೀ ಪ್ರಪಂಚಕ್ಕೆ ಕೊಡಬೇಕು. ಹೀಗೆ ಸಕಲಜೀವಾತ್ಮರಿಗೆ ಲೇಸನೆ ಬಯಸುವಷ್ಟು ಬೆಳೆಯಬೇಕು. ಇಂಥ ಬೆಳೆಯುವ ಕ್ರಮದಲ್ಲಿ ವ್ಯಕ್ತಿಯೊಬ್ಬ ತನ್ನೊಳಗಿನ ಸತ್ವವನ್ನು ಅರಿತು, ಹೊರಗಿನ ಪ್ರಜ್ಞೆಯೊಂದಿಗೆ ಬೆರೆತು ಅನುಭವದ ಆಳ ಮತ್ತು ಎತ್ತರವನ್ನು ಹೊಂದುತ್ತ ವ್ಯಕ್ತಿತ್ವವನ್ನು ವಿಕಸನ ಹೊಂದುತ್ತಾನೆ. ಇಂಥ ಮನುಷ್ಯ ತನ್ನೊಳಗಿನ ಚೈತನ್ಯವೆಂಬ ಲಿಂಗ ಮತ್ತು ತನ್ನ ಹೊರಗಿನ ಜಗತ್ತೆಂಬ ಅಂಗದೊಂದಿಗೆ ಸಮರಸ ಹೊಂದುತ್ತ ಪಡೆಯುವ ಅರಿವೆಂಬ ಗುರುವಿನ ಮೂಲಕ ಮಾತ್ರ ಅನುಭಾವಿಯಾಗಲು ಸಾಧ್ಯ. ಲಿಂಗ (ಎನರ್ಜಿ)ದಿಂದಲೇ ಅಂಗ (ಮ್ಯಾಟರ್) ಆಗಿದೆ. ಆ ಅಂಗದೊಳಗೂ ಲಿಂಗವೇ ಇದೆ. ಕೊನೆಗೊಂದು ದಿನ ಎಲ್ಲವೂ ಲಿಂಗೈಕ್ಯ ಸ್ಥಿತಿಯನ್ನೇ ತಲುಪುವುದು. ಇದೇ ನಿಸರ್ಗದ ರಹಸ್ಯ. ಹಾಗೆ ತಲುಪುವ ಮೊದಲೇ ಮಾನವರು ಲಿಂಗಾಂಗ ಸಾಮರಸ್ಯದೊಂದಿಗೆ ಅಚ್ಚ ಲಿಂಗೈಕ್ಯರಾಗಿ ಸರ್ವಸಮತ್ವಕ್ಕಾಗಿ ಕ್ರಿಯಾಶೀಲರಾಗುವುದನ್ನು ಬಸವಣ್ಣನವರು ಬಯಸಿದ್ದರು. ಈ ತೆರನಾಗಿ ವ್ಯಷ್ಟಿಯು ತನ್ನ ಒಳಹೊರಗುಗಳನ್ನು ಒಂದಾಗಿಸಿ ಸಮಷ್ಟಿಯಾಗುವುದೇ ಲಿಂಗಾಂಗಸಾಮರಸ್ಯ. ಒಳ ಮತ್ತು ಹೊರಗಿನ ಅನುಭವಗಳ ಮೂಲಕ ತಲುಪುವ ಲಿಂಗಾಂಗಸಾಮರಸ್ಯ ಎಂಬ ಈ ಐಕ್ಯಸ್ಥಿತಿಯ ಪರಿಣಾಮವೇ ಅನುಭಾವ. ಈ ಅನುಭಾವದ ಆನಂದಕ್ಕಾಗಿ ಬಸವಾದಿ ಶರಣರು ಸದಾ ಲಿಂಗೈಕ್ಯ ಸ್ಥಿತಿಯಲ್ಲಿ ಇರುತ್ತಿದ್ದರು.

ಈ ಲಿಂಗೈಕ್ಯ ಸ್ಥಿತಿ ಎಂಬುದು ಪ್ರಪಂಚದ ಸವಾಲುಗಳನ್ನು ಎದುರಿಸದೆ ಹಿಮಾಲಯದ ಕಡೆಗೆ ಓಡಿಹೋಗುವುದಲ್ಲ, ಇದೊಂದು ಧ್ಯಾನಸ್ಥ ಅನಿಮಿಷ ಅವಸ್ಥೆ. ಅಂದರೆ ಒಳಗಿನ ಧ್ಯಾನ ಮತ್ತು ಹೊರಗಿನ ಪ್ರಜ್ಞೆಯೊಂದಿಗೆ ಬದುಕುವುದು. ಈ ರೀತಿ ಅಚ್ಚ ಲಿಂಗೈಕ್ಯ ಸ್ಥಿತಿಯಲ್ಲೇ ಸದಾ ಪ್ರಪಂಚದ ಆಗುಹೋಗುಗಳ ಕಡೆಗೆ ಜಾಗೃತವಾಗಿರುವಂಥವರು ಲಿಂಗಾಂಗಸಾಮರಸ್ಯವನ್ನು ಸಾಧಿಸಿದವರಾಗಿರುತ್ತಾರೆ. ಈ ಲಿಂಗಾಂಗಸಾಮರಸ್ಯ ಹೊಂದುವುದಕ್ಕೆ ಅಡ್ಡ ಬರುವ ಲಿಂಗಭೇದ, ಜಾತಿಭೇದ, ವರ್ಣಭೇದ, ವರ್ಗಭೇದ, ಪ್ರಾದೇಶಿಕ ಭೇದ ಮುಂತಾದ ಭೇದಗಳನ್ನು ಅಳಿಸಿ ಹಾಕುವುದಕ್ಕಾಗಿ ಸಾಂಘಿಕ ಹೋರಾಟ ಮಾಡುವುದು ಬಸವ ತತ್ತ್ವನಿಷ್ಠರ ಆದ್ಯ ಕರ್ತವ್ಯವಾಗಿದೆ. ಇಂಥ ಸಂಕೋಲೆಗಳಿಂದ ಮಾನವನನ್ನು ವಿಮೋಚನೆಗೊಳಿಸಿ ಲಿಂಗಾಂಗಸಾಮರಸ್ಯದ ಆನಂದದೆಡೆಗೆ ಒಯ್ಯುವುದೇ ಬಸವಧರ್ಮದ ಗುರಿಯಾಗಿದೆ. ಒಳಗಿನ ಅರಿವು ಮತ್ತು ಹೊರಗಿನ ಪ್ರಜ್ಞೆಯಿಂದ ಎಲ್ಲ ಪ್ರಕಾರದ ಸಮಾನತೆ ಸಾಧಿಸಿದಾಗಲೇ ಈ ಅವಸ್ಥೆ ತಲುಪಲು ಸಾಧ್ಯ. ಇದು ವ್ಯಕ್ತಿಯಿಂದ ಪ್ರಾರಂಭವಾಗಿ ಇಡೀ ಸಮೂಹವನ್ನು ತನ್ನೊಳಗೆ ತೆಗೆದುಕೊಳ್ಳುವಂಥ ವಾತಾವರಣ ಸೃಷ್ಟಿಯಾದಾಗ ಮಾತ್ರ ಬಸವ ಸಮಾಜ ಪರಿಪೂರ್ಣಗೊಳ್ಳುವುದು. ಆಗ ಇಡೀ ಮಾನವಕುಲ ಒಂದಾಗಿ ಸಕಲಜೀವಾತ್ಮರಿಗೆ ಲೇಸನೆ ಬಯಸುವಂಥ ಮನಸ್ಸನ್ನು ಹೊಂದುವುದು.

ಬಸವಧರ್ಮವು ನಿಸರ್ಗಧರ್ಮವಾಗಿರುವುದರಿಂದ ಮತ್ತು ಮಾನವರ ಮಧ್ಯದ ಸಕಲಭೇದಗಳು ಅನೈಸರ್ಗಿಕವಾಗಿರುವುದರಿಂದ, ಸಹಜ ಸರಳ ಬದುಕಿಗಾಗಿ ಚಳವಳಿ ಮತ್ತು ಹೋರಾಟಗಳು ಅನಿವಾರ್ಯವಾಗಿವೆ ಎಂಬುದನ್ನು ಜಗತ್ತಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟವರೇ ಬಸವಣ್ಣನವರು. ಅಶಾಂತಿಯನ್ನು ಹುಟ್ಟು ಹಾಕುವ ಯುದ್ಧಗಳ ಜಾಗದಲ್ಲಿ ಶಾಂತಿಯನ್ನು ಸ್ಥಾಪಿಸುವ ಹೋರಾಟವನ್ನು ಜಗತ್ತಿಗೆ ಕಲಿಸಿದವರೇ ಬಸವಣ್ಣನವರು. ಅದಕ್ಕೂ ಮೊದಲು ಶಾಂತಿಗಾಗಿ ಪ್ರಯತ್ನಿಸಿದ ಅನೇಕ ಮಹಾತ್ಮರಿದ್ದರು. ಆದರೆ ಚಳವಳಿಯ ಮೂಲಕ ಪ್ರಯತ್ನಿಸಿದವರು ಕಾಣಸಿಗುವುದಿಲ್ಲ.

ಬಸವ ಚಳವಳಿಯು ಅನುಭಾವಿಗಳ ಚಳವಳಿಯಾಗಿತ್ತು. ಪ್ರತಿಯೊಬ್ಬ ಕಾಯಕಜೀವಿ ತನ್ನ ದೈನಂದಿನ ಅನುಭವದ ಮೂಲಕವೇ ಅನುಭಾವಿಯಾಗುವ ಸೂತ್ರವನ್ನು ಬಸವಣ್ಣನವರು ಕಂಡುಹಿಡಿದರು. ಈ ಬಸವವಿದ್ಯೆಯು ಕರ್ಮಸಿದ್ಧಾಂತವನ್ನು ಅಲ್ಲಗಳೆಯುತ್ತ ಸ್ವರ್ಗ, ನರಕಗಳನ್ನು ನಿರಾಕರಿಸುವ ವಿದ್ಯೆಯಾಗಿದೆ. ಹುಸಿ ಕರ್ಮಸಿದ್ಧಾಂತದ ಕೃತ್ರಿಮ ಫಲಗಳಾದ ಬಡತನ, ಶ್ರೀಮಂತಿಕೆ, ಮೇಲ್ಜಾತಿ, ಕೀಳುಜಾತಿ, ಅಪೂರ್ಣ ಹೆಣ್ಣು, ಪರಿಪೂರ್ಣ ಗಂಡು ಮುಂತಾದ ಅನಿಷ್ಟಗಳನ್ನು ಬಸವಣ್ಣನವರು ತಿರಸ್ಕರಿಸಿದರು. ಚಳವಳಿಗಳ ಮೂಲಕ ಮಾನವಕುಲವನ್ನು ಒಂದಾಗಿಸುತ್ತ ಪ್ರತಿಯೊಬ್ಬರೂ ತಮ್ಮ ಒಳ ಮತ್ತು ಹೊರಗಿನ ಮಧ್ಯೆ ಅಭೇದ್ಯ ಕಲ್ಪಿಸಿದ ನಂತರ ಉಂಟಾಗುವ ಲಿಂಗಾಂಗಸಾಮರಸ್ಯದೊಂದಿಗೆ ಅನುಭಾವಿಗಳಾಗಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

ಲಿಂಗಾಂಗಸಾಮರಸ್ಯದಲ್ಲಿ ಮಾನವನ ವ್ಯಕ್ತಿತ್ವವಿಕಸನ ತತ್ತ್ವವೂ ಅಡಗಿದೆ. ಈ ಪ್ರಕಾರದ ವ್ಯಕ್ತಿತ್ವ ವಿಕಸನದ ಮೂಲಕ ಮಾನವರು ದೇವರಿಗಿಂತಲೂ ಅಧಿಕ ಎನಿಸಿಕೊಳ್ಳಬಲ್ಲರು. ನಮ್ಮ ವಿಷಮ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲ ಜಾತಿಗಳಿಗಿಂತ ಕಡೆಯಲ್ಲಿರುವ ಮಾದಿಗ ಜಾತಿಯಲ್ಲಿ ಹುಟ್ಟಿ ವಿಶ್ವಮಾನವರಾಗಿ ಬೆಳೆದ ಮಾದಾರ ಚೆನ್ನಯ್ಯನವರು ದೇವರಿಗಿಂತಲೂ ಅಧಿಕ ಎಂದು ಬಸವಣ್ಣನವರು ಸಾರಿದ್ದಾರೆ.

ಮಹಾವೀರ, ಬುದ್ಧ ಜೀಸಸ್, ಪೈಗಂಬರ, ಬಸವಣ್ಣ ಗುರುನಾನಕ, ಗಾಂಧಿ, ಅಂಬೇಡ್ಕರ್ ಮುಂತಾದ ಮಹಾನುಭಾವರು ಮನುಷ್ಯರ ಮಧ್ಯದ ಕಂದರಗಳನ್ನು ಮುಚ್ಚಲು ನಿರಂತರ ಪ್ರಯತ್ನ ಮಾಡಿದವರಾಗಿದ್ದಾರೆ. ಆದರೂ ಸಾಮಾಜಿಕವಾಗಿ ಮೇಲ್ ಸ್ತರದವರು ಎಂದು ಭಾವಿಸಿದ ಮನುಷ್ಯರನೇಕರು ಕುಲಮದ, ಧನಮದ ಮತ್ತು ಜ್ಞಾನಮದದಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಕೆಳಸ್ತರದವರು ತಮ್ಮ ಕೀಳರಿಮೆಯಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಈ ಎರಡೂ ಅವಸ್ಥೆಗಳು ನೈಸರ್ಗಿಕವಾಗಿ ಅವಾಸ್ತವ ಆಗಿವೆ. ಅಂತೆಯೆ ಬಸವಣ್ಣನವರು "ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ? ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?" ಎಂದು ಪ್ರಶ್ನಿಸಿದ್ದಾರೆ. ವಚನ ಸಾಹಿತ್ಯದಲ್ಲಿನ ಇಂಥ ಪ್ರಶ್ನೆಗಳೇ ಹೋರಾಟದ ಬೀಜಗಳಾಗಿವೆ.

ಈ ಪ್ರಶ್ನೆಗಳು ಸವರ್ಣೀಯರಿಗೆ ಎಚ್ಚರಿಕೆ ನೀಡಿದವು. ಶೂದ್ರ ಮತ್ತು ಅತಿಶೂದ್ರರು ಎಂದು ಅವಗಣನೆಗೆ ಒಳಗಾದ ಕಾಯಕಜೀವಿಗಳಿಗೆ ಮೇಲೇಳಲು ಧೈರ್ಯ ತುಂಬಿದವು. ಸವರ್ಣೀಯರ ಹಿತರಕ್ಷಣೆಯ ಉದ್ದೇಶದಿಂದಲೇ ಇಂಥ ಅವಮಾಯಕರ ಧೈರ್ಯವನ್ನು ಕುಂದಿಸಲು ಪುರೋಹಿತಶಾಹಿಗಳು ಕರ್ಮಸಿದ್ಧಾಂತದ ಮೂಲಕ ಮಂದಿರ, ಮೂರ್ತಿ, ಸ್ವರ್ಗ, ನರಕ, ಪುಣ್ಯ ಪಾಪ, ಶಾಪ, ಪುನರ್ಜನ್ಮ, ಮೋಕ್ಷ ಮುಂತಾದ ಸಂಕೋಲೆಗಳಲ್ಲಿ ಅವರನ್ನು ಬಂಧಿಸಿದರು. ಈ ಎಲ್ಲ ಸಂಕೋಲೆಗಳನ್ನು ಕಿತ್ತೊಗೆದು ದುಡಿಯುವ ವರ್ಗವನ್ನು ವಿಮೋಚನೆಗೊಳಿಸುವುದೇ ಬಸವಣ್ಣನವರ ಬಹುಮುಖ್ಯ ಗುರಿಯಾಗಿತ್ತು.

ಪುರೋಹಿತಶಾಹಿಗಳು ಶಾಸ್ತ್ರಮಾರ್ಗವನ್ನು ದುಡಿಯುವ ವರ್ಗದ ಶೋಷಣೆಗಾಗಿಯೇ ರೂಪಿಸಿದ್ದರು. ಆದರೆ ಅವರು ನಡೆಯುವ ಐಹಿಕ ಮಾರ್ಗವೇ ಬೇರೆಯಾಗಿತ್ತು. ಅಂತೆಯೆ ಬಸವಣ್ಣನವರು 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ' ಎಂದು ಅಸಂತೋಷ ವ್ಯಕ್ತಪಡಿಸಿದರು. 'ಇನ್ನು ಜಂಗಮವೇ ಲಿಂಗವೆಂದು' ನಂಬಿದೆ ಎಂದು ಸಾರಿದರು. ಜಂಗಮ (ಸಮಾಜ)ವನ್ನೇ ದೈವತ್ವಕ್ಕೇರಿಸಿ ಆ ಸಮಾಜದ ಸೇವೆಯನ್ನು ಹೋರಾಟದ ಮೂಲಕ ಮಾತ್ರ ಮಾಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.


'ಲಿಂಗಾರ್ಚನಂ ನ ಕರ್ತವ್ಯಂ' ಎಂದು ತಿಳಿಸಿದ ಬಸವಣ್ಣನವರು 'ಜಂಗಮಾರ್ಚನಂ ಕರ್ತವ್ಯಂ' ಎಂದು ಸಾರಿದರು. ಲಿಂಗಾರ್ಚನೆ ಕರ್ತವ್ಯ ಅಲ್ಲ; ಶೋಷಣೆ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ಮಾನಸಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಮಾಡುವ ತಾಲೀಮು. ಇಂಥ ಮನೋಸ್ಥೈರ್ಯದ ತಾಲೀಮಿಗೆ ಬೌದ್ಧಧರ್ಮದಲ್ಲಿ 'ಸಮ್ಯಕ್ ವ್ಯಾಯಾಮ' ಎಂದು ಕರೆಯುತ್ತಾರೆ. ವ್ಯಾಯಾಮ ಶಾಲೆಯಲ್ಲಿ ಇಡೀ ಜೀವನ ತಾಲೀಮು ಮಾಡುತ್ತ ಕುಳಿತರೆ ಕುಸ್ತಿ ಹಿಡಿಯುವುದು ಯಾವಾಗ? ಕುಸ್ತಿ ಹಿಡಿಯುವ ಅಖಾಡಾ ಸಮಾಜದಲ್ಲಿದೆ. ಅಲ್ಲಿನ ಶೋಷಕ ಶಕ್ತಿಗಳನ್ನು ಸೋಲಿಸಬೇಕಿದೆ. ಇದುವೇ ಜಂಗಮಾರ್ಚನ. ಇದುವೇ ಕರ್ತವ್ಯ. ಇಂಥ ಕರ್ತವ್ಯವನ್ನು ನಿಭಾಯಿಸಲು ಶಕ್ತಿ ಕೊಡುವಂಥದ್ದೇ ಲಿಂಗಾರ್ಚನ ಎಂಬದನ್ನು ಬಸವಣ್ಣನವರು ಮಾರ್ಮಿಕವಾಗಿ ಸೂಚಿಸಿದ್ದಾರೆ. ಇಂಥ ಶೋಷಣೆರಹಿತ ವ್ಯವಸ್ಥೆಗಾಗಿ ಹೋರಾಡುವವರಿಗೆ ಲಿಂಗಾಂಗಸಾಮರಸ್ಯದಿಂದ ಲಭ್ಯವಾಗುವ ಅನುಭಾವವನ್ನು ಪಡೆಯುವುದು ಸಾಧ್ಯ. ಹೋರಾಟದ ಮೂಲಕ ಬರುವ ಇಂಥ 'ಸೈದ್ಧಾಂತಿಕ ಸಾಮರಸ್ಯ'ದಿಂದಲೇ ಮಾರ್ಕ್ಸ್, ಲೆನಿನ್, ಲೋಹಿಯಾ, ಅಂಬೇಡ್ಕರ್ ಮುಂತಾದ ಹೋರಾಟಗಾರರು ಅನುಭಾವಿಗಳಾದರು!


ಸದ್ಯ ಭಾರತದಲ್ಲಿ ನಮ್ಮ ಕಾಲದ ಬಹುದೊಡ್ಡ ಅನುಭಾವಿ ಎಂದರೆ ತ್ರಿಪುರಾ ಮುಖ್ಯಮಂತ್ರಿ ಕಾಮ್ರೇಡ್ ಮಾಣಿಕ್ ಸರ್ಕಾರ್ ಅವರು. ಅನೇಕ ಬಾರಿ ತ್ರಿಪುರಾ ಮುಖ್ಯಮಂತ್ರಿಗಳಾದ ಅವರ ಚರ ಮತ್ತು ಸ್ಥಿರಾಸ್ತಿ ಎರಡೂವರೆ ಲಕ್ಷ ರೂಪಾಯಿ ಮೀರುವುದಿಲ್ಲ! ಇದು ಒಬ್ಬ ಐಟಿ ಎಂಜಿನಿಯರ್‌ನ ತಿಂಗಳ ಸಂಬಳಕ್ಕಿಂತಲೂ ಕಡಿಮೆ!! ಅವರು ತಮ್ಮ ಮುಖ್ಯಮಂತ್ರಿ ಪದವಿಯಿಂದ ಬರುವ ಹಣವನ್ನೆಲ್ಲ ಪಕ್ಷದ ಕಚೇರಿಗೆ ಒಪ್ಪಿಸುತ್ತಾರೆ. ಪ್ರತಿ ತಿಂಗಳು ಪಕ್ಷ ಕೊಡುವ 5000 ರೂಪಾಯಿಗಳಲ್ಲಿ ಜೀವನ ಸಾಗಿಸುತ್ತಾರೆ!!! ಇದುವೇ ಬಸವಣ್ಣನವರು ಹೇಳಿದ ದಾಸೋಹ ತತ್ತ್ವ. "ಹೊನ್ನಿನೊಳಗೊಂದೊರೆಯ, ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ" ಎಂದು ಬಸವಣ್ಣನವರು ತಿಳಿಸಿದ್ದಾರೆ. ದಾಸೋಹ ತತ್ತ್ವದ ಪ್ರಕಾರ ಶರಣರು ಗಳಿಸಿದ್ದೆಲ್ಲವನ್ನೂ ಶಿವನಿಧಿಗೆ ಅರ್ಪಿಸುತ್ತಿದ್ದರು. ನಂತರ ಅಲ್ಲಿಂದ ಬಂದುದನ್ನು ಪ್ರಸಾದವಾಗಿ ಸ್ವೀಕರಿಸುತ್ತಿದ್ದರು.

ಮಾಣಿಕ್ ಸರ್ಕಾರ್ ಅವರಂಥ ಕಾಮ್ರೇಡ್‌ಗಳು ಕೂಡ ಹೀಗೆಯೆ ಮಾಡುತ್ತಾರೆ. ಇ.ಎಂ.ಎಸ್.ನಂಬೂದಿರಿಪಾಡ್, ಭೂಪೇಶಗುಪ್ತಾ, ನಾಗಿರೆಡ್ಡಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರಂಥ ಸಂಗಾತಿಗಳು ಹೀಗೆಯೆ ಬದುಕಿ ನಮಗೆಲ್ಲ ದಾರಿದೀಪವಾಗಿದ್ದಾರೆ. ಇವರ ಸೈದ್ಧಾಂತಿಕ ನೆಲೆಗಳು ಬೇರೆಯಾಗಿದ್ದಿರಬಹುದು ಆದರೆ ಇವರ ಚಾರಿತ್ರ್ಯ ಮಾನವಕುಲಕ್ಕೆ ಅನನ್ಯವಾಗಿದೆ. ಇದಕ್ಕಿಂತ ನಿಚ್ಚಳವಾದ ಲಿಂಗಾಂಗಸಾಮರಸ್ಯ ಬೇಕೆ? ಇಂಥವರ ಬದುಕಿನ ಸಾಮರಸ್ಯದಿಂದ ಲಭ್ಯವಾಗುವ ಅನುಭಾವಕ್ಕಿಂತ ಹೆಚ್ಚಿನದು ಯಾವುದಿದೆ?

ಅನುಭಾವ, ಅನುಭಾವ ಎನ್ನುತ್ತ ಆಸ್ತಿ ಮಾಡುವವರು, ಕೀರ್ತಿಶನಿಯ ಹಿಂದೆ ಬೀಳುವವರು, ಅಧಿಕಾರಕ್ಕಾಗಿ ಹಾತೊರೆಯುವವರು, ಪರಾಕುಪ್ರಿಯರು, ಜಾತಿ, ಉಪಜಾತಿಗಳಲ್ಲೇ ಕೊಳೆಯುವವರು, ಬಸವತತ್ತ್ವ ನಿಷ್ಠರಾಗದೆ ಬಸವಮೂರ್ತಿ, ಬಸವ ಚಿತ್ರಗಳಲ್ಲೇ ತಲ್ಲೀನರಾಗುವವರು ಅನು ಭಾವಿಗಳಾಗಲು ಸಾಧ್ಯವೆ?

● ರಂಜಾನ್ ದರ್ಗಾ





ತ್ರಿಪುರಾದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ನೊಂದ ಹೆಣ್ಣು

ಮುರಿದ ಕಾಲಿಗೆ
ಮರದ ಕಾಲಿನ
ಚಿಕಿತ್ಸೆ ಕೊಡಿಸಿದ ಅವನು
ಪರಿಹಾರದ ನಗೆ ಬೀರಿದ



ನಗು ಬತ್ತಿದ ಅವಳ ತುಟಿ
ನೋಡಿ ನಗಬಾರದೇ?
ಎಂದು ಅವನೆಂದಾಗ

ಮರಗಟ್ಟಿದ ಕಾಲಿನ ಕೊಡುಗೆ
ತುಟಿಯವರೆಗೂ ವ್ಯಾಪಿಸಿ
ನಗು ಕಳೆದಿದೆ ಎಂದಳವಳು

ಇದೀಗ ಅವಳ ನಗು
ಹುಡುಕಿಕೊಡುವ ಅಭಿನಯದಲ್ಲಿ
ಅವನು ನಿಸ್ಸೀಮನಾಗಿ
ಅತ್ಯುತ್ತಮ ನಟನೆನಿಸಿಕೊಂಡ

ಅವನು ಮಾಡಿದ
ಅಪಘಾತದಿಂದ
ಅವಳ ಕಾಲು
ಮುರಿಯಿತು

ಅವಳು ಮಾತ್ರ ನಿಜದಲ್ಲಿ
ನೊಂದ ಹೆಣ್ಣಾಗಿಯೇ
ಉಳಿದಳು...




● ಜ್ಯೋತಿ ಗುರುಪ್ರಸಾದ್, ಕಾರ್ಕಳ

ೀಖಕರಿಗೆ ಅವಮಾನ: ಊರಿನ ಅಧಃಪತನದ ಸಂಕೇತ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಚೊಕ್ಕಾಡಿಯಲ್ಲಿ ಈಚೆಗೆ ನಡೆದ ಶ್ರೀ ದೇರಾಜೆ ಸೀತಾರಾಮಯ್ಯ ...ರಣಾ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸರಾದ ಡಾ. ತಾಳ್ತಜೆ ವಸಂತಕುಮಾರ ಅವರನ್ನು ಭಾಗವಹಿಸದಂತೆ ...ತಿದ ಘಟನೆಯ ಬಗ್ಗೆ ಕೇಳಿ ಆತಂಕಿತನಾಗಿದ್ದೇನೆ. ರಾಘವೇಶ್ವರ ಸ್ವಾಮಿಯ ವಿರುದ್ಧ ಮಾತಾಡಿದವರನ್ನು ಸಾರ್ವಜನಿಕ ...ವೇದಿಕೆಯಿಂದ ಹೊರಗಿಡುವಂತೆ ಮಾಡುವ ಇಂಥ ಕೆಲಸಗಳು ಧರ್ಮದ ಹೆಸರಿನಲ್ಲಿ ನಡೆಯುವ ಗೂಂಡಾಗಿರಿಯಾಗಿದೆ.

ಈ ಅನಪೇಕ್ಷಿತ ಘಟನೆಯು ದೇರಾಜೆ ಸಂಸ್ಮರಣಾ ಕಾರ್ಯಕ್ರಮದಲ್ಲಿ ದೇರಾಜೆಯವರಿಗೇ ಮಾಡಿದ ಘನಘೋರ ...ಮಾನವಾಗಿದೆ. ತಮ್ಮ ಅತ್ಯಂತ ವಿಶಿಷ್ಟವಾದ ಮಾತುಗಾರಿಕೆಯಿಂದ ಪುರಾಣ ಪಾತ್ರಗಳನ್ನು ಸಮಕಾಲೀನಗೊಳಿಸುತ್ತಾ, ...ರ್ಮೀ ಬಾರಿ ಅವುಗಳನ್ನು ದಿಟ್ಟವಾಗಿ ಭಂಜನಗೊಳಿಸುತ್ತಾ, ನನ್ನಂಥ ಲಕ್ಷಾಂತರ ಮಂದಿಯ ಮನಸುಗಳನ್ನು ...ಕ್ಷಗೊಳಿಸಿ, ಯಕ್ಷಗಾನ ಪ್ರಿಯರೆಲ್ಲರ ಕಣ್ಮಣಿಯಾಗಿದ್ದ ದೇರಾಜೆ ಸೀತಾರಾಮಯ್ಯ ಅವರ ಹೆಸರಿನಲ್ಲಿಯೇ ...ಥ ವಿದ್ವತ್ ವಿರೋಧೀ ಕೃತ್ಯ ನಡೆದದ್ದು ಒಳ್ಳೆಯ ಊರುಗಳು ಕೆಟ್ಟ ಹಾದಿ ಹಿಡಿಯುತ್ತಿರುವುದರ ...ಂಕೇತವಾಗಿದೆ. 1960ರ ದಶಕದಲ್ಲಿ ಶ್ರೀ ಟಿ.ಜಿ.ಮುಡೂರು ಅವರ ಮುಂದಾಳತ್ವದಲ್ಲಿ ಪಂಜವು ...ತ್ಯಿಕವಾಗಿ ಮುಖ್ಯ ಊರಾಗಿತ್ತು, ಅವರು ಸಂಪಾದಿಸಿದ 'ಕಣ್ ಕನಸು ತೆರೆದಾಗ' ಪುಸ್ತಕವು ...ಮೀಣ ಪ್ರದೇಶದ ಮುಕ್ತ ಮನಸುಗಳ ಸುಂದರ ಕಥನವಾಗಿದೆ. ನಿಧಾನವಾಗಿ ಪಂಜದ ಸ್ಥಾನವನ್ನು ...ಕ್ಕಾಡಿ ಆಕ್ರಮಿಸಿಕೊಂಡಿತು. ಶ್ರೀಗಳಾದ ಕೊಳಂಬೆ ಪುಟ್ಟಣ್ಣ ಗೌಡ, ಅಜ್ಜನ ಗದ್ದೆ ಗಣಪಯ್ಯ ...ಗವತರು, ಸುಬ್ರಾಯ ಚೊಕ್ಕಾಡಿ, ಲಕ್ಷ್ಮೀಶ ಚೊಕ್ಕಾಡಿ, ಶ್ರೀ ಕೃಷ್ಣ ಚೊಕ್ಕಾಡಿ, ಬಾಲಸುಬ್ರಹ್ಮಣ್ಯ ...ರ್ಪಣೆ ಮೊದಲಾದ ಅನೇಕರು ಸುಮನಸಾ ವಿಚಾರ ವೇದಿಕೆಯ ಮೂಲಕ ತಂದ ಸಾಹಿತ್ಯಿಕ - ...ಚಾರಿಕ ಕ್ರಾಂತಿ ಐತಿಹಾಸಿಕವಾದುದು. ಇಂದು ಪ್ರಖರವಾಗಿ ಬರೆಯುತ್ತಿರುವವರಲ್ಲಿ ಶ್ರೀ ಸಂತೋಷ ...ಕ್ಕಾಡಿಯವರೂ ಒಬ್ಬರು. ಪ್ರಖ್ಯಾತ ಕಲಾವಿದರಾಗಿದ್ದ ಶ್ರೀ ಕೆರೆಮನೆ ಶಂಭು ಹೆಗಡೆಯವರು ಒಮ್ಮೆ ...ಕ್ಕದಲ್ಲಿ ಸಿಕ್ಕಾಗ ಹೇಳಿದ್ದರು-'ಚೊಕ್ಕಾಡಿಯಲ್ಲಿ ಆಟ ಆಡುವುದೆಂದರೆ ಅದೊಂದು ಬೇರೆಯದೇ ಆದ ...ನುಭವ, ಎಂಥಾ ಸುಸಂಸ್ಕೃತರ ಊರು ಅದು'. ಇಂಥಾ ಊರಿನಲ್ಲಿ ಈಗ ಹೀಗೇಕೆ ಆಗುತ್ತಿದೆ? ...ಘವೇಶ್ವರ ಸ್ವಾಮಿ ಪ್ರಕರಣ ಹೀಗೆ ಊರುಗಳನ್ನೆಲ್ಲ ನಾಶ ಮಾಡಬೇಕೇ? ಕರ್ನಾಟಕದಲ್ಲಿ ಬೌದ್ಧ ...ರ್ಮ ಎಂಬ ವಿಷಯದ ಕುರಿತು ಆಳವಾದ ಸಂಶೋಧನೆ ನಡೆಸಿದ ಡಾ. ತಾಳ್ತಜೆಯವರು ಸಾವಿರಾರು ...ದ್ಯಾರ್ಥಿಗಳಿಗೆ ಪಾಠ ಹೇಳಿದ್ದಾರೆ. ಅವರ ಶ್ರೀಮತಿಯವರಾದ ಡಾ. ಮಣಿಮಾಲಿನಿಯವರು ವಿದ್ಯಾರ್ಥಿಗಳ ...ಲೇಜು ಜೀವನಕ್ಕೆ ಕೌಟುಂಬಿಕ ಸ್ಪರ್ಶ ನೀಡಿ, ಆಹ್ಲಾದಗೊಳಿಸಿದ ಅಪೂರ್ವ ಮಹಿಳೆಯಾಗಿದ್ದರು.



...ಪಠ್ಯ ಭಾಗದ ರಸವತ್ತಾದ ನಿರೂಪಣೆ. ವಿದ್ಯಾರ್ಥಿಗಳ ಮನೋಸ್ಥಿತಿಗೆ ಅನ್ವಯವಾಗುವಂಥ ಉದಾಹರಣೆಗಳ ...ಕೆ, ಆಗಾಗ ವಿದ್ಯಾರ್ಥಿಗಳನ್ನು ಚರ್ಚೆಯಲ್ಲಿ ಒಳಗೊಳ್ಳುವಂತೆ ಮಾಡುವ ತಂತ್ರಗಾರಿಕೆ ಇತ್ಯಾದಿಗಳಿಂದ ...ೀ ತಾಳ್ತಜೆಯವರು ತುಂಬಾ ಜನಪ್ರಿಯವಾದ ಅಧ್ಯಾಪಕರಾಗಿದ್ದರು. ನಮಗೆಲ್ಲ ಪಂಪ, ಕುಮಾರವ್ಯಾಸ, ...ೀಪಾಲಕೃಷ್ಣ ಅಡಿಗ, ಮುಳಿಯ ತಿಮ್ಮಪ್ಪಯ್ಯ, ಶಿವರಾಮ ಕಾರಂತ ಮೊದಲಾದವರ ಹುಚ್ಚು ಹತ್ತಿಸಿದವರೇ ...ವರು. ಹವ್ಯಕ ಸಮುದಾಯಕ್ಕೆ ಸಹಜವಾಗಿರುವ ಮುಕ್ತ ಚಿಂತನೆ, ಜಾತ್ಯತೀತ ನಿಲುವುಗಳು, ಯಕ್ಷಗಾನ ಪ್ರಿಯತೆ, ...ಿಕತೆ ಮೊದಲಾದ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಅವರು ಲಕ್ಷಾಂತರ ವಿದ್ಯಾರ್ಥಿಗಳ ಕಣ್ಮಣಿ.

ಚೊಕ್ಕಾಡಿಯಲ್ಲಿ ತಾಳ್ತಜೆಯವರು ರಾಘವೇಶ್ವರ ಭಾರತಿ ಅವರ ಬಗ್ಗೆ ಮಾತಾಡಲು ಬರುತ್ತಿದ್ದರೆ, ಅವರನ್ನು ...ರೋಧಿಸುವವರಿಗೆ ಒಂದು ನೆಲೆಯಾದರೂ ದೊರಕುತ್ತಿತ್ತು. ಆದರೆ ಅವರ ಬರುವಿಕೆಯ ಉದ್ದೇಶವೇ ಬೇರಿತ್ತು. ...ದು ಮಠಗಳ ಹೆಸರಿನಲ್ಲಿ ನಡೆಯುವ ಅನ್ಯಾಯದ ಕೆಲಸ. ಲೇಖಕರನ್ನು ಹೀಗೆ ಸುಲಭವಾಗಿ ಬೆದರಿಸುವ ಜನರಿಗೆ, ...ಷ್ಟ ರಾಜಕಾರಣಿಗಳನ್ನು, ಜಾತಿವಾದಿಗಳನ್ನು, ಕೋಮುವಾದಿಗಳನ್ನು, ಮಹಿಳಾ ಶೋಷಕರನ್ನು, ದಲಿತ ವಿರೋಧಿಗಳನ್ನು ...ತೆಯುವ ಶಕ್ತಿ ಇದೆಯೇ? ಬರಹಗಾರರು ಇವರಿಗೆ ಸುಲಭದ ತುತ್ತು. ಇದು ಸಮಾಜವೊಂದರ ಅಧಃಪತನದ ...ಂಕೇತ. ನಮ್ಮ ಪ್ರೀತಿಯ ಮತ್ತು ಹೆಮ್ಮೆಯ ಚೊಕ್ಕಾಡಿಯಲ್ಲಿಯೇ ಹೀಗಾದರೆ ಉಳಿದ ಊರುಗಳ ಪಾಡೇನು?

● ಪುರುಷೋತ್ತಮ ಬಿಳಿಮಲೆ

ತಾಳ್ತಜೆಯವರಿಗೆ ಮಾಡಿದ ಅವಮಾನದ ಬಗ್ಗೆ ಕ್ಷಮೆ ಮತ್ತು ಸ್ಪಷ್ಟೀಕರಣ ಕೋರುತ್ತಾ

ಇತ್ತೀಚೆಗೆ ಸುಳ್ಯ ತಾಲೂಕಿನ ಚೊಕ್ಕಾಡಿಯಲ್ಲಿ ಜರುಗಿದ ದೇರಾಜೆ ಸೀತಾರಾಮಯ್ಯ ಶತಮಾನೋತ್ಸವ ಸಂಸ್ಮರಣ ಕಾರ್ಯಕ್ರಮದಲ್ಲಿ ನಮ್ಮ ಜಿಲ್ಲೆಯ ಮೇರು ವಿದ್ವಾಂಸರಲ್ಲೊಬ್ಬರಾದ ತಾಳ್ತಜೆ ವಸಂತಕುಮಾರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಬೇಕಿತ್ತು. ಆದರೆ, ಮೊನ್ನೆ ಮೊನ್ನೆ ಅವರು ಮಂಗಳೂರಿನಲ್ಲಿ ನಡೆದ ಸಮಾನ ಮನಸ್ಕರ ಸಭೆಯಲ್ಲಿ ವ್ಯಕ್ತಪಡಿಸಿದ ನೈತಿಕ ನಿಲುಮೆಯನ್ನು ನೆಪವಾಗಿರಿಸಿಕೊಂಡು ಚೊಕ್ಕಾಡಿಯ ಕೆಲವು ಹಪ್ಪಕರು "ಗುರುಗಳಿಗೆ ಅವಮಾನ ಮಾಡಿದ ತಾಳ್ತಜೆಯವರು ಬಂದರೆ ಗಲಾಟೆ ಮಾಡುತ್ತೇವೆ" ಎಂದು ಸಂಘಟಕರಲ್ಲಿ ಹೇಳಿದ್ದಾರೆಂದೂ ಆ ಕಾರಣಕ್ಕೆ ಬೆದರಿದ ಸಂಘಟಕರು ನೀವು ಬರುವುದು ಬೇಡ ಎಂದು ತಾಳ್ತಜೆಯವರಲ್ಲಿ ಹೇಳಿದ ಕಾರಣ ಬೇಸರಗೊಂಡ ತಾಳ್ತಜೆಯವರು 'ಆಯಿತು ಹಾಗಾದರೆ, ನಾನು ಬರುವುದಿಲ್ಲ" ಎಂದು ಹೇಳಿ, ಸಮಾರಂಭಕ್ಕೆ ಗೈರುಹಾಜರಾಗಿದ್ದಾರೆ.

ಚೊಕ್ಕಾಡಿಗೆ ಹೆಸರು ತಂದಿತ್ತ ದೇರಾಜೆಯವರ ಸಂಸ್ಮರಣೆ ಎಂಬುದು ಒಂದು ಸಾಂಸ್ಕೃತಿಕ ಕಾರ್ಯಕ್ರಮ. ಅಲ್ಲಿ ವಿದ್ವಾಂಸರ ಮಾತು ಕೇಳುವ ಸೌಭಾಗ್ಯ ಊರವರದ್ದು. ಅದು ಊರಿನ ಸಂಸ್ಕಾರದ ಪ್ರತೀಕ. ಅಂಥಾದ್ದರಲ್ಲಿ ಎಲ್ಲೋ ಯಾವುದೋ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕೆ ಇಲ್ಲಿಗೆ ಬರಲು ಬಿಡುವುದಿಲ್ಲ ಎಂಬುದು ಗೂಂಡಾಗಿರಿಯೇ ಸರಿ.

ನಮ್ಮ ಊರು ಇಂಥಾ ಅಸಹನೆಯನ್ನು ಇಷ್ಟು ದಿನ ಪ್ರದರ್ಶಿಸಿದ್ದಿಲ್ಲ. ಇದನ್ನು ಸಾಧನೆ ಎಂಬಂತೆ ಭಾವಿಸಿ ಈ ಬೆದರಿಕೆ ಒಡ್ಡಿದ ಮಂದಿ ಬೀಗಿ ಹೇಳಿಕೊಂಡರೆ ಅಚ್ಚರಿ ಏನಿಲ್ಲ. ನಾಳೆ ಇದೇ ಚಾಳೀ ಮುಂದುವರಿದು, ಅವರವರ ಮೂಗಿನ ನೇರಕ್ಕೆ "ಅವರು ಬೇಡ, ಇವರು ಬಂದರೆ ಗಲಾಟೆ ಮಾಡುತ್ತೇವೆ" ಎನ್ನುವುದೇ ರಾಜಮಾರ್ಗವಾದರೆ, ಕಾರ್ಯಕ್ರಮಗಳ ಗತಿಯೇನು?

ಸಂಘಟಕರು ಈ ಬಗ್ಗೆ ಸಾರ್ವಜನಿಕವಾಗಿ ವಿಷಾದ/ ಕ್ಷಮೆ ಕೋರುವ ಔದಾರ್ಯವನ್ನೂ ತೋರಿಲ್ಲ. ಅದೊಂದು ನಡೆದೇ ಇಲ್ಲ ಅನ್ನುವ ರೀತಿಯಲ್ಲಿ ಕಾರ್ಯಕ್ರಮ ನಡೆಸಿಕೊಂಡು ಹೋಗಿದ್ದಾರೆ. ಈ ಪ್ರತಿಷ್ಠಾನದ ಪದಾಧಿಕಾರಿಗಳಲ್ಲಿ ಹಿರಿಯರಾದ ಏರ್ಯ ಲಕ್ಷ್ಮೀನಾರಾಯಣ ಆಳ್ವಾ, ಪ್ರದೀಪ್ ಕುಮಾರ್ ಕಲ್ಕೂರ ಮತ್ತು ದೇರಾಜೆಯವರ ಪುತ್ರ ಮೂರ್ತಿ ದೇರಾಜೆ ಕೂಡಾ ಇದ್ದಾರೆ. ಅವರಿಗೂ ಈ ಅಸಂಸ್ಕೃತ ನಡೆ ಒಪ್ಪಿಗೆ ಎನ್ನಿಸಿದೆಯೇ?


ಇದು ಚೊಕ್ಕಾಡಿ ಒಂದು ಊರಿಗೆ ಸಂಬಂಧಿಸಿದ್ದಲ್ಲ. ಇದು ನಮ್ಮ ಮಧ್ಯೆ ಇರುವ ಅಸಹನೆಯ ಮಂದಿಯ ಒರಟು ಬ್ಲಾಕ್‌ಮೈಲ್ ತಂತ್ರಗಳನ್ನು ಸಾತ್ವಿಕರು ಸಹಿಸಿಕೊಳ್ಳುವ ಪ್ರಶ್ನೆ.

ಆದ್ದರಿಂದಲೇ ನಾನು ಗಂಭೀರವಾಗಿ ಕೇಳಬಯಸುವುದು, ಈ ಬಗ್ಗೆ ಸಂಘಟಕರು ಸತ್ಯಾಂಶವನ್ನು ಹೇಳಬೇಕು. ಹಾಗೇ ಊರಿನವರು (ಸುಬ್ರಾಯ ಚೊಕ್ಕಾಡಿ ಮುಂತಾದವರು) ಹಾಗೂ ದೇರಾಜೆ ಸೀತಾರಾಮಯ್ಯ ಶತಮಾನೋತ್ಸವ ಸಮಿತಿಯ ಹಿರಿಯರು ಇಂಥಾದ್ದನ್ನು ಮನ್ನಿಸುತ್ತಾರೋ ಎಂದೂ ತಿಳಿಯಬಯಸುತ್ತೇನೆ.

ಹಾಗೇ ಚೊಕ್ಕಾಡಿಯವನಾದ ನಾನು ನನ್ನ ಊರಿನ ಕೆಲವರಿಂದ ಗೌರವಾನ್ವಿತ ತಾಳ್ತಜೆ ವಸಂತಕುಮಾರ್ ಅವರಿಗೆ ಆದ ಅವಮಾನಕ್ಕೆ ಸಮಸ್ತ ಊರಿನವರ ಪರವಾಗಿ ಕ್ಷಮೆ ಯಾಚಿಸುತ್ತೇನೆ.


● ಕೆ.ಪಿ.ಸುರೇಶ, ಕಂಜರ್ಪಣೆ

...ಸೇನ್ ವಿರುದ್ಧ ಮೋದಿ ಪ್ರಹಾರ



ಸರ್ವಾಧಿಕಾರಿ ವ್ಯಕ್ತಿತ್ವವೊಂದು 'ಕೋಲೆಬಸವನಂತಿರುವ ಹೊಗಳುಭಟರ ಸಾಮೀಪ್ಯವನ್ನು, ಅವರ ಮುಖಸ್ತುತಿಯ ಮಾತುಗಳನ್ನು ಎಷ್ಟು ತೀವ್ರವಾಗಿ ಬಯಸುತ್ತದೋ ಅಷ್ಟೇ ತೀವ್ರವಾಗಿ ತನ್ನ ವಿರೋಧಿಗಳನ್ನು ದ್ವೇಷಿಸುತ್ತಾ, ಅವರ ಮೇಲೆ ಹಗೆ ಸಾಧಿಸಲು ಅವಕಾಶಗಳಿಗಾಗಿ ಕಾಯುತ್ತಲೇ ಇರುತ್ತದೆ. ಇವೆರಡೂ ಅಂಶಗಳು ಪರಸ್ಪರ ಪೂರಕವಾಗಿದ್ದು ಒಂದು ಇನ್ನೊಂದನ್ನು ಬಿಟ್ಟಿರಲಾರವು.

ನರೇಂದ್ರ ಮೋದಿ ತನ್ನ ವಿರೋಧಿಗಳನ್ನು ಎಂದಿಗೂ ಮರೆಯುವುದಿಲ್ಲ, ಅವರನ್ನೆಂದಿಗೂ ಕ್ಷಮಿಸುವುದಿಲ್ಲ ಎಂಬುದಕ್ಕೆ ಸಂಜಯ ಜೋಶಿ, ಗೋವರ್ಧನ್ ಜಡಾಫಿಯ, ಕಾನುಭಾಯಿ ಕಲ್ಸಾರಿಯ, ಹರೇನ್ ಪಾಂಡ್ಯ ಮೊದಲಾದ ಹಲವಾರು ನಿದರ್ಶನಗಳನ್ನು ಕೊಡಬಹುದು. ಸಂಜಯ ಜೋಶಿ ನಗ್ನ ಸ್ತ್ರೀಯರೊಂದಿಗಿರುವ ಸೆಕ್ಸ್ ವಿಡಿಯೊ ಎಲ್ಲೆಡೆ ಹರಿದಾಡಿದಾಗ ಆತ ಆರೆಸ್ಸೆಸ್ ಬಿಟ್ಟು ಹೊರಬರಲೇಬೇಕಾಯಿತು. ಮೋದಿಯನ್ನು



ಟೀಕಿಸುವುದರೊಂದಿಗೆ ಅಡ್ವಾನಿಗೆ ದೂರು ಕೊಟ್ಟನೆಂಬ ಕಾರಣಕ್ಕೆ ಜಡಾಫಿಯನನ್ನು ಮಂತ್ರಿಮಂಡಲದಿಂದ ಕಿತ್ತೊಗೆಯಲಾಯಿತು. ತನ್ನ ಚುನಾವಣಾ ಕ್ಷೇತ್ರವನ್ನು ಬಿಟ್ಟುಕೊಡಲು ನಿರಾಕರಿಸಿದ ಹರೇನ್ ಪಾಂಡ್ಯ ನಿಗೂಢವಾಗಿ ಕೊಲೆಗೀಡಾದ. ರೈತರು ಗುಜರಾತ್ ಸರ್ಕಾರದ ರೈತವಿರೋಧಿ ನೀತಿಗಳನ್ನು ವಿರೋಧಿಸಿ ಬಂಡಾಯವೆದ್ದಾಗ ಅದರ ನೇತೃತ್ವ ವಹಿಸಿದ್ದ ಕಲ್ಸಾರಿಯನನ್ನು ಶಿಸ್ತು ಉಲ್ಲಂಘನೆಯ ನೆಪದಲ್ಲಿ ಪಕ್ಷದಿಂದ ಅಮಾನತುಗೊಳಿಸಲಾಯಿತು. ಆತನ ಮೇಲೆ ಅಪರಿಚಿತ ಗೂಂಡಾಗಳು ದಾಳಿ ಮಾಡಿದರು. ಗುಲ್‌ಬರ್ಗ್ ಸೊಸೈಟಿ ಹತ್ಯಾಕಾಂಡದಲ್ಲಿ ಭೀಕರ ಹಿಂಸೆಗೊಳಗಾಗಿ ಜೀವಂತ ಸುಡಲ್ಪಟ್ಟ ಮಾಜಿ ಸಂಸದ ಎಹಸಾನ್ ಜಾಫ್ರಿ ಮಾಡಿದ 'ತಪ್ಪು' ಏನೆಂದರೆ ರಾಜ್ಯ ಚುನಾವಣೆಗಳ ವೇಳೆ ಮುಸ್ಲಿಮರನ್ನು ಪ್ರಭಾವಿಸುವ ಮೂಲಕ ಮೋದಿಯ ಗೆಲುವಿನ ಅಂತರವನ್ನು ಕಡಿಮೆ ಮಾಡಿದ್ದು.


ಇದೀಗ ನೊಬೆಲ್ ಪ್ರಶಸ್ತಿ ವಿಜೇತ ಅಮಾರ್ತ್ಯ ಸೆನ್ ಸರದಿ. ಕಾರಣ ಇನ್ನೇನೂ ಅಲ್ಲ, 2014ರ ಚುನಾವಣೆಗಳ ಸಮಯದಲ್ಲಿ ಸೆನ್ ನೀಡಿದ್ದ ಹೇಳಿಕೆಗಳು. ಸೆನ್ "ನರೇಂದ್ರ ಮೋದಿ ಜಾತ್ಯತೀತ ವ್ಯಕ್ತಿಯಲ್ಲ; ಆತ ಅಲ್ಪಸಂಖ್ಯಾತರಲ್ಲಿ ಸುರಕ್ಷಿತತೆಯ ಭಾವನೆ ಮೂಡಿಸಲು ಸಾಕಷ್ಟು ಶ್ರಮಿಸಿಲ್ಲ; ಆತ ಭಾರತದ ಪ್ರಧಾನಿಯಾಗುವುದು ನನಗಿಷ್ಟವಿಲ್ಲ... 2002ರಂತಹ ಭಯಾನಕ ದಾಖಲೆ ಹೊಂದಿರುವ ವ್ಯಕ್ತಿಯೊಬ್ಬ ಪ್ರಧಾನಿಯಾಗಬಾರದು... ಆರೋಗ್ಯ ಶಿಕ್ಷಣ ಕ್ಷೇತ್ರಗಳಲ್ಲಿ ಮತ್ತು ಸಮಾನತೆ ತರುವ ನಿಟ್ಟಿನಲ್ಲಿ 'ಗುಜರಾತ್ ಮಾದರಿ' ಮಾಡಬೇಕಾದ್ದು ಸಾಕಷ್ಟಿದೆ...." ಎಂದು ಟೀಕಿಸಿದ್ದರು.

ನಲಂದ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಇದೇ ಜನವರಿ ತಿಂಗಳಲ್ಲಿ ಸಭೆ ಸೇರಿ ಸೆನ್‌ರ ಸೇವೆಯನ್ನು ಎರಡನೆ ಅವಧಿಗೆ ಮುಂದುವರಿಸಲು ಸರ್ವಾನುಮತದಿಂದ ತೀರ್ಮಾನಿಸಿತ್ತು, ಬಳಿಕ ನಿರ್ಣಯವನ್ನು ರಾಷ್ಟ್ರಪತಿಯವರಿಗೆ ಕಳುಹಿಸಿತ್ತು, ಆದರೆ ಇದಕ್ಕೆ ದೀರ್ಘ ಕಾಲ ಯಾವುದೇ ಪ್ರತಿಕ್ರಿಯೆ ನೀಡದ ಮೋದಿ ಸರ್ಕಾರ ಪರೋಕ್ಷವಾಗಿ ಅವಧಿ ವಿಸ್ತರಣೆಗೆ ನಿರಾಕರಿಸಿದೆ. ಸೆನ್ ತಾನು ವಿಪಿ ಬಿಡುತ್ತಿರುವೆನೆಂದ ಬೆನ್ನಲ್ಲೆ ಸುಬ್ರಮಣಿಯನ್ ಸ್ವಾಮಿಯನ್ನು ಮುಂದಿಟ್ಟುಕೊಂಡು ಪ್ರತೀಕಾರದ ಕಾರ್ಯ ಪ್ರಾರಂಭವಾಗಿರುವಂತೆ ಕಾಣುತ್ತದೆ. ಇತ್ತೀಚೆಗೆ ಪತ್ರಿಕಾಹೇಳಿಕೆಯೊಂದನ್ನು [illegible] ಸೆನ್ ನಲಂದ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ತಿಂಗಳಿಗೆ 50 ಲಕ್ಷ ಸಂಬಳ ಪಡೆಯುತ್ತಿದ್ದರು, ಅವರ ವಿಮಾನಯಾನಗಳ ವೆಚ್ಚವನ್ನೆಲ್ಲ ವಿಶ್ವವಿದ್ಯಾನಿಲಯ ಭರಿಸುತ್ತಿತ್ತು, ಸೆನ್ ಕಾಲದಲ್ಲಿ ಅಲ್ಲಿನ ಕಟ್ಟಡ ನಿರ್ಮಾಣಗಳಲ್ಲಿ ಗೋಲ್‌ಮಾಲ್ ನಡೆದಿದೆ, ಭ್ರಷ್ಟಾಚಾರ ಆಗಿದೆ, ಉಪಕುಲಪತಿಯವರ ನೇಮಕಾತಿಯಲ್ಲಿ ಅಕ್ರಮಗಳು ನಡೆದಿವೆ, ಸೆನ್ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಮ್‌ರಿಗೆ ಅಗೌರವ ತೋರಿಸಿದ್ದಾರೆ ಎಂದೆಲ್ಲ ಆಪಾದಿಸಿದನಲ್ಲದೆ ಸೆನ್ ವಿರುದ್ಧ ಕಾನೂನುಕ್ರಮ ಜರುಗಿಸಬೇಕೆಂದು ಆಗ್ರಹಿಸಿದ. ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿದ ನಲಂದ ವಿಶ್ವವಿದ್ಯಾನಿಲಯ, ಸ್ವಾಮಿ ಮಾಡಿರುವ ಆಪಾದನೆಗಳನ್ನು ಒಂದೊಂದಾಗಿ ಎತ್ತಿಕೊಂಡು ಒಂದಾದರೂ ಆರೋಪದಲ್ಲಿ ಹುರುಳಿಲ್ಲ; ಅವೆಲ್ಲವೂ ಶುದ್ಧ ಸುಳ್ಳಿನ ಕಂತೆಗಳು ಎಂದು ಪುರಾವೆ ಸಮೇತ ಉತ್ತರಿಸಿದೆ.

ನೊಬೆಲ್ ಪುರಸ್ಕೃತ ವಿಜೇತರಾದ ಅಮಾರ್ತ್ಯ ಸೆನ್... [illegible] ಥರದವರನ್ನು ಅವಮಾನಿಸುವ ಮೂಲಕ ದೇಶದ ಮಾನವನ್ನು ಬೀದಿಯಲ್ಲಿ ಹರಾಜುಹಾಕಿರುವ ಮೋದಿ ಸರ್ಕಾರಕ್ಕೆ ದೇಶವನ್ನಾಳುವ ಯೋಗ್ಯತೆ ಇದೆಯೇ ಎಂದು ಮತದಾರರು ಕೇಳಬೇಡವೇ?

●

ಮದರ್ ತೆರೆಸಾ ಮನುಷ್ಯ ಧರ್ಮದ ಪ್ರವಾದಿ ಆಗಿದ್ದಳು..



ಮದರ್ ತೆರೆಸಾಳನ್ನು ಏಕವಚನದಲ್ಲಿ ಸಂಬೋಧಿಸಲು ಬಯಸುತ್ತೇನೆ ನಾನು. ಅವಳು ಕೊಲ್ಕತ್ತಾದ ಸಾವಿರಾರು ದೀನದಲಿತರಿಗೆ ಪ್ರೀತಿಯ ಅಮ್ಮ ಆಗಿದ್ದವಳು... ನನಗೂ ಅಮ್ಮ. ಅವಳೇ ನನ್ನ ಧರ್ಮಗುರು. ಧರೆಗಿಳಿದು ಬಂದು ದೀನದಲಿತರ ಕಣ್ಣೀರು ಒರೆಸಿ, ಸಾಂತ್ವನ ನೀಡಿದ ನಿಜವಾದ ಪ್ರವಾದಿ. ವಿವಿಧ ಮತಗಳ ಸಾವಿರಾರು ಪೌರಾಣಿಕ ದೇವರುಗಳಂತೆ ಕಾಲ್ಪನಿಕ ದೇವರು ಆಗಿರಲಿಲ್ಲ ಅವಳು; ರಕ್ತಮಾಂಸ, ಪ್ರೀತಿವಿಶ್ವಾಸಗಳಿಂದ ಕೂಡಿದ್ದ ಅಪ್ಪಟ ಮನುಷ್ಯಪ್ರೇಮಿ ಅವಳಾಗಿದ್ದಳು. 1997ರಲ್ಲಿ ಅವಳು ಕೊನೆಯುಸಿರೆಳೆದಾಗ ನಾನು ಟಿ.ವಿಯಲ್ಲಿ ನೋಡಿದ್ದೇನೆ. ಕೊಲ್ಕತ್ತಾದ ಸ್ಲಮ್ ಏರಿಯಾಗಳ ಕಪ್ಪು-ಕಪ್ಪು ಜನರು; ಹಸಿದ ಜನರು, 'ದುರ್ಬಲ ಜನರು 'ಅಮ್ಮಾ' ಎಂದು ಕರೆಯುತ್ತಾ, ಅವಳನ್ನು ನೆನೆದು ಗೋಳೋ ಎಂದು ಅತ್ತಿದ್ದನ್ನು.. ಅದು ಅವರ ನಿಜವಾದ ಪ್ರೀತಿ, ವಾತ್ಸಲ್ಯ... ಆರೆಸ್ಸೆಸ್‌ನ ವರಿಷ್ಠ ಮೋಹನ ಭಾಗವತರಿಗೆ ಅದೆಲ್ಲಾ ಎಲ್ಲಿ ಅರ್ಥವಾಗಬೇಕು! ನೋಡಲು ತೆರೆಸಾ ಪುಟ್ಟ ಗುಬ್ಬಚ್ಚಿಯ ಹಾಗೆ ಇದ್ದಳು.. ಭಾರತೀಯ ಮಹಿಳೆಯಂತೆ ನೀಲಿ ಅಂಚಿನ ಬಿಳಿಸೀರೆ ಉಡುತ್ತಿದ್ದಳು.. ಭಾರತೀಯರಂತೆಯೇ ನೆಲದ ಮೇಲೆ ಕುಳಿತು, ಬರೀ ಕೈಯಲ್ಲಿ ಊಟ ಮಾಡುತ್ತಿದ್ದಳು. ಉಳಿದ ಮಹಾನುಭಾವರುಗಳು ಅಸಹ್ಯಪಡುವ ಕುಷ್ಠ ರೋಗಿಗಳ ಕೀವು ತುಂಬಿದ ಅಂಗಾಂಗಗಳ ಬಗ್ಗೆ ಸ್ವಲ್ಪವೂ ಅಸಹ್ಯ ಪಡದೆ, ಅವರ ಸೇವೆ ಮಾಡುತ್ತಿದ್ದಳು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ-ಯದಾ ಯದಾದಿ ಧರ್ಮಸ್ಯ-ಎಂದು ಬೂಸಿ ಬಿಟ್ಟಿದ್ದು-ಮದರ್ ತೆರೆಸಾಳ ಅವತಾರದಿಂದಾಗಿ ನಿಜವಾಗಿತ್ತು. ದೀನದಲಿತರು "ಅಯ್ಯೋ ಅಮ್ಮಾ" ಎಂದು ನೋವು, ಅವಮಾನಗಳಿಂದ, ಆರ್ತನಾದ ಮಾಡಿದಾಗಲೆಲ್ಲಾ ಮದರ್ ತೆರೆಸಾಳ 'ಆರ್ಡರ್ ಆಫ್ ಚಾರಿಟಿ'ಯ ಸನ್ಯಾಸಿನಿಯರು ಅವರ ಆರ್ತನಾದಕ್ಕೆ ಪ್ರತಿಸ್ಪಂದಿಸುತ್ತಿದ್ದರು. ಆ ಕ್ರಿಶ್ಚಿಯನ್ ನರ್ಸ್‌ಗಳು ಬೆಳಗ್ಗೆ ಬೇಗನೇ 4.30ಕ್ಕೆ ಎದ್ದು ರೋಗಿಗಳ ರಾಶಿರಾಶಿ ಬಟ್ಟೆಗಳನ್ನು ಒಗೆದು ಸ್ವಚ್ಛಗೊಳಿಸುತ್ತಿದ್ದರು. "ನಮಸ್ತೇ ಸದಾ ವತ್ಸಲೇ" ಎಂದು ಪೊಳ್ಳು ದೇಶಭಕ್ತಿಯಿಂದ ಲಾಠಿ ಬೀಸುತ್ತಿರಲಿಲ್ಲ, ಭಾರತಾಂಬೆ ಅವರಿಗೆ ಬಣ್ಣದ ಸೀರೆ ಉಟ್ಟ ಕಾಲ್ಪನಿಕ ಚಿತ್ರವಾಗಿರಲಿಲ್ಲ, ಕೊಲ್ಕತ್ತಾದ ಕೊಳಚೆ ಪ್ರದೇಶದ ಸಾವಿರ ಸಾವಿರ ಸಂಖ್ಯೆಯ ಬಡಜನರು ಅವರಿಗೆ ಭಾರತ ಮಾತೆಯ ಸ್ವರೂಪ ಆಗಿದ್ದರು. ಈ ವಾಸ್ತವ ಮೋಹನ ಭಾಗವತರಿಗೆ ಅರ್ಥವಾಗಬೇಕು.

1910ರಲ್ಲಿ ದೂರದ ಯುಗೋಸ್ಲಾವಿಯಾದಲ್ಲಿ ಜನ್ಮ ತಳೆದ ತೆರೆಸಾ 12ನೇ ವಯಸ್ಸಿನ ಪುಟ್ಟ ಹುಡುಗಿಯಾಗಿದ್ದಾಗಲೇ ದೇವರ ಕರೆಯನ್ನು ಆಲಿಸಿದಳಂತೆ. ಮದುವೆಯಾಗಿ, ಗಂಡನೊಡನೆ ಸುಖ ಅನುಭವಿಸಿ ಮಕ್ಕಳನ್ನು ಪಡೆದು ನೆಮ್ಮದಿಯಾಗಿ ಇರುವ ಬದಲು ಕ್ರಿಶ್ಚಿಯನ್ ಸನ್ಯಾಸಿನಿ ಆಗ ಬಯಸಿದಳು. ಬುದ್ಧನಿಗೆ ಜ್ಞಾನೋದಯ ಆದ ಹಾಗೆ 1946ರ ಸೆಪ್ಟೆಂಬರ್ 10ರಂದು ಅವಳಿಗೆ ದೇವರದನಿ ಕೇಳಿಸಿತು. ಆಗ ಅವಳು ಭಾರತದ ಡಾರ್ಜಿಲಿಂಗ್‌ಗೆ ಪ್ರಯಾಣಿಸುತ್ತಿದ್ದಳು. ಆ ದಿನವನ್ನು ಅವಳು "ತನಗೆ ದೇವರ ಪ್ರೇರಣೆ ಆದ ದಿನ", "ಅಂತಿಮ ನಿರ್ಧಾರ ತೆಗೆದುಕೊಂಡ ದಿನ" ಎಂದು ಕರೆದಿದ್ದಾಳೆ. ದೇವರ ಮಗ ಏಸುಕ್ರಿಸ್ತನ ಮಹಾಭಕ್ತೆಯಾಗಿದ್ದ ಅವಳಿಗೆ ದೇವರು ಹೇಳಿದನಂತೆ- "ನಿನ್ನಲ್ಲಿರುವ ಎಲ್ಲವನ್ನು ತ್ಯಾಗ ಮಾಡು. ದೇವರನ್ನು ಹಿಂಬಾಲಿಸು. ಸ್ಲಮ್‌ಗಳಿಗೆ ಹೋಗು.. ಅಲ್ಲಿ ವಾಸಿಸುತ್ತಿರುವ ಅತ್ಯಂತ ಬಡವರ ನಡುವೆ ದೇವರ ಸೇವೆ ಮಾಡು..." ಎಂತಹ ಅದ್ಭುತ ದೇವವಾಣಿ ಅದು. ನಮ್ಮ ಯಾವ ಕಾವೀಧಾರೀ ಜಗದ್ಗುರುಗಳಿಗೆ ಇಂತಹ ದೇವವಾಣಿ ಕೇಳಿದೆ? ರಾಘವೇಶ್ವರ ಸ್ವಾಮಿಯ ರಾಮಕಥಾದಲ್ಲಿ ಇಂತಹ ದೇವವಾಣಿ ಇದೆಯೇ?

ಆ ದಿನವೇ ಅವಳು ಭಾರತದ ಕೊಲ್ಕತ್ತಾದ ಕೊಳೆಗೇರಿಗಳಿಗೆ ಹೋಗಿ, ದೇವರ ಸೇವೆ ಮಾಡುವ ಗಟ್ಟಿ ನಿರ್ಧಾರ ಮಾಡುತ್ತಾಳೆ. ದೇವರು, ಧರ್ಮಗಳ ಹೆಸರಿನಲ್ಲಿ ಐಶಾರಾಮೀ ಜೀವನ ನಡೆಸುವ ಬದಲು-ಅವಳು ವೆಟಿಕನ್‌ನ ಕೆಥೋಲಿಕ್ ಕ್ರಿಶ್ಚಿಯನ್ ಧರ್ಮಗುರು ಪೋಪ್‌ರ ಹತ್ತಿರ ತನಗೆ ಕೊಲ್ಕತ್ತಾದ ಕೊಳಗೇರಿಗೆ ಹೋಗಲು ಅನುಮತಿ ಬೇಡುತ್ತಾಳೆ. ಅವಳಿಗೆ ಪೋಪ್ ಅನುಮತಿ ನೀಡುತ್ತಾರೆ. ಸರಿಯಾಗಿ ಗಮನಿಸಿ.. ಆರೆಸ್ಸೆಸ್ ಮುಖಂಡ ಮೋಹನ ಭಾಗವತರು ಹೇಳುವಂತೆ ಭಾರತೀಯರನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರಿಸಲು ಅಲ್ಲ; ಕೊಲ್ಕತ್ತಾದ ಕೊಳೆಗೇರಿಯ ದೀನರಲ್ಲಿ ದೀನರ ಸೇವೆ ಮಾಡಲು...

1946ರಲ್ಲಿ ಪೋಪ್ ಅವಳಿಗೆ ಅನುಮತಿ ನೀಡುತ್ತಾರೆ. ಅವಳು ಕೊಲ್ಕತ್ತಾಗೆ ಹೋಗಿ ಕ್ರಿಶ್ಚಿಯನ್ ಚರ್ಚ್ ಪ್ರಾರಂಭಿಸಲಿಲ್ಲ, ಅದರ ಬದಲು ನರ್ಸಿಂಗ್‌ನಲ್ಲಿ 3 ತಿಂಗಳ ತೀವ್ರ ತರಬೇತಿ ಪಡೆದುಕೊಂಡು, 1948ರಲ್ಲಿ ಮೊದಲ ಸ್ಲಮ್ ಶಾಲೆ ತೆರೆಯುತ್ತಾಳೆ. ಕೆಲವೇ ತಿಂಗಳುಗಳಲ್ಲಿ ಅವಳ ವಿದ್ಯಾರ್ಥಿನಿ ಸುಭಾಶಿನಿ ದಾಸ್ ಅವಳ ಜತೆ ಸೇರಿ ಹೊಸದೊಂದು ಸಂಸ್ಥೆಯನ್ನೇ ಪ್ರಾರಂಭಿಸುತ್ತಾರೆ. ಆ ಸಂಸ್ಥೆಯ ಹೆಸರು "The Missionaries of Charity" (ದಿ ಮಿಶನರೀಸ್ ಆಫ್ ಚಾರಿಟಿ) ಅದರ ಅರ್ಥ ಮಮತೆ, ಅನುಕಂಪ ಔದಾರ್ಯಗಳುಳ್ಳ ಧರ್ಮಪ್ರಚಾರಕರು. ದಯವಿಟ್ಟು ಗಮನಿಸಿ-ಅದು ಕ್ರಿಶ್ಚಿಯನ್ ಮತ ಪ್ರಚಾರಕ್ಕಾಗಿ ಸ್ಥಾಪನೆಯಾದ ಸಂಸ್ಥೆ ಅಲ್ಲ, ದೀನದಲಿತರ, ಬಡವರಲ್ಲಿ ಬಡವರ ಅವಮಾನಿತರ ಸೇವೆಗಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆ. ಮೋಹನ ಭಾಗವತರ ಯಾವ ಮಠಗಳಲ್ಲಿ ಈ ದೀನ ದಲಿತರ ಸೇವೆ ನಡೆಯುತ್ತಿದೆ ಹೇಳಿ!

ಹಾಗೆ ದೀನದಲಿತರ ಸೇವೆಗಾಗಿಯೇ ಸ್ಥಾಪಿಸಲ್ಪಟ್ಟ ಸಂಸ್ಥೆ "ದಿ ಮಿಶನರೀಸ್ ಆಫ್ ಚಾರಿಟಿ"ಗೆ ಸೇರ ಬಯಸುವವರು ಈ ಕೆಳಗಿನ ನಾಲ್ಕು ಪ್ರತಿಜ್ಞೆಗಳನ್ನು ಸ್ವೀಕರಿಸಬೇಕಾಗಿತ್ತು.

1) ಬಡತನದ ವ್ರತವನ್ನು ಚಾಚೂತಪ್ಪದೆ ಪಾಲಿಸಬೇಕು. ಬಡವರ ಕಷ್ಟ ಅರ್ಥವಾಗಿ, ಬಡವರ ಸೇವೆ ಮಾಡಲು, ಬಡವರನ್ನು ಪ್ರೀತಿಸಲು ಈ ಬಡತನದ ವ್ರತ ಅತ್ಯಗತ್ಯ.

2) ಮದುವೆ ಆಗದೆ ಒಂಟಿಯಾಗಿಯೇ ಬದುಕಬೇಕು. ಆಗ ಮಾತ್ರ ಅಂತಹ ನನ್‌ಗಳು ಬಡವರ ಸೇವಾಕಾರ್ಯಕ್ಕೆ ತಮ್ಮನ್ನು ತಾವು ಪೂರ್ತಿಯಾಗಿ ಸಮರ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ದೇವರ ಸೇವೆ ಮಾಡಲು ಸಾಧ್ಯವಾಗುತ್ತದೆ.

3) ವಿಧೇಯತೆ. ವಿಧೇಯರಾಗಿರುವ ಸನ್ಯಾಸಿನಿಯರು ಮಾತ್ರ ದೇವರ ಇಚ್ಛೆಯೇ ಅವರ ಇಚ್ಛೆಯಾಗಿ ಬಡವರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

4) ಕೊನೆಯದಾಗಿ ಮತ್ತು ಮುಖ್ಯವಾಗಿ - ದಿ ಮಿಶನರಿಸ್ ಆಫ್ ಚಾರಿಟಿ ಸಂಸ್ಥೆಗೆ ಸೇರಬಯಸುವವರು ಸಂಪೂರ್ಣ ಹೃದಯವಂತಿಕೆಯಿಂದ ಬಡವರ ಸೇವೆ ಮಾಡಬೇಕು. ಅವರು ಶ್ರೀಮಂತರಿಗಾಗಿ ಕೆಲಸ ಮಾಡುವುದಿಲ್ಲ, ಬಡವರ ಉದ್ಧಾರಕ್ಕಾಗಿ ಸೇವೆ ಮಾಡಬೇಕು. ಆದ್ದರಿಂದ ಅವರು ಬಡವರಿಂದ ಹಣ ಸ್ವೀಕರಿಸುವುದಿಲ್ಲ, ಅವರದ್ದು ಸಂಪೂರ್ಣವಾಗಿ ದಾನಧರ್ಮದ ಬಡವರ ಸೇವೆ. ಒಂದು ಪೈಸೆಯನ್ನು ಅವರು ಬಡವರಿಂದ ಸ್ವೀಕರಿಸಬಾರದು.

ಹೀಗೆ ಬಡತನ ಮತ್ತು ನಿಸ್ವಾರ್ಥ ಸೇವೆಯ ದೀಕ್ಷೆ ಪಡೆದ ಮದರ್ ತೆರೆಸಾ ಯಾವತ್ತೂ ನಮ್ಮ ಮೋಹನ ಭಾಗವತರ ಶಿಷ್ಯರಂತೆ ಆಷಾಢಭೂತಿ ಆಗಿರಲಿಲ್ಲ, ನಮ್ಮ ಜಗದ್ಗುರುಗಳಂತೆ ಐಶಾರಾಮೀ ಜೀವನ ನಡೆಸಲೇ ಇಲ್ಲ, ಒಮ್ಮೆ ವ್ಯಾಟಿಕನ್‌ನ ಪೋಪ್ ಭಾರತಕ್ಕೆ ಬಂದಿದ್ದರು. ತಾನು ಓಡಾಟಕ್ಕೆ ಉಪಯೋಗಿಸಿದ್ದ ಬಿಳಿಯ ಚಂದದ ಕಾರನ್ನು ಮದರ್ ತೆರೆಸಾಗೆ ಕೊಟ್ಟರು. ಆ ಬಿಳೀ ಕಾರಿನಲ್ಲಿ ಒಂದು ಸಲವೂ ಕುಳಿತು ಓಡಾಟ ನಡೆಸದ ತೆರೆಸಾ ಅದನ್ನು ಕೂಡಲೇ ಮಾರಾಟ ಮಾಡಿ, ಬಂದ 37,000 ಪೌಂಡ್ ಹಣವನ್ನು ಕುಷ್ಠ ರೋಗಿಗಳ ಚಿಕಿತ್ಸೆಗಾಗಿ ತಾನು ನಡೆಸುತ್ತಿದ್ದ ಸಂಸ್ಥೆಗೆ ನೀಡಿದಳು. ಅಂತಹ ನಿಷ್ಠುರ ಬಡತನದ ದೀಕ್ಷೆಯನ್ನು ತೆರೆಸಾ ಮತ್ತು ಅವಳ ಸಹವರ್ತಿಗಳು ಪಾಲಿಸುತ್ತಿದ್ದರು. ಈ ದೀಕ್ಷೆ ಪೇಜಾವರರು ಹೇಳುವ ವೈಷ್ಣವ ದೀಕ್ಷೆಯಂತೆ ಅಲ್ಲ, ಬಡವರಾಗಿದ್ದುಕೊಂಡೇ ಬಡವರ ಸೇವೆ ಮಾಡುವ ಮಾನವತೆಯ ದೀಕ್ಷೆ. ಈ ದೀಕ್ಷೆಯ ಮಹತ್ವ ಮೋಹನ ಭಾಗವತರ ಅನುಯಾಯಿಗಳಿಗೆ ಹೇಗೆ ಅರ್ಥವಾಗಬೇಕು?!!

ನಮ್ಮ ಮಹಾ ತುಂಟ ಮತ್ತು ಹೃದಯವಂತಿಕೆಯ ಪತ್ರಕರ್ತ ಲೇಖಕ ಕುಶವಂತ್ ಸಿಂಗ್ ಒಮ್ಮೆ ಮದರ್ ತೆರೆಸಾಳ ಹತ್ತಿರ ಹೇಳುತ್ತಾರೆ: "ತೆರೆಸಾ ನಿನ್ನಲ್ಲಿ ಸಾಯುತ್ತಿರುವವರ ಮತ್ತು ನೋಯುತ್ತಿರುವವರ ಬಗ್ಗೆ ಆಸಕ್ತಿ ಯಾಕೆ, ಯಾವಾಗ ಮೂಡಿತು?"

ಅವರ ಪ್ರಶ್ನೆಗೆ ತೆರೆಸಾ ಹೀಗೆ ಉತ್ತರಿಸಿದಳು: "ಅದು ನನ್ನ ಒಳಗಿನ ದನಿ; ದೇವರ ಪ್ರೇರಣೆ, ಸಾಮಾನ್ಯವಾಗಿ ಯಾರಿಗೂ ಸಾಯುತ್ತಿರುವ ವೃದ್ಧರು, ನೋವಿನಿಂದ ಒದ್ದಾಡುತ್ತಿರುವ ರೋಗಿಗಳು, ಅವಮಾನದಿಂದ ಬೇಯುತ್ತಿರುವ ಅಂಗವಿಕಲರು ಇಷ್ಟವಾಗುವುದಿಲ್ಲ, ಹಾಗೆ ಯಾರಿಗೂ ಬೇಡವಾದವರು, ನನಗೆ ಬೇಕು. ಯಾಕೆಂದರೆ ಯಾರೂ ಅವರನ್ನು ಪ್ರೀತಿಸುವುದಿಲ್ಲ; ಅವರ ಬಗ್ಗೆ ಕಾಳಜಿ ವಹಿಸಿಕೊಳ್ಳುವುದಿಲ್ಲ."

ತಮಾಷೆಯೆಂದರೆ ದೈಹಿಕವಾಗಿ ಒಂದು ಮಗುವನ್ನೂ ಹೆರದಿದ್ದ ತೆರೆಸಾ 'ಮದರ್' ತೆರೆಸಾ ಎಂದು ಕರೆಯಲ್ಪಟ್ಟು ಕೊಲ್ಕತ್ತಾದ ಕೊಳಚೆಗೇರಿಗಳ ಹಲವು ಸೂಳೆ ಮಕ್ಕಳ ಮತ್ತು ಬೇವಾರ್ಸಿ ಮಕ್ಕಳ ತಾಯಿಯಾಗಿದ್ದಳು. ಕೊಳಕು ದೇಹದ ಅವರನ್ನು ಮಮತೆಯಿಂದ ಎತ್ತಿಕೊಂಡು ಅವರ ಕಣ್ಣೀರು ಒರೆಸುತ್ತಿದ್ದಳು.. ಅವರ ಸುಖ-ದುಃಖಗಳಿಗೆ ಸ್ಪಂದಿಸುವ ಅಮ್ಮ ಆಗಿದ್ದಳು.. ಅದರಿಂದಾಗಿಯೇ ಅವಳ ಆ ನೂರಾರು ಮಕ್ಕಳು, 1997ರಲ್ಲಿ ಅವಳು ತೀರಿ ಕೊಂಡಾಗ ಅತ್ಯಂತ ಸಹಜವಾಗಿ ಅಮ್ಮ ಅಮ್ಮ ಎಂದು ಗೋಳೋ ಎಂದು ಅತ್ತಿದ್ದು, ಆ ಯಾವ ಮಕ್ಕಳನ್ನೂ ಅವಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಿರಲಿಲ್ಲ, ಈ ಕಟು ಸತ್ಯ ಮೋಹನ ಭಾಗವತರಿಗೆ ಮತ್ತು ಅವರ ಶಿಷ್ಯ ಕೋಟಿಗೆ ಅರ್ಥವಾಗಬೇಕು.

ಒಮ್ಮೆ ಕೊಲ್ಕತ್ತಾದ ಕಾಳೀ ದೇವಸ್ಥಾನದ ಹತ್ತಿರವಿದ್ದ ಖಾಲೀ ಮನೆಯಲ್ಲಿ ಅವಳ 'ಸೇವಾಶ್ರಮ' ತೆರೆಯಲಾಯಿತು. ದೇವಸ್ಥಾನಕ್ಕೆ ಬರುವ ಭಕ್ತರಿಗೆ ಆ ಸೇವಾಶ್ರಮದ ರೋಗಿಗಳು ಅಸಹ್ಯವಾಗಿ ಕಂಡರು. ಅವರು ಪೋಲೀಸ್ ವರಿಷ್ಠರಿಗೆ ದೂರು ಸಲ್ಲಿಸಿ, ಆ ಸೇವಾಶ್ರಮವನ್ನು ಸ್ಥಳಾಂತರಿಸಬೇಕೆಂದು ಒತ್ತಾಯಿಸಿದರು. ಆ ಪೋಲೀಸ್ ಅಧಿಕಾರಿ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿದಾಗ ತೆರೆಸಾಳ ಸೇವೆ ನೋಡಿ, ಹೃದಯ ತುಂಬಿ ಸ್ಥಳಾಂತರಿಸಬೇಕೆನ್ನುವ ಬೇಡಿಕೆಯನ್ನು ತಿರಸ್ಕರಿಸಿದರು. ಮುಂದೆ ಕೆಲವೇ ದಿನಗಳಲ್ಲಿ ಆ ದೇವಸ್ಥಾನದ ಅರ್ಚಕನಿಗೇ ಕಾಲರಾ ಆಗಿ ವಾಂತಿ, ಭೇದಿಯ ವಾಸನೆಯಲ್ಲಿ ಬಿದ್ದ, ಕಾಳೀ ಭಕ್ತರು ಆ ವಾಸನೆಗೆ ಅವನ ಹತ್ತಿರವೇ ಹೋಗದೇ ಉಪೇಕ್ಷಿಸಿದರು. ಆಗ ಆ ಬ್ರಾಹ್ಮಣ ಅರ್ಚಕನನ್ನು ತಮ್ಮ ಮಮತೆಯ ಮಡಿಲಿಗೆ ಎತ್ತಿಕೊಂಡು ಸೇವೆ ಮಾಡಿದವಳು ಈ ನಮ್ಮ ಮಹಾತಾಯಿ ತೆರೆಸಾ. ಆ ನಂತರ ಆ ಅರ್ಚಕ ತೆರೆಸಾಳ ಮಹಾಭಕ್ತನಾದ. ಅವನು ಕ್ರಿಶ್ಚಿಯನ್ ಆಗಿ ಮತಾಂತರಗೊಳ್ಳಲಿಲ್ಲ, ಆದರೆ ಅಮ್ಮ ತೆರೆಸಾಳ 'ಮಗು' ಆದ.

ತೆರೆಸಾ ಮತಾಂತರ ಉದ್ದೇಶದಿಂದ ಭಾರತಕ್ಕೆ ಬಂದು ಸೇವೆಯ ನಾಟಕ ಮಾಡಿದಳು ಎಂದು ಬೊಬ್ಬಿಡುವ ಮೋಹನ ಭಾಗವತ ಮತ್ತು ಅವರ ಅನುಯಾಯಿಗಳಿಗೆ ಈ ಸತ್ಯ ಅರ್ಥವಾಗಬೇಕು.

ಅಧಿಕೃತ ಅಂಕಿಅಂಶಗಳ ಪ್ರಕಾರ 1948ರಲ್ಲಿ ತೆರೆಸಾ ಕೊಲ್ಕತ್ತಾದಲ್ಲಿ ಮೊದಲ ಸ್ಲಮ್ ಶಾಲೆ ಆರಂಭಿಸಿದಳು. ಈಗ ಅಂತಹ 81 ಶಾಲೆಗಳಲ್ಲಿ ಎಲ್ಲ ಜಾತಿ, ಮತಗಳ ಬಡ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

ವಿವಾಹಬಾಹಿರ ಸಂಬಂಧದಿಂದ ಹುಟ್ಟುವ ಮಕ್ಕಳಿಗಾಗಿ ತೆರೆಸಾ ಮನೆಗಳನ್ನು ಪ್ರಾರಂಭಿಸಿದಳು. ದೇಶದ ಯಾವ ಭಾಗದಲ್ಲೇ ಆಗಲಿ, ಅಂತಹ ಗತಿ ಗೋತ್ರವಿಲ್ಲದ ಅನಾಥ ಮಕ್ಕಳು ಕಂಡುಬಂದರೆ ಅವರನ್ನು ತೆರೆಸಾಳ ಅನುಯಾಯಿಗಳು ಅಂತಹ ಮನೆಗಳಿಗೆ ತಂದು ಸೇರಿಸುತ್ತಿದ್ದಳು. ಕಸದ ತೊಟ್ಟಿಗಳಲ್ಲಿ, ಚರಂಡಿಗಳಲ್ಲಿ ಎಸೆಯಲ್ಪಟ್ಟ ಅಸಹಾಯಕ ಮಕ್ಕಳಿಗೆ ತೆರೆಸಾಳ 'ಮನೆ'ಗಳು ಆಶ್ರಯ ನೀಡಿವೆ. ಈಗ ಅಂತಹ 28 ಮನೆಗಳು ಕಾರ್ಯಪ್ರವೃತ್ತವಾಗಿವೆ.

ಕುಷ್ಠ ರೋಗಿಗಳ ಚಿಕಿತ್ಸೆಗಾಗಿ ತೆರೆಸಾ ಮೊದಲಿಗೆ 5 ಜನ ರೋಗಿಗಳಿಗಾಗಿ ಒಬ್ಬ ವೈದ್ಯನನ್ನು ನೇಮಿಸಿಕೊಂಡು ಆಸ್ಪತ್ರೆ ಪ್ರಾರಂಭಿಸಿದಳು. ಈಗ ಅಂತಹ 70 ಕುಷ್ಠ ರೋಗ ಚಿಕಿತ್ಸಾಲಯಗಳಿವೆ. ಕುಷ್ಠ ರೋಗ ಗುಣವಾಗುವುದಿಲ್ಲ ಎಂದು ತಿಳಿದರೆ ಅಂತಹ ರೋಗಿಗಳು ಸಾಯುವವರೆಗೆ ತಮ್ಮ ಸಂಸಾರದೊಂದಿಗೆ ಇರುವ ವ್ಯವಸ್ಥೆ ಕೂಡಾ ಅಂತಹ ಆಸ್ಪತ್ರೆಗಳಲ್ಲಿದೆ.

1971ರಲ್ಲಿ ಪಾಕ್ ದೇಶದ ಸೈನಿಕರು ಬಾಂಗ್ಲಾದೇಶವನ್ನು ಆಕ್ರಮಿಸಿ, ಅಲ್ಲಿರುವ ಬಡ ಬಾಂಗ್ಲಾದೇಶೀ ಹೆಂಗಸರನ್ನು ಅತ್ಯಾಚಾರ ಮಾಡಿ, ಅವರ ಬದುಕು ಹಾಳು ಮಾಡಿದ್ದರು. ಅಂತಹ ಅತ್ಯಾಚಾರಕ್ಕೊಳಗಾದ ಹೆಂಗಸರಿಗಾಗಿ ತೆರೆಸಾ ಮನೆಯೊಂದನ್ನು ತೆರೆದಿದ್ದಳು.


ಈಗ ತೆರೆಸಾ ಪ್ರಾರಂಭಿಸಿದ ಆರ್ಡರ್ ಆಫ್ ಚಾರಿಟಿಯ ಶಾಖೆಗಳು ಭಾರತದ 61 ಕೇಂದ್ರಗಳಲ್ಲಿ ಮತ್ತು 28 ಬೇರೆ ಬೇರೆ ದೇಶಗಳಲ್ಲಿ ಸೇವಾ ನಿರತವಾಗಿವೆ. ಒಟ್ಟು 1000 ಕ್ರಿಶ್ಚಿಯನ್ ಸನ್ಯಾಸಿನಿಯರು ಮತ್ತು 200 ಸನ್ಯಾಸಿಗಳು ಈ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶೇಷವೆಂದರೆ ಭಾರತದ ಹಲವು ಕೇಂದ್ರಗಳಲ್ಲಿ ಉನ್ನತ ಶಿಕ್ಷಣ ಪಡೆದ, ಮೇಲುಜಾತಿಯ ಹಿಂದೂ ಮತಸ್ಥರೇ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಕೇಂದ್ರಗಳಿಂದ ಸಹಾಯ ಪಡೆಯುತ್ತಿರುವವರು ಕೇವಲ ಕ್ರಿಶ್ಚಿಯನ್ ಮತಸ್ಥರಲ್ಲ.. ಎಲ್ಲ ಮತ, ಧರ್ಮ, ಜಾತಿಗಳ ಬಡವರು...

ಮೋಹನ ಭಾಗವತರ 'ಸನಾತನ' ಧರ್ಮದ ಅನುಯಾಯಿಗಳಿಗೆ ಬೇರೆ ಮತಗಳ ಅನುಯಾಯಿಗಳು ಮನುಷ್ಯರಂತೆಯೇ ಕಾಣುವುದಿಲ್ಲ, ಬೇರೆ ಮತಸ್ಥರನ್ನು ಬಿಡಿ-ಅವರದೇ ಹಿಂದೂ ಧರ್ಮದ ದೀನ, ದಲಿತರ ಬಗ್ಗೆ ಅವರಲ್ಲಿರುವ ಕಾಳಜಿ ಪ್ರಶ್ನಾರ್ಹ. ಅವರ 'ಕರ್ಮ ಸಿದ್ಧಾಂತ'ವೇ ಹೇಳುತ್ತದೆ-ಬಡವರು ಬಡವರಾಗಿರುವುದು ಅವರ ಪ್ರಾರಬ್ಧ ಕರ್ಮದಿಂದಾಗಿ.. ಅದೇ ರೀತಿ ದೀನ ದಲಿತರ ನೋವು, ಅವಮಾನಗಳು ಕೂಡಾ.. ಅಂತಹ ಅಮಾನುಷ, ಹೃದಯ ಹೀನ ಧರ್ಮ ಅದು.

ಹಾಗಿರುವಾಗ ದೀನದಲಿತರ ಸೇವೆಯಲ್ಲೇ ದೇವರನ್ನು ಕಾಣುವ ಮದರ್ ತೆರೆಸಾಳ 'ಧರ್ಮ' ಅದೆಷ್ಟು ಶ್ರೇಷ್ಠ! ಅಂತಹ ಶ್ರೇಷ್ಠ ಮಾನವಧರ್ಮಕ್ಕೆ ಮತಾಂತರ ಮಾಡಿದರೂ ತಪ್ಪೇನು?

ಸತ್ತ ಮೇಲೆ ಸಿಗಬಹುದಾದ ಮೋಕ್ಷಕ್ಕಿಂತ, ಬದುಕಿರುವಾಗಲೇ ಅವಮಾನದಿಂದ, ನೋವಿನಿಂದ, ಹಸಿವಿನಿಂದ, ಬಡತನದಿಂದ, ಶೋಷಣೆಯಿಂದ ಬಿಡುಗಡೆ ನೀಡುವ ಧರ್ಮವೇ ಮನುಷ್ಯ ಧರ್ಮ. ಅದೇ ಶ್ರೇಷ್ಠವಾದ ಧರ್ಮ.. ಮದರ್ ತೆರೆಸಾ ಅಂತಹ ಮನುಷ್ಯ ಧರ್ಮದ ಪ್ರವಾದಿ ಆಗಿದ್ದಳು...

● ಡಾ. ಹಯವದನ ಮೂಡುಸಗ್ರಿ, ಕುಂದಾಪುರ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಜನಿವಾರದ ಉರುಳಿಗೆ ಬಲಿಯಾದ ವಿಠಲ ಮತ್ತು ರುಕ್ಮಿಣಿ

ಧರ್ಮ ದಾರಿಯೇ ಹೊರತು ಗುರಿಯಲ್ಲ ಎಂಬುದು ಧರ್ಮಾಂಧರಿಗೆ ತಿಳಿಯುವುದೇ ಇಲ್ಲ. ಗುರಿಯನ್ನು ಬಿಟ್ಟು ದಾರಿಗಾಗಿಯೇ ಹೊಡೆದಾಡಿಕೊಂಡಿರುವ ಅವರದ್ದು ಕಠೋರ ಕಟ್ಟಳೆಯ ಮನಸ್ಥಿತಿ. ನಿಜ ಹೇಳಬೇಕೆಂದರೆ ಅವರ ಹೋರಾಟಕ್ಕೆ ಕಾರಣ ಧರ್ಮವೆಂಬುದು ಅಲ್ಲವೇ ಅಲ್ಲ. ಅದೊಂದು ಬ್ಯಾನರ್ ಅಷ್ಟೇ. ಕೋಮುವಾದಿಗಳಿಗೆ ಯಾವುದೇ ಧರ್ಮಗಳಿಲ್ಲ. ಇಂತಹ ಮನಸ್ಥಿತಿಗಳೊಡನೆ ಹೋರಾಟವನ್ನು ಮಾಡಿಕೊಂಡು ಬಂದಿರುವ ಮಾನವತಾವಾದಿಗಳು, ವಿಚಾರವಂತರು, ಮುಕ್ತಚಿಂತಕರು ನಾನಾರೀತಿಯಲ್ಲಿ ತೊಂದರೆಗಳಿಗೆ ಒಳಗಾಗಿದ್ದಾರೆ ಮತ್ತು ಜೀವವನ್ನೂ ತೆತ್ತಿದ್ದಾರೆ. ಸಾವಿರಾರು ವರ್ಷಗಳಿಂದ ಈ ಹೋರಾಟಗಳು ನಡೆಯುತ್ತಿದ್ದರೂ ಇತ್ತೀಚೆಗೆ ನಡೆದಿರುವಂತಹ ಕೆಲವು ವಿದ್ಯಮಾನಗಳನ್ನು ಗಮನಿಸೋಣ.

ದ ವೈರಸ್ ಆಫ್ ಫೇತ್

ಅವಿಜಿತ್ ರಾಯ್ ಬಾಂಗ್ಲಾದೇಶೀ ಬ್ಲಾಗ್ ಬರಹಗಾರ. ವಯಸ್ಸು 43. ಅವರಿಗೆ ದೇವರೆಂಬುದೇ ಇಲ್ಲ. ನಿರೀಶ್ವರವಾದಿ. ದ ವೈರಸ್ ಆಫ್ ಫೇತ್ ಪುಸ್ತಕದ ಕರ್ತೃ. ನಾಸ್ತಿಕವಾದವನ್ನು ಮಂಡಿಸುವ ಬ್ಲಾಗ್‌ನಲ್ಲಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ಅವರಿಗೆ ಧರ್ಮವೆಂಬುದು ನಗಣ್ಯ. ದೇವರನ್ನೇ ನಿರಾಕರಿಸಿದ್ದ ಅವಿಜಿತ್‌ಗೆ ಧರ್ಮದ ತೊಡಕೂ ಇರಲಿಲ್ಲ. ಅವರ ಹೆಂಡತಿ ರಫೀದ ಅಹ್ಮದ್ ಬನ್ಯಾ ಎಂಬ ಮುಸ್ಲಿಂ ಮಹಿಳೆ. ಮಕ್ಕಳು ತ್ರಿಶಾ, ಅಹ್ಮದ್. ಅವಿಜಿತ್ "ಮುಕ್ತ ಮನೋ" ಎಂಬ ಕಾರ್ಯಕ್ರಮದಲ್ಲಿ ಭಾಷಣಗಳನ್ನು ಮತ್ತು ಸಂವಾದಗಳನ್ನು ಮಾಡುತ್ತಿದ್ದರು. ಅಂತದ್ದೇ ಒಂದು ಕಾರ್ಯಕ್ರಮ ಮುಗಿಸಿಕೊಂಡು ಬರುವಾಗ 26ನೇ ತಾರೀಖು, ಫೆಬ್ರವರಿ 2015ರಲ್ಲಿ ಹಂತಕರು ಮಾರಕಾಸ್ತ್ರಗಳಿಂದ ಕೊಚ್ಚಿಹಾಕಿ ಕೊಂದರು. ಈ ಕೃತ್ಯವನ್ನು ಮಾಡಿದವರು ಇಸ್ಲಾಂ ಮೂಲಭೂತವಾದಿಗಳು.

ಇದೇ ಬಾಂಗ್ಲಾದೇಶದ ಇಸ್ಲಾಂ ಮೂಲಭೂತವಾದಿಗಳು ಧರ್ಮದ ಹೆಸರಿನಲ್ಲಿ ಮಾಡುತ್ತಿರುವ ರಾಜಕೀಯ ಮತ್ತು ಸ್ವಹಿತಾಸಕ್ತಿಯ ಕಾರಣದಿಂದ ಸಮಾಜದಲ್ಲಿ ಶಾಂತಿ ಕದಡುವ ಹುನ್ನಾರಗಳನ್ನು ಬಯಲಿಗೆ ಎಳೆಯುವ ಕಾದಂಬರಿಯನ್ನು ಬರೆದವರು ಬಾಂಗ್ಲಾ ಲೇಖಕ ಡಾ. ಹುಮಾಯುನ್ ಆಜಾದ್. ಇವರು ತಮ್ಮ "ಪಾಕ್ ಸರ್ ಜಮಿನ್ ಸಾದ್ ಬಾದ್" ಎಂಬ ಕೃತಿಯಲ್ಲಿ ಮೂಲಭೂತವಾದಿಗಳ ಅಜೆಂಡಾಗಳನ್ನು ಖಂಡಿಸಿ, ಅವುಗಳ ನಿಜವಾದ ಉದ್ದೇಶಗಳನ್ನು ಬಿಚ್ಚಿಟ್ಟಿದ್ದರು. 27 ಫೆಬ್ರವರಿ 2004ರಲ್ಲಿ ಢಾಕಾದಲ್ಲಿಯೇ ಪುಸ್ತಕ ಮೇಳಕ್ಕೆ ಬಂದಿದ್ದ ಅವರ ಮೇಲೆ ಮಾರಣಾಂತಿಕ ಹಲ್ಲೆಯಾಯಿತು. ಅದೇ ವರ್ಷ ಆಗಸ್ಟ್ 11, ಜರ್ಮನಿಯಲ್ಲಿ ತೀರಿಕೊಂಡರು.

31 ವರ್ಷದ ಮತ್ತೊಬ್ಬ ನಿರೀಶ್ವರವಾದಿ ಅಹ್ಮಮದ್ ರಜಿಬ್ ಹೈದರ್ ಕೂಡ ಬ್ಲಾಗ್ ಬರಹಗಾರ. ವೃತ್ತಿಯಲ್ಲಿ ಆರ್ಕಿಟೆಕ್ಟ್. 1971ರಲ್ಲಿ ಬಾಂಗ್ಲಾದೇಶ್ ಲಿಬರೇಶನ್ ವಾರ್‌ನ ಹತ್ಯಾಕಾಂಡದ ಕುರಿತಾಗಿ ಬರೆದ ಆತನ ಲೇಖನಗಳು 2013ರಲ್ಲಿ ಶಹಬಾಗ್‌ನಲ್ಲಿ ಪ್ರತಿಭಟನೆ ಹುಟ್ಟುಹಾಕಲು ಕಾರಣವಾಗಿತ್ತು. ಇದರಲ್ಲಿ ಅಸಂಖ್ಯಾತ ಪ್ರಗತಿಪರ ಮುಸ್ಲಿಮರು ಭಾಗಿಯಾಗಿದ್ದರು. ಆದರೆ ಇದನ್ನು ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳು ವಿರೋಧಿಸುತ್ತಿದ್ದವು. 2013ರಲ್ಲಿ ಫೆಬ್ರವರಿ, 15ರ ರಾತ್ರಿ ಬಾಂಗ್ಲಾದಲ್ಲಿ ಹೊಸದಾಗಿ ರಚಿತವಾದ ಇಸ್ಲಾಂ ಮೂಲಭೂತವಾದಿ ಸಂಘಟನೆಯ ಕೆಲವರು ಅಹ್ಮಮದ್‌ರನ್ನು ಕೊಲೆ ಮಾಡಿದರು.

ಇದೇರೀತಿ ಅಲ್ಲಾಹನ ಅಸ್ತಿತ್ವವನ್ನು ಪ್ರಶ್ನಿಸುವ ನಾಸ್ತಿಕರ ಮೇಲೆ ನಡೆದ ದಾಳಿಯಲ್ಲಿ ಆಸಿಫ್ ಮೊಹಿಯುದ್ದೀನ್ ಎಂಬ ಬ್ಲಾಗ್‌ಕಾರರೂ ಒಬ್ಬರು. ಇವರ ಮೇಲೆ ಅನೇಕ ಕೇಸುಗಳನ್ನೂ ಹಾಕಲಾಯಿತು. ಇವರು ಮೂರು ತಿಂಗಳುಗಳ ಕಾಲ ಜೈಲುವಾಸವನ್ನು ಅನುಭವಿಸಿದರು ಹಾಗೂ ಈಗಲೂ ಕೇಸುಗಳನ್ನು ಎದುರಿಸುತ್ತಿದ್ದಾರೆ. ಮತ್ತೊಬ್ಬ ವಿವಾದಾತ್ಮಕ ಲೇಖಕ ಸ್ನಿಯುರ್ ರಹಮನ್, ತಾನು ಬರೆದ 'ನಾಸ್ತಿಕ ಪ್ರವಾದಿ' ಎಂಬ ಕಾದಂಬರಿಯಿಂದಾಗಿ ಮಾರ್ಚ್ 7, 2013ರಂದು ಹತ್ಯೆಗೀಡಾದನು.

ಶಿವಾಜಿ ಕೌನ್ ಥಾ

20ರ ಫೆಬ್ರವರಿ, 2015ರಲ್ಲಿ ಮಹಾರಾಷ್ಟ್ರದಲ್ಲಿ ಗೋವಿಂದ್ ಪನ್ಸಾರೆ, ಸಿಪಿಐನ ಮುಖಂಡರು, ಮುಖ್ಯವಾಗಿ ಓರ್ವ ನಾಸ್ತಿಕರಾದ ಪ್ರಗತಿಪರ ಚಿಂತಕ ಮತ್ತು ಹೋರಾಟಗಾರ ತಮ್ಮ ಪತ್ನಿಯೊಂದಿಗೆ ಬರುವಾಗ ಬೈಕ್‌ನಲ್ಲಿ ಬಂದ ಹಂತಕರು ಗುಂಡು ಹಾರಿಸಿ ಕೊಂದರು. ಪನ್ಸಾರೆಯವರು ಶ್ರಮ ಜೀವಿಗಳಿಗೆ ಮತ್ತು ಇತರ ತಳಸಮುದಾಯಗಳ ಪರವಾಗಿ ಸಾಕಷ್ಟು ದುಡಿದಿದ್ದರು. ಸುಮಾರು ಇಪ್ಪತ್ತು ಪುಸ್ತಕಗಳನ್ನು ಬರೆದಿರುವ ಇವರ 'ಶಿವಾಜಿ ಕೌನ್ ಥಾ' ಅಂದರೆ ಶಿವಾಜಿ ಯಾರು ಎಂಬ ತಮ್ಮ ಪುಸ್ತಕದಲ್ಲಿ ಛತ್ರಪತಿ ಶಿವಾಜಿಯು ಹೇಗಿದ್ದ ಎಂದು ವಿವರಿಸುತ್ತಾರೆ. ಮುಖ್ಯವಾಗಿ ಶಿವಾಜಿಯು ಜಾತ್ಯತೀತ ಮತ್ತು ಧರ್ಮಾತೀತ ನಿಲುವನ್ನೂ ಮತ್ತು ಒಲವನ್ನೂ ಉಳ್ಳವನೆಂದು ವಿವರಿಸುತ್ತಾ ಅವನು ಎಂದಿಗೂ ಮುಸ್ಲಿಂ ವಿರೋಧಿಯಾಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ದೌಲತ್ ಖಾನ್ ಮತ್ತು ಇಬ್ರಾಹಿಂ ಖಾನ್ ಸೇರಿದಂತೆ ಅನೇಕ ಮುಸಲ್ಮಾನ ದಳಪತಿಗಳು ಶಿವಾಜಿಯ ಸೈನ್ಯದಲ್ಲಿದ್ದರು. ಆದರೆ ಬಲಪಂಥೀಯ ಧೋರಣೆಯ ಕೋಮುವಾದಿಗಳು ಶಿವಾಜಿಯ ಚಿತ್ರಣವನ್ನು ತಮ್ಮ ದ್ವೇಷಕ್ಕೆ ತಕ್ಕಂತೆ ಮುಸ್ಲಿಂ ವಿರೋಧಿಯೆಂಬಂತೆ ತಿರುಚಿಕೊಂಡರು ಎಂದು ಸಾಕ್ಷ್ಯಾಧಾರಗಳ ಸಮೇತ ವಿವರಿಸುತ್ತಾರೆ. ಇದು ಹಿಂದೂ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಪಾಕಿಸ್ತಾನವನ್ನು ದ್ವೇಷಿಸಿದರೆ ಮಾತ್ರ ನೀನೊಬ್ಬ ಶ್ರೇಷ್ಠ ದೇಶಭಕ್ತನೆಂದೂ, ಮುಸ್ಲಿಮರನ್ನು ದ್ವೇಷಿಸಿದರೆ ಮಾತ್ರವೇ ನೀನು ಶ್ರೇಷ್ಠ ಹಿಂದೂ ಎಂಬ ಅಮಲಿಗೆ ಒಳಗಾಗಿರುವವರೆಲ್ಲರೂ 'ಶಿವಾಜಿ ಕೌನ್ ಥಾ'ಅನ್ನು ಒಪ್ಪಲು ಸಿದ್ಧರಿರಲಿಲ್ಲ. ಅಂತೂ ನೈಜ ಇತಿಹಾಸದ ಸಂಶೋಧಕರಾಗಿ ಜನರಿಗೆ ಪ್ರಜ್ಞೆಗೆ ಹಚ್ಚಲಿದ್ದ ಓರ್ವ ಪ್ರಗತಿಪರ ಚಿಂತಕ ಮೂಲಭೂತವಾದಿ ಹಂತಕರಿಗೆ ಬಲಿಯಾದರು.


ಮಹಾರಾಷ್ಟ್ರದಲ್ಲಿ ಅಂಧಶ್ರದ್ಧಾ ನಿರ್ಮೂಲನ ಸಮಿತಿಯನ್ನು ಸಂಸ್ಥಾಪಿಸಿ ಮೌಢ್ಯಾಚರಣೆಗಳ ವಿರುದ್ಧ ಹೋರಾಡುತ್ತಿದ್ದ ಲೇಖಕ ಮತ್ತು ಹೋರಾಟಗಾರ ನಾಸ್ತಿಕರಾದ ನರೇಂದ್ರ ದಾಬೋಲ್ಕರ್‌ರವರನ್ನು 20, ಆಗಸ್ಟ್ 2013ರಲ್ಲಿ ಹತ್ಯೆ ಮಾಡಿದರು.


ಇವು ಯಾವುದೂ ದೇವರನ್ನು ನಂಬುವ ಮತ್ತು ನಂಬದಿರುವವರ ನಡುವೆ ನಡೆಯುತ್ತಿರುವಂತಹ ಹೋರಾಟವಲ್ಲ. ತಸ್ಲೀಮಾ ನಸ್ರೀನ್ ಅಥವಾ ಸಲ್ಮಾನ್ ರಷ್ದೀ ಹಾಗೂ ಭಾರತದ ಅನೇಕ ಲೇಖಕರ ಪುಸ್ತಕಗಳು ಹಿಂದೂ ಅಥವಾ ಮುಸಲ್ಮಾನ್ ಧಾರ್ಮಿಕತೆಯ ಮೇಲೆ ನಿಷೇಧಕ್ಕೆ ಒಳಪಡುವುದು ಈಗಿನ ವಿದ್ಯಮಾನಗಳೇನಲ್ಲ.

ನಿಷೇಧಗಳಿಗೂ, ಬಹಿಷ್ಕಾರಗಳಿಗೂ ನಮ್ಮ ಭಾರತೀಯ ಪರಂಪರೆಗಳಲ್ಲಿಯೇ ಅಸಂಖ್ಯಾತ ಉಲ್ಲೇಖಗಳಿವೆ. ಯಾವ್ಯಾವ ಕೃತಿಗಳು ನಿಷೇಧಕ್ಕೆ ಒಳಗಾದವೋ ಅವನ್ನು ಇಂದ್ರಾಣಿಯು (ನದಿ) ತಾನೇ ಮೇಲೆತ್ತಿ ತರುತ್ತಾಳೆ ಅಥವಾ ದೇವರುಗಳು ಅರಳಿಸುವ ತಾವರೆಗಳಲ್ಲಿ ತೇಲುತ್ತಾ ಬರುತ್ತವೆ. ಇತ್ಯಾದಿಗಳಾಗಿ ಆ ಕೃತಿಗಳಿಗೆ ಮತ್ತೆ ಮಹತ್ವ ಬರುತ್ತದೆ. ಯಾವುದೇ ಧಾರ್ಮಿಕ ಮತ್ತು ಶಾಸ್ತ್ರ ಕಾರಣದಿಂದ ಬಹಿಷ್ಕೃತರಾಗಿದ್ದರೆ ಅವರನ್ನು ಮುಂದಿನ ಪೀಳಿಗೆಯು ಒಪ್ಪಿಕೊಳ್ಳುವಂತಾಗಬೇಕಾದರೆ ಅವರು ಪವಾಡಗಳನ್ನು ಮಾಡಬೇಕು. ಅವರ ಅಂತ್ಯವಂತೂ ಜೀವಂತ ಸಮಾಧಿಯಾಗಬೇಕು ಅಥವಾ ವೈಕುಂಠದಿಂದ ಒಂದು ಫ್ಲೈಟ್ ಬರಬೇಕು.

ಹಾಗೆಯೇ ವೈದಿಕ ಹಾಗೂ ಕರ್ಮಠ ಬ್ರಾಹ್ಮಣರ ಶ್ರೇಷ್ಠತೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಮಾಜದಲ್ಲಿ ನಿಷೇಧಕ್ಕೆ ಒಳಗಾದ ತುಕಾರಾಮನ ಅಭಂಗಗಳು ಇಂದು ನಾವು ಓದುತ್ತಿರುವ ಕಾರಣ ಅಥವಾ ಅಂಥಾ ನಿಷೇಧಕ್ಕೆ ಒಳಗಾಗಿದ್ದವನು ಸಂತನಾದ ಕಾರಣ ಸಾಕ್ಷಾತ್ ಇಂದ್ರಾಣಿಯೇ ನದಿಯಿಂದ ಮೇಲೆದ್ದು, "ಬಾಳಾ ತುಕಾ" ಅಂತ ಒಂದು ಮಾತಾಡಿ ಆಶೀರ್ವದಿಸಿ ಪುಸ್ತಕಗಳನ್ನು ಹಿಂದಿರುಗಿಸಿದ್ದು, ಕೊನೆಗೆ ಆಕಾಶದಿಂದ ಗರುಡವಾಹನನಾದ ವಿಷ್ಣುವೇ ತನ್ನ ಪುಷ್ಪಕ ವಿಮಾನವನ್ನು ಕಳುಹಿಸಿ ಆತನನ್ನು ಕರೆಯಿಸಿಕೊಂಡಿದ್ದು. ಅದೇರೀತಿ ಬ್ರಾಹ್ಮಣ್ಯದ ನೀತಿ ಶಾಸ್ತ್ರಗಳ ಮುಖೇನ ಬಹಿಷ್ಕೃತನಾಗಿ ತಿರಸ್ಕೃತನಾಗಿದ್ದ ಜ್ಞಾನೇಶ್ವರ ಸಂತನಾಗಿದ್ದು ಆತ ತನ್ನ ಬೆನ್ನಿನ ಮೇಲೆ ರೊಟ್ಟಿ ತಟ್ಟಿಸಿಕೊಂಡು ಸುಟ್ಟು ಬೇಯಿಸಿದರಿಂದ. ಕೋಣದಿಂದ ವೇದಗಳನ್ನು ಹೇಳಿಸಿದ್ದರಿಂದ. ನಿರ್ಜೀವ ಗೋಡೆಯ ಮೇಲೆ ಕೂತು ಗೋಡೆ ಸಮೇತ ಪ್ರಯಾಣ ಮಾಡಿದ್ದರಿಂದ. ನಂತರ ಸಜೀವವಾಗಿ ತಮ್ಮ ಇಪ್ಪತ್ತೆರಡನೆಯ ವಯಸ್ಸಿಗೆ ಸಮಾಧಿ ಹೊಂದಿದರು.

ಒಂದು ಕಾಲದ ಪ್ರಬಲ ಹೋರಾಟಗಾರರು ತಾವು ಯಾವುದರ ವಿರುದ್ಧ ಹೋರಾಟಗಳನ್ನು ಮಾಡಿದರೋ, ತಮ್ಮ ಕಾಲಾನಂತರ ಮತ್ತೆ ಅದರದೇ ಮೌಢ್ಯ ಪೌರಾಣಿಕ, ಕಂದಾಚಾರಗಳ ಬಲೆಯಲ್ಲಿ ಸಿಕ್ಕಿ ಮತ್ತೆಂತದ್ದೋ ರೀತಿಯಲ್ಲಿ ಪ್ರದರ್ಶನವಾಗಿ ಮತ್ತೆ ಮತ್ತೆ ಜನರು ವೈಚಾರಿಕತೆಗೆ ಮತ್ತು ಧರ್ಮಾತೀತ ಹಾಗೂ ಜಾತ್ಯತೀತದೆಡೆಗೆ ಬರದಂತೆ ಜಾರತೊಡಗುವಂತಹ ಭಯಂಕರ ಹುನ್ನಾರಗಳು ಬಲು ವ್ಯವಸ್ಥಿತವಾಗಿರುತ್ತವೆ.





ವಾರಕರೀ ಸಂಪ್ರದಾಯದ ಅಥವಾ ಭಾಗವತ ಧರ್ಮದ ಮತ್ತೊಂದು ರೂಪವೇ ಆದ ಮಹಾ ವೈಷ್ಣವನನ್ನು ಜ್ಞಾನೋಬಾ ಮಾವುಲಿ ಎಂದು ವರ್ಣಿಸುತ್ತಾರೆ. ಜ್ಞಾನದೇವ ಆ ಗೌರವಕ್ಕೆ ಪಾತ್ರವಾದಂತವನು. ಆದರೆ ಇಪ್ಪತ್ತೆರಡನೆಯ ವಯಸ್ಸಿಗೇ ಜೀವನವನ್ನು ಮುಗಿಸಿದ ಜ್ಞಾನೇಶ್ವರನಿಗೆ ತನ್ನ ಬದುಕಿನ ಹೋರಾಟಕ್ಕೆ ಮುನ್ನ ಅವನ ತಂದೆಯ ಹೋರಾಟದ ಹಿನ್ನೆಲೆಯಿದೆ.

ಬ್ರಾಹ್ಮಣನಿಗೆ ಬ್ರಾಹ್ಮಣಿಕೆಯೇ ಶತ್ರು

ಮಧ್ಯಾಹ್ನಿಕ ಶಾಖೆಯ ದೇಶಸ್ಥ ಯಜುರ್ವೇದಿ ಬ್ರಾಹ್ಮಣ ವಿಠಲ ಪಂತ, ಜ್ಞಾನದೇವನ ತಂದೆ. ವತ್ಸ ಗೋತ್ರದವರು. ವೇದ, ವೇದಾಂಗ, ಕಾವ್ಯ ವ್ಯಾಕರಣ ಹಾಗೂ ಇತರೇ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದ ವಿಠಲ ಪಂತನಿಗೆ ಮೊದಲಿನಿಂದಲೂ ಆಧ್ಯಾತ್ಮಕ ಒಲವು. ಸನ್ಯಾಸಿಯಾಗಿ ತನ್ನ ಪಾರಮಾರ್ಥಿಕ ಗುರಿಯನ್ನು ಸಾಧಿಸಿಕೊಳ್ಳುವ ಬಯಕೆ. ಅದಕ್ಕಾಗಿ ತೀರ್ಥಯಾತ್ರೆಗಳನ್ನು ಮಾಡಿಕೊಂಡಿರುವಾಗ ಸಿಧೋಪಂತನೆಂಬ ಗೃಹಸ್ಥನ ಕಣ್ಣಿಗೆ ಬಿದ್ದು ತನ್ನ ಮಗಳಾದ ರುಕ್ಮಿಣೀಬಾಯಿಯನ್ನು ಕೊಟ್ಟು ಮದುವೆ ಮಾಡಿದರು. ಆದರೆ ವಿಠಲಪಂತನಿಗೆ ಸನ್ಯಾಸತ್ವದ ಸೆಳವು ಕಡಿಮೆಯಾಗಿರಲಿಲ್ಲ. ಬದಲಿಗೆ ದಿನೇದಿನೇ ಹೆಚ್ಚಾಯಿತು. ತನ್ನ ಪತ್ನಿಯ ಅನುಮತಿಯ ಮೇರೆಗೇ ಸನ್ಯಾಸ ಸ್ವೀಕರಿಸಲು ಆಕೆಗೆ ದುಂಬಾಲು ಬಿದ್ದಿದ್ದ. ಆತನ ಒತ್ತಾಯಕ್ಕೆ ಕಟ್ಟುಬಿದ್ದು ಯಾವಾಗಲೋ ಹೇಗೋ ಸರಿ ತಗೊಳ್ಳಿ ಎಂದು ತನ್ನ ಅನುಮತಿಯನ್ನು ಒಗೆದುಬಿಟ್ಟಳು. ವಿಠಲಪಂತ ಕಾಶಿಗೆ ಹೋಗಿ ಅಲ್ಲಿ ಶ್ರೀಪಾದ ಸ್ವಾಮಿ ಎಂಬುವರ ಬಳಿ ತನಗೆ ಯಾವ ಕರ್ತವ್ಯ ಕರ್ಮಗಳೂ ಇಲ್ಲವೆಂದು ಸುಳ್ಳು ಹೇಳಿಯೇ ಸನ್ಯಾಸ ಸ್ವೀಕರಿಸಿದ. ಬಹುಶಃ ತಾನು ಹೇಳುವ ಸುಳ್ಳು, ಮಾಡುವ ಕರ್ತವ್ಯ ಲೋಪ ಇವೆಲ್ಲವೂ ಕೂಡ ಸನ್ಯಾಸತ್ವ ಎಂಬ ಮಹಾ ದೀಕ್ಷೆಯ ಪವಿತ್ರಾಗ್ನಿಯಲ್ಲಿ ದಗ್ಧವಾಗಿ ಹೋಗುತ್ತದೆ ಎಂದು ಭಾವಿಸಿದ್ದನೋ ಏನೋ. ಎಲ್ಲಾ ಮೋಹಗಳಿಂದ ಮುಕ್ತವಾಗಿ ಸನ್ಯಾಸಿಯಾಗುವವನಿಗೆ ಸನ್ಯಾಸತ್ವವೇ ಮಹಾಮೋಹವಾಗಿ ಕಾಡಿದ್ದು ವಿಪರ್ಯಾಸ, ಅದಕ್ಕೆ ಮುಂದೆ ವಿಠಲ ಪಂತ ಭಾರೀ ಬೆಲೆಯನ್ನು ತೆತ್ತ.

ಸನ್ಯಾಸಿಯಾಗಿದ್ದ ವಿಠಲ ಪಂತನಿಗೆ ಶ್ರೀಪಾದಸ್ವಾಮಿಯಿಂದ ಚೈತನ್ಯಾಶ್ರಮವೆಂದು ಹೊಸ ನಾಮಕರಣವಾಗಿತ್ತು. ಒಮ್ಮೆ ಶ್ರೀಪಾದ ಸ್ವಾಮಿಯು ಕಾಶಿಯಿಂದ ರಾಮೇಶ್ವರಕ್ಕೆ ಯಾತ್ರೆ ಹೋಗುವಾಗ ದಾರಿಯಲ್ಲಿ ವಿಠಲಪಂತ್‌ನ ಊರಾದ, ಹೆಂಡತಿ ರುಕ್ಮಿಣೀಬಾಯಿ ಇದ್ದ ಆಳಂದಿಯಲ್ಲಿ ತಂಗಿದರು. ಮಾರುತಿ ಮಂದಿರದಲ್ಲಿ ವಾಸ್ತವ್ಯ ಹೂಡಿದ್ದ ಅವರಿಗೆ ರುಕ್ಮಿಣೀಬಾಯಿ ನಮಸ್ಕರಿಸಿದಳು. ಮುತ್ತೈದೆಯ ಮೂರ್ತಿಯಾಗಿದ್ದ ಆಕೆಗೆ ಸಹಜವಾಗಿ ಪುತ್ರವತೀಭವ ಎಂದು ಶ್ರೀಪಾದರು ಆಶೀರ್ವಾದ ಮಾಡಿದರು. ಆಗ ಗಲಿಬಿಲಿಗೊಂಡ ರುಕ್ಮಿಣಿ ತನ್ನ ವೃತ್ತಾಂತವನ್ನು, ಅವರ ಆಶೀರ್ವಾದವು ನೆರವೇರದಿರುವ ಕಾರಣವನ್ನು ತಿಳಿಸಿದರು. ಮುಂದೆ ಶ್ರೀಪಾದರು ವಿಠಲಪಂತ್‌ನನ್ನು ವಿಚಾರಿಸಿ, ನಿಜವಾದ ವಿಷಯ ತಿಳಿದುಕೊಂಡು ಸನ್ಯಾಸಾಶ್ರಮದಿಂದ ಮತ್ತೆ ಗೃಹಸ್ಥಾಶ್ರಮಕ್ಕೆ ತೆರಳಲು ಸೂಚಿಸಿದರು. ಹಾಗೆಯೇ ಕಳುಹಿಸಿದರು. ವರ್ಣಾಶ್ರಮ ಧರ್ಮದ ನಿಯಮಗಳು ಮಾನವನ ಸಲುವಾಗಿಯೇ ಇರುವುದು ಹೊರತು, ಮಾನವನು ಆ ನಿಯಮಗಳ ಸಲುವಾಗಿ ಅಲ್ಲ ಎಂಬುದು ಅವರ ಕ್ರಿಯೆಯ ಧ್ವನಿಯಾಗಿತ್ತು.


ಸನ್ಯಾಸಿಯಾಗಿದ್ದವನು ಮತ್ತೆ ಗೃಹಸ್ಥನಾದ ಘೋರ ಅಪರಾಧಕ್ಕೆ ಆಗಿನ ಕರ್ಮಠ ಜನರ ಬಹಿಷ್ಕಾರಕ್ಕೆ ಒಳಗಾದನು. ಈ ಜನ ಸಂಬಂಧವೇ ಬೇಡವೆಂದು ಊರ ಹೊರಗೆ ಗುಡಿಸಲು ಕಟ್ಟಿಕೊಂಡು ಹೆಂಡತಿಯೊಡನೆ ತನ್ನ ಮಾನವ ಸಹಜ ಜೀವನ ನಡೆಸತೊಡಗಿದನು. ನಂತರ ನಾಲ್ಕು ಮಕ್ಕಳಾದವು. ನಿವೃತ್ತಿನಾಥ, ಜ್ಞಾನೇಶ್ವರ, ಸೋಪಾನದೇವ ಮತ್ತು ಕೊನೆಯವಳು ಹೆಣ್ಣು ಮಗಳು ಮುಕ್ತಾಬಾಯಿ.

ವಿಠಲ ಪಂತ್‌ನ ಮಕ್ಕಳೂ ಕರ್ಮಠ ಸಮಾಜದ ತಿರಸ್ಕಾರಕ್ಕೆ, ಅನಾದರಕ್ಕೆ ಒಳಗಾದರು. ಆದರೆ ವಿಠಲ ಪಂತನೇ ಅವರಿಗೆ ವಿದ್ಯಾಭ್ಯಾಸ ಮಾಡಿಸಿದನು. ಗಂಡು ಮಕ್ಕಳಿಗೆ ಉಪನಯನ ಮಾಡುವ ವಯಸ್ಸಾದಾಗ ವಿಠಲ ಪಂತ ಧರ್ಮಪಂಡಿತರಿಗೆ ವಿನಂತಿಸಿಕೊಂಡ. ಯಾರೂ ಸಹಾನುಭೂತಿ ತೋರಿ ಉಪನಯನ ಮಾಡುವ ಮನಸ್ಸು ಮಾಡಲಿಲ್ಲ. ರುಕ್ಮಿಣೀಬಾಯಿ ಮತ್ತು ವಿಠಲ ಪಂತ್ ಇಬ್ಬರೂ ಬ್ರಾಹ್ಮಣ ಸಭೆಗೆ ಹೋಗಿ ತಮ್ಮ ಅಪರಾಧವನ್ನು ಒಪ್ಪಿಕೊಂಡರು, ಪ್ರಾಯಶ್ಚಿತ್ತ ಮಾಡಿಕೊಳ್ಳಲು ಮುಂದಾದರು. ತಮ್ಮ ಮಕ್ಕಳಿಗೆ ಬಹಿಷ್ಕಾರವನ್ನು ತೆಗೆದು ಸಮಾಜದಲ್ಲಿ ಎಲ್ಲರಂತೆ ಸ್ವೀಕರಿಸಿ ಸ್ಥಾನಮಾನ ಕೊಡಬೇಕು ಎಂದು ಬೇಡಿಕೊಂಡರು. ಧರ್ಮಶಾಸ್ತ್ರದ ಜುಟ್ಟನ್ನೇ ಹಿಡಿದಿರುವ ಆ ಬ್ರಾಹ್ಮಣರು ಶಾಸ್ತ್ರಗ್ರಂಥಗಳನ್ನು ತಿರುವಿಹಾಕಿದರು. ನಿಮ್ಮ ಅಪರಾಧಕ್ಕೆ ಯಾವ ಪ್ರಾಯಶ್ಚಿತ್ತವೂ ಇಲ್ಲ. ಅದಕ್ಕೆ ಸಾವೇ ಪರಿಹಾರ ಎಂದುಬಿಟ್ಟರು.


ನಮ್ಮ ಮಕ್ಕಳು ಉಪನಯನ ಮಾಡಿಸಿಕೊಂಡು ಬ್ರಾಹ್ಮಣರಾಗಿದ್ದು ನಂತರ ಸಮಾಜದಲ್ಲಿ ಮಾನ್ಯರಾಗುವರು ಎಂದು ಬಯಸಿದ್ದ ದಂಪತಿಗಳು ಅದೇಕೆ ಆ ಬ್ರಾಹ್ಮಣ್ಯದ ಬಂಧನದಿಂದ ಹೊರಗೆ ಬರಲು ಸಿದ್ಧರಿರಲಿಲ್ಲವೋ! ಒಟ್ಟಿನಲ್ಲಿ ಶಾಸ್ತ್ರದಲ್ಲಿ ಮುದ್ರಿತವಾದ ಪದಗಳ ಆಚೆಗೆ ಮನುಷ್ಯತ್ವದ ಎಳೆ ಕಾಣುವ ಯೋಗ್ಯತೆಯಂತೂ ಆ ಬ್ರಾಹ್ಮಣರಿಗಿರಲಿಲ್ಲ ಎಂಬುದು ಸರ್ವವಿಧಿತ.

ವಿಠಲ ಪಂತ ತಾನು ದೇಹತ್ಯಾಗ ಮಾಡಿದರೆ ತನ್ನ ಮಕ್ಕಳಿಗೆ ಉಪನಯನ ಮಾಡುವರು, ತನ್ನ ಸಾವಿನ ಪ್ರಾಯಶ್ಚಿತ್ತದಿಂದ ತನ್ನ ಮಕ್ಕಳಿಗೆ ಬ್ರಾಹ್ಮಣರೆಂಬ ಮಾನ್ಯತೆ ಸಮಾಜದಲ್ಲಿ ದೊರಕುವುದು ಎಂದು ಭ್ರಮಿಸಿ, ಪ್ರಯಾಗಕ್ಕೆ ಹೋಗಿ, ಗಂಗಾ, ಯಮುನಾ ನದಿಗಳ ಸಂಗಮದಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡರು. ನಂತರ ತನ್ನ ಗಂಡನ ಸಾವನ್ನು ಭರಿಸದ ರುಕ್ಮಿಣೀಬಾಯಿಯೂ ಅದೇ ಪ್ರಯಾಗಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಂಡರು.

ಇದು ಜನಿವಾರವೆಂಬ ಬ್ರಾಹ್ಮಣ್ಯವು ವಿಠಲ ಪಂತ್ ಮತ್ತು ರುಕ್ಮಿಣೀಬಾಯಿ ಎಂಬ ಎರಡು ಬ್ರಾಹ್ಮಣ ಜೀವಿಗಳಿಗೆ ಉರುಳಾದ ಕಥೆ.




ಅವಿಜಿತ್ ರಾಯ್




ನರೇಂದ್ರ ದಾಬೋಲ್ಕರ್

ಸೌಹಾರ್ದ ಪರಂಪರೆಯ ವಿಶೇಷಾಂಕ ಸಂತೋಷ ತಂದಿತು



'ಲಂಕೇಶ್ 80; ಪತ್ರಿಕೆ 10' ವಿಶೇಷಾಂಕ ಓದಿ ಸಂತೋಷದಿಂದ ಈ ಪತ್ರ ಬರೆಯುತ್ತಿದ್ದೇನೆ.

ಲಂಕೇಶರು ಪತ್ರಿಕೆಯನ್ನು ಆರಂಭಿಸಿದಂದಿನಿಂದಲೂ ತಪ್ಪದೆ ಓದುತ್ತಾ ಬಂದಿರುವವನು ನಾನು. ನಿಮ್ಮ ನೇತೃತ್ವದ ಈ ಪತ್ರಿಕೆಗೆಂದು ನಾನು ಬರೆದು ಕಳಿಸಿದ ಲೇಖನಗಳನ್ನು ನೀವು ಪ್ರಕಟಿಸಿದ್ದೀರಿ ಕೂಡ. ಆನಂತರ ನಾನು ನಿಮಗೆ ಲೇಖನ ಕಳಿಸದಿದ್ದರೂ, ಪತ್ರಿಕೆಯನ್ನು ಪ್ರತಿವಾರ ಮನೆಗೆ ತರಿಸಿಕೊಂಡು ಆಸ್ಥೆಯಿಂದ ಓದುತ್ತಿದ್ದೇನೆ. ತಮ್ಮ ತಂದೆಯ



ವರಂತೆಯೇ ತಮಗೂ ಇರುವ ಸಾಮಾಜಿಕ ಕಳಕಳಿ, ಮಾನವಪ್ರೇಮ, ಮಾನವೀಯತೆಯೆಡೆಗಿನ ಒಲವು, ಸಮಾನತೆ- ಸೌಹಾರ್ದ-ಸಹಬಾಳ್ವೆಗಳೆಡೆಗಿನ ತುಡಿತ ಮತ್ತು ದುರ್ಗುಣಗಳ ಬಗೆಗಿನ ಅಸಹನೆ-ಪ್ರತಿರೋಧ ಇವು ಸದಾ ನನ್ನ ಮೆಚ್ಚುಗೆಗೆ ಪಾತ್ರ. ಈ ಎಲ್ಲ ಗುಣಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುತ್ತ ಬಂದಿರುವ ನೀವು ನಿಮ್ಮೆಲ್ಲ ಸಂಚಿಕೆಗಳಿಗೂ ಕಲಶಪ್ರಾಯವಾಗಿ ಈ ವಿಶೇಷಾಂಕವನ್ನು ರೂಪಿಸಿದ್ದೀರಿ.

ಸದ್ಭಾವ, ಸಮಾನತೆ, ಸೌಹಾರ್ದ ಮತ್ತು ಸಾಮಾಜಿಕ ವಿವೇಕ ಇವುಗಳ ಪ್ರತಿಪಾದನೆಯು ವಿಶೇಷಾಂಕದ ವಿಶೇಷ ಲೇಖನಗಳಲ್ಲಿ ಸ್ಫುಟವಾಗಿದೆ. ಈ ಲೇಖನಗಳೆಲ್ಲ ಓದುಗನನ್ನು ಚಿಂತನೆಯ ಕೋಶದೊಳಕ್ಕೆ ಕೊಂಡೊಯ್ಯುತ್ತವೆ. ವಿಶೇಷಾಂಕದ ಸೌಹಾರ್ದೋದ್ದೇಶವು ಈ ರೀತಿಯಲ್ಲಿ ಸಾರ್ಥಕವಾಗಿದೆ.

ಓರ್ವ ಚಿಂತಕ ಮತ್ತು ಬರಹಗಾರನಾಗಿ ನನ್ನ ದೃಷ್ಟಿಯು ಕೆಲವು ವಿಷಯಗಳಲ್ಲಿ ನಿಮ್ಮ ದೃಷ್ಟಿಗಿಂತ ಭಿನ್ನವಾಗಿರಬಹುದು. ಆದರೆ ನನ್ನ ಜೀವನೋದ್ದೇಶವೂ, ನಿಮ್ಮ ಉದ್ದೇಶದಂತೆಯೇ, ಸಮಾಜದಲ್ಲಿ ಅರಿವನ್ನು ಜಾಗೃತಗೊಳಿಸುವುದರ ಮೂಲಕ ಸ್ನೇಹ-ಸಮಾನತೆ-ಸೌಹಾರ್ದ-ಸಹಬಾಳ್ವೆಗಳನ್ನು ಪ್ರೋತ್ಸಾಹಿಸುವುದೇ ಆಗಿದೆ. ನಮ್ಮಿಬ್ಬರ ಮಾರ್ಗಗಳು ಭಾಗಶಃ ಭಿನ್ನವಾಗಿರಬಹುದು, ಆದರೆ ಗುರಿ ಒಂದೇ ಎಂದುಕೊಳ್ಳುತ್ತೇನೆ.

ಸೌಹಾರ್ದವೆಂಬುದು ಇಂದು ಕೋಮುಗಳ ನಡುವೆ ಮಾತ್ರವಲ್ಲ, ಪ್ರಾಂತ್ಯಗಳ ನಡುವೆ, ದೇಶಗಳ ನಡುವೆಯೂ ಉಂಟಾಗಬೇಕಾಗಿದೆ. ಪ್ರತಿ ಮನಸು ಮನಸಿನ ನಡುವೆ ಉಂಟಾಗಬೇಕಾಗಿದೆ. ದೈಹಿಕವಷ್ಟೇ ಅಲ್ಲ, ಮಾನಸಿಕ ಹಿಂಸೆ-ಶೋಷಣೆಗಳಿಂದಲೂ ಮುಕ್ತವಾದ ಸುಖೀ ಸಮಾಜ ನಿರ್ಮಾಣಕ್ಕೆ ಇದು ಅತ್ಯವಶ್ಯ. ಎಲ್ಲ ವರ್ಗಗಳ ಮತ್ತು ಎಲ್ಲ ಸ್ತರಗಳ ಮನಸ್ಸುಗಳಿಗೂ ಈ ಮಾತು ಅನ್ವಯ.

ಸೌಹಾರ್ದರಹಿತ ಸಮಾಜದಲ್ಲಿ ಕ್ರೋಧ, ಹಿಂಸೆ, ಶೋಷಣೆ, ನೋವು ಇವುಗಳೇ ತಾಂಡವವಾಡುತ್ತವೆ. ಇಂಥ ದುರಂತ ನಮಗೆ ಬೇಕೇ?


ವಿಪರ್ಯಾಸವೆಂದರೆ, ದಿನೇದಿನೇ ವಿವೇಕಿಗಳಾಗುತ್ತಿದ್ದೇವೆಂದು ನಮ್ಮ ಬಗ್ಗೆ ಭಾವಿಸಿಕೊಂಡಿರುವ ನಾವು ದಿನೇದಿನೇ ಈ ದುರಂತದೆಡೆಗೆ ಸಾಗುತ್ತಿದ್ದೇವೆ! ಅರ್ಥಾತ್, ನಾವಿನ್ನೂ ವಿವೇಕಿಗಳಾಗಿಲ್ಲ; ಬದಲಿಗೆ, ಇರುವ ಅಲ್ಪಸ್ವಲ್ಪ ವಿವೇಕವನ್ನು ನಾವಾಗಿ ಕಳೆದುಕೊಳ್ಳುತ್ತಿದ್ದೇವೆ. ಈ 'ವಿವೇಕಶೂನ್ಯ ದುರಂತಯಾನ' ದಿಂದ ಸಮಾಜವನ್ನು ಪಾರು ಮಾಡುವಲ್ಲಿ ಪತ್ರಿಕೆಗಳ, ಬರಹಗಾರರ ಮತ್ತು ದೃಶ್ಯ ಮಾಧ್ಯಮಗಳ ಪಾತ್ರ ಹಿರಿದು. ಇದು ಈ ಸಮುದಾಯದ ಕರ್ತವ್ಯವೂ ಹೌದು.

ಭಿನ್ನ ದೃಷ್ಟಿಗಳೇನೇ ಇರಲಿ, ಸೌಹಾರ್ದಸ್ಥಾಪನೆಯೆಂಬ ಏಕಗುರಿಯತ್ತ ಸಮಾಜವನ್ನು ಕೊಂಡೊಯ್ಯಲು ಈ ಸಮುದಾಯದ ಸದಸ್ಯರಾದ ನಾವು ಅವಿರತ ಶ್ರಮಿಸೋಣ.

- ಎಚ್. ಆನಂದರಾಮ ಶಾಸ್ತ್ರಿ, ಬೆಂಗಳೂರು

ಸಿದ್ದು ಇರಲೇ ಬೇಕು

'ಸಿದ್ದು... ಇರಲೇಬೇಕು' ಎಂಬ ಬರಹ ನೋಡಿ ತುಂಬ ಖುಷಿಯಾಯಿತು. ನೋವು, ಕಷ್ಟ, ಹಿಂಸೆಯಲ್ಲಿರುವವರಿಗೆ ನಿಮ್ಮ ಸಾಂತ್ವನದ ಮಾತು ಈ ಸಮಯದಲ್ಲಿ ಬೇಕಿತ್ತು, ಸಿದ್ದರಾಮಯ್ಯನವರು ಈಗ ಉತ್ತಮ ಆಡಳಿತವನ್ನೇ ನೀಡುತ್ತಿದ್ದಾರೆ. ಅವರ ಸಂಪುಟದ ಮಂತ್ರಿಗಳಲ್ಲಿ ಸಣ್ಣಪುಟ್ಟ ಅಸಮಾಧಾನಗಳಿದ್ದರೂ ಹಗರಣ ಮುಕ್ತ ಸರ್ಕಾರವಾಗಿದೆ.



ಸಿದ್ದರಾಮಯ್ಯ ಸ್ಥಿರ, ಸುಭದ್ರ ಸರ್ಕಾರ ನಡೆಸುತ್ತಿರುವ ಈ ಹೊತ್ತಿನಲ್ಲಿ ಅವರನ್ನು ಕೆಳಗೆ ಇಳಿಸಿ 'ಪರಮ್'ರನ್ನು ಸಿ.ಎಂ. ಪಟ್ಟದಲ್ಲಿ ಕೂರಿಸಿ ಎಂಬ ಕೂಗು ಕಿಡಿಗೇಡಿಗಳದ್ದೇ. ಪದ್ಮನಾಭನಗರದ ದೊಡ್ಡಗೌಡರ ಚಿತಾವಣೆಯಿಂದ ಅವರು ಒಡೆದು ಆಳುವ ಕೀಳುಮಟ್ಟದ ರಾಜಕೀಯ ಮಾಡುತ್ತಿದ್ದಾರೆ. ಹೇಗಾದರೂ ಮಾಡಿ ಸಿದ್ದುರನ್ನು ಕೆಳಗಿಳಿಸಬೇಕು ಅದಕ್ಕಾಗಿ ನಿತ್ಯ ಗಂಟೆಗಟ್ಟಲೆ ದೊಡ್ಡೇಗೌಡರು ಫೋನಿನಲ್ಲಿ ಮಾತನಾಡುತ್ತ ಪರಮ್‌ರ ಮನಸ್ಸು ಕೆಡಿಸುತ್ತಿದ್ದಾರೆ. 2018 ರಲ್ಲಿ ಪಕ್ಷ ಅಧಿಕಾರ ಬರದಿದ್ದರೇ ಎಂಬ ಅನುಮಾನ ಪರಮ್‌ಗೆ ಏಕೆ ಬಂತು! ತಂತ್ರಗಾರಿಕೆ ಮಾಡಲು ಹೋಗಿ ಪೆದ್ದುಪೆದ್ದಾಗಿ ಸಿಕ್ಕಿ ಹಾಕಿಕೊಳ್ಳುತ್ತಿದ್ದಾರೆ. ಪರಮ್ ಚಾಡಿ ಮಾತುಗಳನ್ನು ಕೇಳುವುದು ತರವಲ್ಲ.

- ಜೆ. ಪುಟ್ಟಸ್ವಾಮಿ, ಮೈಸೂರು

ಎದೆ ಕಲುಕಿದ ನೂರ್ ಅನುಭವ

ಮಾರ್ಚ್ 4 ಮತ್ತು 11 ರ ಸಂಚಿಕೆಗಳಲ್ಲಿ ನೂರ್ ಶ್ರೀಧರ್ ಅವರ 40 ದಿನಗಳ ಜೈಲು ಅನುಭವ ಓದಿದ ... ಗಾದರೂ ಸಂಕಟವಾಗದಿದ್ದರೆ, ಕಣ್ಣು ಒದ್ದೆಯಾಗದಿದ್ದರೆ ಅವನು ಮನುಷ್ಯನೇ ಅಲ್ಲ, ಹೊರಗಿನ 'ಪಾಪಿ' ಲೋಕದ ಸ್ವಾರ್ಥ ನಾಗರಿಕರ, ಭ್ರಷ್ಟ ರಾಜಕಾರಣಿಗಳ, ಜೈಲುಪಾಲು ಮಾಡುತ್ತಿರುವ ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆ, ಗುಡಿ, ಚರ್ಚ್, ಮಸೀದಿಗಳ ದೇವರ ಏಜೆಂಟರ, ಕಳ್ಳ ವ್ಯಾಪಾರಿಗಳ, ಲೋಲುಪ್ತ ಕಾರ್ಪೊರೇಟ್ ಮಾಲೀಕರ, ಸೋಗಿನ ಪ್ರಗತಿಪರ ಸಾಹಿತ್ಯ ಕಲಾವಿದರ... ಇಂಥವರಿಂದ ಸಮಾಜ ಕೊಳೆತು ಹೋಗಿದೆ.

ಇದಕ್ಕೆ ಶಸ್ತ್ರಚಿಕಿತ್ಸೆಯೇ ಆಗಬೇಕು ಎಂದೆನಿಸಿದರೆ; ನಕ್ಸಲ್‌ರೇ ಸರಿ ಎನಿಸಿದರೆ ತಪ್ಪೇನು? ಬೇಲ್ ಸಿಗದೆ 80% ಜೈಲಿನಲ್ಲಿ ಜೀವಚ್ಛವವಾಗುತ್ತಿರುವ ಈ ದೇಶದ ಬಡವರನ್ನು ಕೇಳುವರಾರು? ಸಾಂತ್ವನ ಹೇಳುವರಾರು?

'ಶಿವನೇ ಬಡವರಿಗೆ ಜೈಲು ಸಾವು ಕೊಡಬೇಡ,




ಅವನಲ್ಲಿ ಸತ್ತರೆ ಸುಡುವವರೂ ಸಿಕ್ಕುತ್ತಿಲ್ಲ!' ನೂರ್ ಅವರ ಎನ್.ಆರ್. ಪುರ ಮತ್ತು ಚಿಕ್ಕಮಗಳೂರು ಜೈಲುಗಳ ಚಿತ್ರ ಇಷ್ಟೇ ಯಾಕೆ ಇವು. ಇಡೀ ರಾಷ್ಟ್ರದ ಜೈಲುಗಳೂ ಪ್ರಾತಿನಿಧಿಕ ಯಾತನಾ ಶಿಬಿರ! ಕಾಣುವ ಕಣ್ಣು, ಕೇಳುವ ಕಿವಿ ಬೇಕಷ್ಟೇ.

ಬಡಿವಾರದ ನೂರು ಜನ ಸಾಹಿತಿಗಳ ಕೃತಿಗಳಿಗಿಂತ ನೂರ್ ಅವರ ಈ ಒಂದು ನುಡಿಚಿತ್ರ ಎದೆ ಕಲಕುತ್ತದೆ. ನೊಂದವರ ನೋವು ನೋಡದವರೆತ್ತ ಬಲ್ಲರು? ಇಂಥ ಕುಲಗೆಟ್ಟ ಪ್ರಜಾತಂತ್ರ ವ್ಯವಸ್ಥೆಗೆ ಧಿಕ್ಕಾರವಿರಲಿ!

- ಪ್ರೊ. ಶಿವರಾಮಯ್ಯ, ಬೆಂಗಳೂರು


ಹವ್ಯಕ ಸಮಾಜ ನಿಮಗೆ ಚಿರಋಣಿ

ರಾಘು ರಾವಣಾಸುರನ ಕೃತ್ಯದ ಬಗ್ಗೆ ಬರೆದದ್ದಕ್ಕಾಗಿ ಧನ್ಯವಾದಗಳು. ಬರೆದದ್ದರಲ್ಲಿ ನೂರಕ್ಕೆ ನೂರು ಸತ್ಯವಿದೆ. ಆದರೆ ಈಗಾಗಲೇ ತಮಗೆ 30 ಕ್ಕೂ ಹೆಚ್ಚು ಜಡ್ಜ್‌ಗಳ ಪ್ರಭಾವವಿದೆ. 60 ಕ್ಕೂ ಹೆಚ್ಚು ಎಂಎಲ್‌ಎಗಳ ಬೆಂಬಲವಿದೆ ಎನ್ನುವ ಇವನ ಪಾಖಂಡಿ ದುಷ್ಟಕೂಟ ಕೇಸನ್ನು ಹಳ್ಳಹಿಡಿಸುವ ಎಲ್ಲಾ ಮಾರ್ಗಗಳಿಗೂ ಪ್ರಯತ್ನಿಸುತ್ತಿದೆ. ಪತ್ರಿಕಾ ಬಳಗವನ್ನು ಸಂತೈಸಲು ಈಗಾಗಲೇ ಕಸುಭಟ್ಟರಿಗೆ ಡೀಲ್ ಕೊಡಲಾಗಿದೆ ಎನ್ನುವ ಮಾತೂ ಇದೆ. ಇನ್ನು ಈ ಪೀಠಕ್ಕೆ ಭಕ್ತಿ ತೋರಿಸುವ ಜಡ್ಜ್‌ಗಳಿಂದ ದೇವರೇ ಕಾಪಾಡಬೇಕು.



ಇವರ ಏಕಾಂತ ಉಪದೇಶಗಳಿಗೆ ಮಾರುಹೋದ ಹೆಣ್ಣುಗಳೆಷ್ಟೋ, ನಲುಗಿದ ಪ್ರೇಮಲತಾ ಪುಷ್ಪಗಳೆಷ್ಟೋ! ಕಳೆದ ಹಲವಾರು ವರ್ಷಗಳಿಂದ ಈ ರಾಘವಾಸುರನ ಕಚ್ಚೆಹರುಕತನದ ಬಗ್ಗೆ ಕೇಳುತ್ತಿದ್ದೇವೆ. ಸರಿಯಾಗಿ ತನಿಖೆ ಮಾಡಿ ಹುಡುಕಿದರೆ 30 ಕ್ಕೂ ಹೆಚ್ಚು ಪ್ರಕರಣಗಳು ಸಿಗುತ್ತವೆ, ಇನ್ನೂ ಸರಿಯಾಗಿ ತದಕಿದರೆ 60 ಕ್ಕೂ ಹೆಚ್ಚು ಪ್ರಕರಣಗಳು ಬಯಲಾಗುತ್ತವೆ.

ಇವನ ಪಾಖಂಡಿ ಪಟಾಲಂಗಳು ನಡೆಸುವ ಅಪಪ್ರಚಾರಗಳಿಗೆ ಹೆದರಿಯೇ ಮರ್ಯಾದೆಗೆ ಹೆದರುವ



ಕುಟುಂಬಗಳು ದೂರು ಕೊಡಲು ಬರುವುದಿಲ್ಲ, ಮೇಲಾಗಿ ಪ್ರತಿಭಟಿಸುವ ಸದಸ್ಯರನ್ನು ಈತನ ಪುಂಡರ ಗುಂಪು ಎಲ್ಲ ರೀತಿಯಿಂದಲೂ ಬೆದರಿಸುತ್ತಿದೆ. ಈ ಪುಂಡರಲ್ಲಿ ಚಂದ್ರಶೇಖರನಂಥ ತುಂಬರು, ಪ್ರಸಾದ ತಿನ್ನುವ ಸರ್ಕಾರಿ ಉದ್ಯೋಗಿಗಳು, ತಮ್ಮ ಅಖಂಡ ಪಾಂಡಿತ್ಯವನ್ನು ಈ ಕಚ್ಚೆ ಹರುಕನನ್ನು ಸಮರ್ಥಿಸಿಕೊಳ್ಳುವುದರಲ್ಲಿ ಕಳೆಯುವ ಲದ್ದಿಜೀವಿಗಳು, ಕೇಸನ್ನು ಹಳ್ಳ ಹಿಡಿಸಲು ತಮ್ಮೆಲ್ಲ ಬುದ್ಧಿವಂತಿಕೆಯನ್ನು ಉಪಯೋಗಿಸುವ ಅನ್ಯಾಯವಾದಿಗಳು ಎಲ್ಲರೂ ಸೇರಿದ್ದಾರೆ. ಇವರಿಗೆಲ್ಲ ಇವನೇ ಚೋರಗುರು! ಬಲ್ಲವರು ಹೇಳುವಂತೆ ಈತನೊಬ್ಬ ಸೊಫಿಸ್ಟಿಕೇಟೆಡ್ ಗೂಂಡಾ!

ಈ ಹೆಣ್ಣುಮಗಳು ದಾಖಲಿಸಿರುವಂತೆ ಅಮಲು ಪದಾರ್ಥವನ್ನು ನೀಡಿ ತಮ್ಮ ದೈಹಿಕ ತೀಟೆಯನ್ನು ತೀರಿಸಿಕೊಂಡು ಹೆಂಗಳೆಯರನ್ನು ಹಿಂಡಿ ಹಿಂಸಿಸುವ ಈ ರಾಘವಾಸುರ ಮತ್ತು ಪಟಾಲಂನ್ನು ಪೊಲೀಸರೊಮ್ಮೆ ಒದ್ದು ವಿಚಾರಿಸಿದರೆ ಅತ್ಯಾಚಾರದ ಜೊತೆಗೆ ಗಾಂಜಾ, ಭಂಗಿಗಳನ್ನೂ ಉಪಯೋಗಿಸುವ ಬಗ್ಗೆ ಈತನ ಪಟಾಲಂನಿಂದಲೇ ಮಾಹಿತಿ ಸಿಗಬಹುದು. ಈತ ಮತ್ತು ಈತನ ಪಟಾಲಂ ರಿಯಲ್ ಎಸ್ಟೇಟ್ ದಂಧೆಗಳಲ್ಲಿ ಕೂಡ ಪಳಗಿದೆ. ತನಿಖೆ ಮಾಡಿದರೆ ಈತನ ಬೇನಾಮಿ ಹೆಸರಲ್ಲಿ, ತಂದೆಯ, ತಂಗಿಯ, ಭಾವನ ಮತ್ತು ಪಟಾಲಂಗಳ ಹೆಸರಲ್ಲಿ ನೂರಾರು ಕೋಟಿ ಆಸ್ತಿ ಸಿಗಬಹುದು.

ಕುತೂಹಲವೆಂದರೆ, ಪ್ರಾಯದ ಹೆಣ್ಣುಗಳಿರುವ ಕುಟುಂಬಕ್ಕೆ ಇವನ ಆಸ್ಥಾನದಲ್ಲಿ ವಿಶೇಷ ಮರ್ಯಾದೆ! ದೈಹಿಕ ತೃಷೆ ತೀರಿಸಿಕೊಳ್ಳುವ ಮೊದಲು ವೀಡಿಯೊ ವ್ಯವಸ್ಥೆ ಕೂಡ ಮಾಡಿಕೊಳ್ಳುವ ಈ ಕಚ್ಚೆ ಹರುಕನ ಪಟಾಲಂ ವಿಡಿಯೋ ತೋರಿಸಿಯೇ ಹೆಣ್ಣುಮಕ್ಕಳನ್ನು ವರ್ಷಗಟ್ಟಲೆ ಹಿಂಸಿಸುತ್ತಾರೆ. ಇವನ ಪಾಖಂಡಿ ಪಟಾಲಂ ಪಕ್ಕಾ ಪಿಂಪ್‌ಗಳಂತೆ ವರ್ತಿಸುತ್ತಿದೆ. ಈ ವಿಡಿಯೋ ಗೇಮ್ ಬಹಳ ವರ್ಷಗಳಿಂದ ನಡೆದಿದ್ದು ಪ್ರಸ್ತುತ ಕೇಸ್‌ನಲ್ಲಿ ಕೂಡ ಬಳಕೆಯಾಗಿದೆ ಅನ್ನಿಸುತ್ತದೆ.

ತಾವೂ ಒಂದು ಹೆಣ್ಣಾಗಿದ್ದು ಹೆಣ್ಣುಮಕ್ಕಳು ಅನುಭವಿಸುವ ಯಾತನೆಯನ್ನು ಸರಿಯಾಗಿ ತಿಳಿಯಬಲ್ಲಿರಿ. ನೀವು ಪತ್ರಿಕಾ ಸಮಾಜದವರೂ ಕೈಬಿಟ್ಟರೆ ಈ ಸಂಸ್ಕಾರಹೀನ ಕಚ್ಚೆಹರುಕ ಹೊಸಕಿಹಾಕಿದ ಇನ್ನೂ ಅನೇಕ ಹೆಣ್ಣುಗಳ ನೋವನ್ನು ಯಾರೂ ತಿಳಿಯಲಾರರು. ದಯವಿಟ್ಟು ಇವರ ವಿರುದ್ಧ ತಮ್ಮ ಹೋರಾಟ ಜೀವನದ ದೊಡ್ಡ ಹೋರಾಟವಾಗಲಿ!

ಇಷ್ಟು ವರ್ಷಗಳ ನಂತರವಾದರೂ ಒಬ್ಬ ಹೆಣ್ಣು ಇವರ ಪಾಖಂಡಿತನವನ್ನು ಬಯಲು ಮಾಡಿರುವುದಕ್ಕೆ ನಾವೆಲ್ಲಾ ಋಣಿಗಳಾಗಬೇಕು! ನೀವೂ ಕೈಬಿಟ್ಟರೆ ನಂತರ ನಡೆಯುವ ದುರಂತಕ್ಕೆ ನಾವೆಲ್ಲರೂ ಹೊಣೆ. ಡಾ. ಎಚ್.ಎಸ್. ಅನುಪಮಾ ಈ ವಾರ ಬರೆದ ದಿಟ್ಟತನದ, ಪ್ರಬುದ್ಧ ಲೇಖನಕ್ಕಾಗಿ ನಿಮಗೂ, ಅವರಿಗೂ ಕೋಟಿಕೋಟಿ ಕೃತಜ್ಞತೆಗಳು! ಆತ್ಮಸಾಕ್ಷಿ ಇರುವ ಜನರೆಲ್ಲರೂ ನಿಮಗೆ ಚಿರಋಣಿಗಳು!

ಇದನ್ನು ಬರೆಯುವ ಹೊತ್ತಿಗೆ ಫೇಸ್‌ಬುಕ್‌ನಲ್ಲಿ "ಈ ಸ್ವಾಮಿಯ ವಿರುದ್ಧ ಕೇಸ್ ಫೈಲ್ ಮಾಡಿದ ವಕೀಲರು, ಸಿಐಡಿ ಇನ್ಸ್‌ಪೆಕ್ಟರ್ ಇಬ್ಬರೂ ರಕ್ತ ವಾಂತಿ ಮಾಡಿಕೊಂಡು ಆಸ್ಪತ್ರೆಗೆ ಸೇರಿಸಲಾಗಿದೆಯಂತೆ" ಎಂದು ಸುದ್ದಿ ಹಬ್ಬಿಸಲಾಗಿದೆ! ಸ್ವಾಮಿಯ ದುಷ್ಟಕೂಟ ಮತ್ತು ಕೆಲ ಅಮಾಯಕ ಅಂಧಭಕ್ತರು ಅವರವರ ಬುದ್ಧಿಮತ್ತೆಯನ್ನು ಅನುಸರಿಸಿ ಇಂತಹ ಅನೇಕ ವದಂತಿಗಳನ್ನು ಹರಿಯಬಿಡುತ್ತಿದ್ದಾರೆ.


ಅದಲ್ಲದೇ, ನಮಗಾಗದ ಕೆಲ ಮಠಗಳು ಈ ಕೇಸ್ ಹಾಕುವಂತೆ ಪ್ರೇರೇಪಿಸಿದ್ದಾರೆ ಎಂದು ಅಂಧಭಕ್ತರನ್ನು ಪ್ರಚೋದಿಸುತ್ತಿದ್ದಾರೆ.

- ಒಬ್ಬ ಹವ್ಯಕ ಸಮಾಜದ ಸದಸ್ಯ

ಮೂಲೆಗುಂಪಾದ ಮಠ ನಿಯಂತ್ರಣ ಕಾಯ್ದೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ ವ್ಯಾಪ್ತಿಗೆ ಮಠಗಳನ್ನು ತರುವ ಸರ್ಕಾರದ 'ಮಠ ನಿಯಂತ್ರಣ ಕಾಯ್ದೆ' ತೀವ್ರ ಪ್ರತಿರೋಧದಿಂದಾಗಿ ಸದ್ದಿಲ್ಲದೇ ಮೂಲೆಗುಂಪಾಗಿದ್ದು ಸರ್ಕಾರದ ಅಸಹಾಯಕತೆಗೆ ಹಿಡಿದ ಕನ್ನಡಿಯಾಗಿ ಹೋಯಿತು.

ಇತ್ತೀಚೆಗೆ ಕೆಲವು ಮಠಮಾನ್ಯಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಇಂತಹ ಮಠಗಳು ನಿಜಕ್ಕೂ ಬೇಕೆ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿರುವ ಅಂದಾಜು ಸಾವಿರಕ್ಕೂ ಹೆಚ್ಚು ದೇವಾಲಯ, ಮಠಗಳಲ್ಲಿ ದಲಿತರಿಗೆ ಪ್ರವೇಶವಿಲ್ಲ ಎನ್ನುವುದು ನೋವಿನ ಸಂಗತಿಯಾಗಿದೆ. ಅದೂ ಸಾಲದು ಎನ್ನುವಂತೆ ರಾಜಾರೋಷವಾಗಿ 'ಪಂಕ್ತಿಭೇದ' ಮಾಡುತ್ತಾ ಜಾತೀಯತೆಯನ್ನು ಆಚರಿಸುತ್ತಿರುವ ಮಠಗಳು, ಮಠಾಧೀಶರೂ ಅವುಗಳ ಬಗ್ಗೆ ಸರ್ಕಾರದ ನಿಸ್ಸಹಾಯಕತೆ ನೋಡಿದರೆ ಪಟ್ಟಭದ್ರ ಹಿತಾಸಕ್ತಿಗಳು ಹೊಂದಿರುವ ಕಬಂಧಬಾಹುಗಳ ಆಳ-ಅಗಲ ಕಲ್ಪನೆಗೂ ನಿಲುಕದಾಗಿದೆ. ಇನ್ನು ಕೆಲವು ಮಠಗಳು ಚುನಾವಣಾ ಸಂದರ್ಭದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವುದು ಇಂದು ಗುಟ್ಟಾಗಿ ಉಳಿದಿಲ್ಲ, ಅಭ್ಯರ್ಥಿಯೊಬ್ಬನ ಗೆಲುವಿನ ನಿರ್ಣಾಯ...




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನು... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ... ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು

...ಾನವನ್ನೂ, ಅಭ್ಯರ್ಥಿಯು ಗೆದ್ದರೆ ಅವನ ಸಚಿವ ಸ್ಥಾನವನ್ನೂ ನಿರ್ಧರಿಸುವ ಹಂತಕ್ಕೆ ತಲುಪಿರುವ ಮಠಗಳು ಇಂದು ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಗಮನಾರ್ಹ ಸಂಗತಿ. ಅಲ್ಲದೆ ಚುನಾಯಿತ ಪ್ರತಿನಿಧಿಗಳು, ಮಂತ್ರಿ ಮಹೋದಯರು ತಮ್ಮ ಬಿಡುವಿಲ್ಲದ ಸಮಯದಲ್ಲೂ ಮಠಗಳಿಗೆ ಆಗಾಗ ಎಡತಾಕುತ್ತಿರುವುದೂ ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ.

ಸಮಾಜದಲ್ಲಿ ನಡೆಯುವ ಓರೆಕೋರೆಗಳನ್ನು ತಿದ್ದಬೇಕಾಗಿದ್ದ ಕೆಲವು ಮಠಗಳು ಹಣ ಮಾಡುವ ದಂಧೆಗೆ ಇಳಿದು ಎಗ್ಗಿಲ್ಲದೇ ಹಣ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆ? ಸಣ್ಣಪುಟ್ಟ ಊರುಗಳಲ್ಲೂ ವಿದ್ಯಾದಾನದ ಹೆಸರಿನಲ್ಲಿ ಸರ್ಕಾರದಿಂದ ಸೌಲಭ್ಯ ಪಡೆದು ಕಾನ್ವೆಂಟ್‌ಗಳನ್ನು ತೆರೆದು ಡೊನೇಷನ್ ಪಡೆದು ಉಳ್ಳವರ ಮಕ್ಕಳನ್ನೇ ಉದ್ಧರಿಸುತ್ತಿರುವುದು ಯಾವ ಪುರುಷಾರ್ಥಕ್ಕೆ? ಇನ್ನು ಅನುದಾನಿತ ಶಾಲೆ, ಕಾಲೇಜುಗಳನ್ನು ಸ್ಥಾಪಿಸಿರುವ ಮಠಾಧೀಶರು ನೇಮಕಾತಿ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಪಡೆಯುತ್ತಿರುವುದು ಇಂದು ಗುಟ್ಟಾಗಿ ಉಳಿದಿಲ್ಲ. ಇಂತಹ ವಿಷಯಗಳ ವಿರುದ್ಧ ಇಂದು ಯಾರೂ ಕೂಡ ಧ್ವನಿ ಎತ್ತುವ ಪರಿಸ್ಥಿತಿ ಇಲ್ಲದಿರುವುದು ಶೋಚನೀಯ ಸಂಗತಿ. ಅಂತಹ ಮಠಗಳು, ಮಠಾಧೀಶರ ಬಗ್ಗೆ ಮಾತನಾಡುವುದು 'ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?' ಎನ್ನುವ ದುಃಸ್ಥಿತಿಯಲ್ಲಿ ಇಂದು ನಾವಿದ್ದೇವೆ.

ಇನ್ನು ವಿರೋಧ ಪಕ್ಷಗಳು ಯಾವುದೇ ಮಸೂದೆಯಾದರೂ ಸರಿ, ಅದನ್ನು ವಿರೋಧಿಸುವುದೇ ತಮ್ಮ 'ಆಜನ್ಮ ಸಿದ್ಧ ಹಕ್ಕು' ಎಂಬಂತೆ ನಡೆದುಕೊಳ್ಳುವುದು ಅವುಗಳ ಅಧಿಕಾರಲಾಲಸೆಯ ದ್ಯೋತಕವೇ ಹೊರತು ಮತ್ತೇನೂ ಅಲ್ಲ. ಏಕೆಂದರೆ ಈ ನೆಪದಲ್ಲಾದರೂ ಮಠಗಳನ್ನು ಓಲೈಸಿಕೊಂಡು ಮುಂದಿನ ಚುನಾವಣೆಯಲ್ಲಾದರೂ ಗೆದ್ದು ಅಧಿಕಾರದ ಗದ್ದುಗೆ ಏರಬೇಕು ಎಂಬುದೇ ಅವುಗಳ "ಒನ್ ಪಾಯಿಂಟ್ ಅಜೆಂಡಾ". ಇದು ದೇಶದ ಪ್ರಗತಿಗೆ ಖಂಡಿತವಾಗಿಯೂ ಮಾರಕವೇ ಸರಿ. ಅಷ್ಟಕ್ಕೂ ಸರ್ಕಾರವೇನೂ ಕಾಯ್ದೆ ರೂಪಿಸಿದ ಮಾತ್ರಕ್ಕೆ ಯಾವುದೇ ಮಠಗಳ ಮೇಲೆ ದುಂಡಾವರ್ತಿಯಿಂದ ನಡೆದುಕೊಳ್ಳಲು ಸಾಧ್ಯವಿಲ್ಲ. ಅದಕ್ಕೂ ನೀತಿ ನಿಯಮಗಳು ಇರುತ್ತವೆ. ಇಂತಹ ಸಂದರ್ಭದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ರೀತಿಯಲ್ಲಿ ಚರ್ಚಿಸಿ ಮಸೂದೆ ರೂಪಿಸುವಲ್ಲಿ



ಸಹಕರಿಸಬೇಕಾಗಿತ್ತು. ಆದರೆ ಅದನ್ನು ಭಾವನಾತ್ಮಕ ವಿಷಯವಾಗಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ್ದು ನಾಚಿಕೆಗೇಡಿನ ಸಂಗತಿ.

ಸ್ವಾಮೀಜಿಯೊಬ್ಬರು ದೆಹಲಿಗೆ ನಿಯೋಗ ಹೋಗಿ ಮುಖ್ಯಮಂತ್ರಿಯನ್ನೇ ಬದಲಾಯಿಸುವ ಎಚ್ಚರಿಕೆ ನೀಡಿದ್ದು, ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಮಸೂದೆ ಹಿಂಪಡೆಯುವಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಿದ್ದು ಯಾವುದರ ದ್ಯೋತಕ? ಅಲ್ಲದೆ ಮಂತ್ರಿ ಮಹೋದಯರು ಭ್ರಷ್ಟಾಚಾರದ ಆಪಾದನೆಗೆ ಗುರಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದಾಗ ಸ್ವಾಮೀಜಿಗಳು ಜೈಲಿಗೆ ಭೇಟಿ ನೀಡಿ ಉಭಯಕುಶಲೋಪರಿ ವಿಚಾರಿಸುವುದು, ಬೀದಿಗಿಳಿದು ಹೋರಾಟ ಮಾಡುವುದು ಯಾವ, ಯಾವ ಹಿತಾಸಕ್ತಿಗಾಗಿ? ಇಂತಹವರಿಂದ ಸಮಾಜಕ್ಕೆ ರವಾನೆಯಾಗುವ ಸಂದೇಶವಾದರೂ ಏನು? ಕುಂಬಳಕಾಯಿ ಕಳ್ಳ ಎಂದಾಗ ಪ್ರಾಮಾಣಿಕವಾಗಿದ್ದವರು ಹೆಗಲು ಮುಟ್ಟಿ ನೋಡಿಕೊಳ್ಳಬಾರದು ಅಷ್ಟೆ. ಇಲ್ಲವಾದರೆ ಅತ್ಯಾಚಾರದ ಆಪಾದನೆಗೆ ಒಳಗಾದ ಸ್ವಾಮೀಜಿಯೊಬ್ಬರು ನಿರೀಕ್ಷಣಾ ಜಾಮೀನಿಗೆ ದುಂಬಾಲು ಬಿದ್ದಷ್ಟೇ ಸಮನಾಗಿ ಕಾಣುತ್ತದೆ.

ಮಠದ ನಿಯಂತ್ರಣ ಮಸೂದೆ ವಿರುದ್ಧ ಧ್ವನಿ ಎತ್ತಿರುವ ರಾಜಕೀಯ ಪಕ್ಷಗಳಾಗಲೀ, ಕೆಲವು ಮಠಾಧೀಶರಾಗಲೀ 'ರಾಜ್ಯದ ಹೆಸರಾಂತ ಮಠಗಳಲ್ಲಿ ಒಂದಾಗಿರುವ 'ಶ್ರೀರಾಮಚಂದ್ರಾಪುರಮಠದಲ್ಲಿ' ನಡೆದಿದೆ ಎನ್ನಲಾಗಿರುವ ಅತ್ಯಾಚಾರದ ಘಟನೆ ಬಗ್ಗೆ ಇದುವರೆಗೂ ಮೌನವಾಗಿರುವ ಉದ್ದೇಶವಾದರೂ ಏನು? ಜವಾಬ್ದಾರಿಯುತ ಸ್ಥಾನದಲ್ಲಿರುವ ಇದು ಜನ ನ್ಯಾಯಾಧೀಶರೇ ವಿವಿಧ ಕಾರಣ ನೀಡಿ ಪ್ರಕರಣದಿಂದ ಹಿಂದೆ ಸರಿಯುತ್ತಿರುವುದು ಶ್ರದ್ಧಾವಂತರ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟರೆ ತಪ್ಪೇನಿಲ್ಲ!?

- ಮಂಗೋಟೆ ಕೆ. ಶಿವಕುಮಾರ್, ಭದ್ರಾವತಿ



ಬಾಲಿವುಡ್‌ನಲ್ಲಿ ಮೆರೆದಾಡುತ್ತಿರುವ ವಿದೇಶಿ ವೈಯ್ಯಾರಿಯರು!

ಬಾಲಿವುಡ್‌ನಲ್ಲಿ ಈಗ ವಿದೇಶಿ ಬೆಡಗಿಯರದೇ ಬೊಬ್ಬೆ! ಈ ವಲಸೆ ಹಕ್ಕಿಗಳ ನಿರ್ವಾಣ ನೈಪುಣ್ಯದ ಎದುರು ಸ್ವದೇಶಿ ಸುಂದರಿಯರು ಸಪ್ಪೆಯಾಗಿಬಿಟ್ಟಿದ್ದಾರೆ. ಹಿಂದಿ ಸಿನಿಮೋದ್ಯಮ ಅದ್ಯಾಕೋ ಪರದೇಶಿ ಬಿನ್ನಾಣಗಿತ್ತಿಯರತ್ತಲೇ ಹೆಚ್ಚೆಚ್ಚು ಆಕರ್ಷಿತವಾಗುತ್ತಿದೆ. ಒಂದೆಡೆ ಭಾರತೀಯ ತಾರೆಗಳು ಹಾಲಿವುಡ್ ವ್ಯಾಮೋಹಕ್ಕೆ ಬಿದ್ದು ಅತ್ತ ಹೆಜ್ಜೆ ಹಾಕುತ್ತಿದ್ದರೆ, ಇತ್ತ ಬಾಲಿವುಡ್‌ನಲ್ಲಿ ಹೊರದೇಶದ ಹುಡುಗಿಯರು ಸಾಮ್ರಾಜ್ಯ ಸ್ಥಾಪಿಸುತ್ತಿದ್ದಾರೆ.

ಹೀಗೆ ಸೊಂಟ ಬಳುಕಿಸುತ್ತ-ಮೈಮಾಟ ಪ್ರದರ್ಶಿಸುತ್ತ ಹಿಂದಿ ಚಿತ್ರರಂಗಕ್ಕೆ ಲಗ್ಗೆ ಇಟ್ಟವರೆಲ್ಲರೂ ಬಚಾವಾಗಿಲ್ಲ ಬಿಡಿ. ಬಹಳಷ್ಟು ಬೆಡಗಿಯರು ಹೀಗೆ ಬಂದು ಐಟಮ್ ಗರ್ಲ್ ಎಂಬ ಬಿರುದು ಪಡೆದು ಪಡ್ಡೆಗಳ ಬೆಚ್ಚಗೆ ಮಾಡಿ ಹಾಗೇ ಹೊರಟುಹೋಗಿದ್ದಾರೆ. ಆದರೆ ಕತ್ರಿನಾ ಕೈಫ್, ಜಾಕಲಿನ್ ಫರ್ನಾಂಡಿಸ್, ಸನ್ನಿ ಲಿಯೋನ್‌ನಂಥ ಕೆಲವೇ ಕೆಲವು ಚೆಂದುಳ್ಳಿ ಚೆಲುವೆಯರು ಒನಪು-ವಯ್ಯಾರದ ಜತೆಜತೆಗೇ ಪ್ರತಿಭೆಯೂ ಪ್ರದರ್ಶಿಸಿ ಗಟ್ಟಿ ನೆಲೆಯೂರಿದ್ದಾರೆ.

ಬಾಲಿವುಡ್‌ನ ಬಂಡವಾಳಿಗರ ಮತ್ತು ರಿಸ್ಕಿ ನಿರ್ದೇಶಕರ ಗಲ್ಲಾಪೆಟ್ಟಿಗೆಯ ಲಕ್ಷ್ಮೀಯರಂತಾಗಿರುವ ಮುಂಚೂಣಿಯ ಪಂಚಕನ್ನೆಯ ಪ್ರೋಫೈಲ್ ರೋಚಕವಾಗಿದೆ. ಬಿಟೌನ್‌ನಲ್ಲಿ ಟಾಪ್ ಫೈವ್ ಆಗಿರುವ ಹೊರನಾಡಿನ ಅಭಿನೇತ್ರಿಯರಿವರು...

ಕತ್ರಿನಾ ಕೈಫ್

ತೀರಾ ಮೊನ್ನೆ-ಮೊನ್ನೆ ತನಕ ಬಾಲಿವುಡ್‌ನ ನಂಬರ್ ಒನ್ ಹೀರೋಯಿನ್ ಎಂಬ ಕಿರೀಟ ಮುಡಿಯಲ್ಲಿಟ್ಟುಕೊಂಡಿದ್ದ ಈಕೆ ಭಾರತೀಯ ಸಂತತಿಯ ಇಂಗ್ಲೆಂಡ್ ಚೆಲುವೆ. ವಿದೇಶಿ ಮೂಲದ ಬಾಲಿವುಡ್ ನಟಿಯರಲ್ಲಿ ತುಂಬ ಅದೃಷ್ಟವಂತ ಹುಡುಗಿ ಈಕೆ. ಆರಂಭದಲ್ಲಿ ಕ್ಯಾಟ್‌ಗೆ ಡ್ಯಾನ್ಸ್ ಬರೋದಿಲ್ಲ; ರೋಮಾನ್ಸ್ ನಟನೆ ಗೊತ್ತಿಲ್ಲ, ಬರೀ ದಂತದ ಬೊಂಬೆಯೆಂಬ ಟೀಕೆ-ಟಿಪ್ಪಣಿಯ ಶರಾ ಬಾಲಿವುಡ್ ಸಿನಿಮೋದ್ಯಮ ಪಂಡಿತರು ಬರೆದುಬಿಟ್ಟಿದ್ದರು. ಈಗಾಕೆ ಎ-ಲಿಸ್ಟ್ ನಟೀಮಣಿ. ಬ್ಯಾಡ್ ಬಾಯ್ ಸಲ್ಲು ಎಂದರೆ ಪ್ರಾಣ ಬಿಡುತ್ತಿದ್ದ ಕ್ಯಾಟ್ ಆ ಕಾರಣಕ್ಕೇ ದೊಡ್ಡ ಸುದ್ದಿ ಕೇಂದ್ರ ಆಗಿದ್ದಳು. ಆತನೊಂದಿಗೆ ಕ್ಯಾಟ್ ನಡೆಸಿದ್ದ ಡೇಟಿಂಗ್ ಸುದ್ದಿ ಮಾಡಿದ ಹಾವಳಿಗೆ ಬಾಲಿವುಡ್ ಬೆಚ್ಚಿಬಿದ್ದಿತ್ತು. ಆದರೆ ಕತ್ರಿನಾಗೆ ಈಗ ರಣಬೀರ್ ಕಪೂರ್ ಜತೆಗಾರನಾಗಿದ್ದಾನೆ. ಸಲ್ಲು ಜತೆಗಿನ ಸಂಬಂಧ ಮುರಿದುಬಿದ್ದಾಗ ಹತಾಶಳಾಗಿದ್ದ ಈಕೆ ಸಾವರಿಸಿಕೊಂಡು ರಣಬೀರ್‌ನ ತೆಕ್ಕೆಗೆ ಬಿದ್ದಳು. ಸದ್ಯದಲ್ಲೇ ಈ ಜೋಡಿ ಪಾಣಿಗ್ರಹಣ ಮಾಡಿಕೊಳ್ಳುವ ಸುದ್ದಿ ಹಬ್ಬಿದೆ.

ಯಾನಾ ನರ್ಗೀಸ್ ಸನ್ನಿ

ಬಾಲಿವುಡ್ ಬೆಚ್ಚಗಾಗಿಸಿದ್ದ ನಟಿ ಯಾನಾ ಗುಪ್ತಾ ಮೂಲ ಜಕೋಸ್ಲೋವಾಕಿಯಾ. ಐಟಮ್ ಹಾಡುಗಳ ಮೂಲಕವೇ ಮಾರ್ಕೆಟ್ ಕುದುರಿಸಿಕೊಂಡ ಯಾನಾ ಪಡ್ಡೆಗಳ ಫೇವರಿಟ್. "ಬಾಬೂಜಿ ಜರ ಧೀರೇ ಚಲೋ..." ಎಂದು ಕುಣಿದು ಕುಪ್ಪಳಿಸಿದ ಈಕೆಯ ಮಾಟ-ಮೋಡಿಗೆ ಮುದುಕರೂ ಎದ್ದು ಕೂತಿದ್ದರು! ತನ್ನ ದೇಹಸಿರಿಯ ಮೂಲಕ ಹಿಂದಿ ಚಿತ್ರರಂಗದಲ್ಲಿ ಛಾಪು ಮೂಡಿಸಿದ ಕೀರ್ತಿ ಯಾನಾಳದು.

'ನೀಲಿ ರಾಣಿ' ಎಂದೇ ಚಿರಪರಿಚಿತಳಾದವಳು ಸನ್ನಿ ಲಿಯೋನ್. ಭಾರತೀಯ ಮೂಲದ ಕೆನಡಿಯನ್ ಬೆಚ್ಚಮ್ಮ ಈಕೆ. ಬಿಗ್‌ಬಾಸ್ ರಿಯಾಲಿಟಿ ಶೋ ಮೂಲಕ ಭಾರತೀಯರಿಗೆ ಹುಚ್ಚೆಬ್ಬಿಸಿದ ಸನ್ನಿ ಈಗ ಬಾಲಿವುಡ್‌ಗೆ ತುಂಬ ಬಿರುಸಿನ ಮಾದಕ ಮಣಿ!! ಆಕೆಯ ಎಕ್ಸ್‌ಪೋಸ್ ಪರಿಗೇ ದೊಡ್ಡ ಅಭಿಮಾನಿ ಬಳಗ ಸೃಷ್ಟಿಯಾಗಿದೆ. 'ಜಿಸ್ಮ್-2' ಚಿತ್ರದ ಮೂಲಕ ಹಿಂದಿ ಚಿತ್ರರಂಗಕ್ಕೆ ಎಂಟ್ರಿ ಹೊಡೆದ ಸನ್ನಿ ರಸಿಕರ ಪಾಲಿನ ಹಾಟ್ ಫೇವರಿಟ್.

ಸನ್ನಿಯಂಥದೇ ಗ್ಲಾಮರ್ ಗೊಂಬೆ ನರ್ಗೀಸ್ ಫಕ್ರಿ. ಪಾಕಿಸ್ತಾನ ಮೂಲದ ಅಮೆರಿಕನ್ ನಟಿ ಈ ನರ್ಗೀಸ್. ಸದ್ಯಕ್ಕೆ ಬಾಲಿವುಡ್‌ನ ರಾಕಿಂಗ್ ತಾರೆ. ಮೈಮಾಟವೇ ಬಂಡವಾಳವಾದ ಈಕೆ ಕೈಲೀಗ ಹಲವು ಹಿಂದಿ ಸಿನಿಮಾಗಳಿವೆ. 'ರಾಕ್ ಸ್ಟಾರ್' ಎಂಬ ಚಿತ್ರದಲ್ಲಿ ರಣಬೀರ್ ಕಪೂರ್ ಜತೆ ನಟಿಸುವುದರೊಂದಿಗೆ ಬಾಲಿವುಡ್ ಪ್ರವೇಶಿಸಿದ್ದ ನರ್ಗೀಸ್‌ಗೆ ಒನಪು-ವಯ್ಯಾರ ದೊಡ್ಡ ಅಭಿಮಾನಿ ಬಳಗ ಕಟ್ಟಿಕೊಟ್ಟಿದೆ.

ಜಾಕಲಿನ್ ಫರ್ನಾಂಡಿಸ್

ಚಳಿ-ಬಿಸಿ ಯಾವುದಕ್ಕೂ ಕೇರ್ ಮಾಡದೆ ಬಾಲಿವುಡ್‌ನಲ್ಲಿ ಕಿಚ್ಚು ಹಬ್ಬಿಸಿದ ಮತ್ತೊಬ್ಬ ನಟಿಮಣಿ ಎಂದರೆ- ಜಾಕಲಿನ್ ಫರ್ನಾಂಡಿಸ್. ತನ್ನ ಸಿನಿಮೋದ್ಯಮ ಬದುಕಿನ ಪ್ರವರ್ಧಮಾನ ಸ್ಥಿತಿಯಲ್ಲಿರುವ ಈಕೆಗೆ ಮರುಜೀವ ಕೊಟ್ಟವನು ಮತ್ತದೇ ಕೊಳಕು ಹುಡುಗ ಸಲ್ಲು. ಜಾಕಲಿನ್ ಮೂಲ ಶ್ರೀಲಂಕಾ. ಆ ದೇಶದ ಮಿಸ್ ಯುನಿವರ್ಸ್ ಸ್ಪರ್ಧೆಯ 2006ರ ಪ್ರಶಸ್ತಿ ವಿಜೇತೆ ಜಾಕೆಲಿನ್. ಈ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಾಗ ಆಕೆಗೆ ಬಾಲಿವುಡ್ ಕೈಬೀಸಿ ಕರೆಯಿತು. ಸುಭಾಷ್ ಘಾಯ್ ನಿರ್ದೇಶನದ 'ಅಲಾದೀನ್' ಸಿನಿಮಾದ ಮೂಲಕ ಬಾಲಿವುಡ್ ನಟಿಯಾದ ಜಾಕಲಿನ್‌ಗೆ ಬ್ರೇಕ್ ನೀಡಿದ್ದು ಸಲ್ಲು ಜತೆ ನಟಿಸಿದ್ದ 'ಕಿಕ್' ಚಿತ್ರ! ಈಗಾಕೆ ಬಾಲಿವುಡ್‌ನ ಸೆಲಿಬ್ರಿಟಿ ನಟಿ!!

● ನಹುಷ

ಕಡೆಗೂ ಸೆಟ್ಟೇರಿದ 'ದೊಡ್ಮನೆ ಹುಡುಗ'

ಪವರ್ ಸ್ಟಾರ್ ಪುನೀತ್ ಅಭಿನಯದ, ದುನಿಯಾ ಸೂರಿ ನಿರ್ದೇಶನದ 'ದೊಡ್ಮನೆ ಹುಡುಗ' ಚಿತ್ರಕ್ಕೆ ಅಂತೂಇಂತೂ ಅಧಿಕೃತವಾಗಿ ಚಾಲನೆ ಸಿಕ್ಕಿದೆ. ಹೋಳಿ ಹಬ್ಬದಂದು ಡಾ.ರಾಜ್‌ಕುಮಾರ್ ಅವರ ನಿವಾಸದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಚಿತ್ರಕ್ಕೆ ಕ್ಲಾಪ್ ಮಾಡುವ ಮೂಲಕ ಚಿತ್ರದ ಮುಹೂರ್ತ ಅದ್ದೂರಿಯಾಗಿ ನಡೆಯಿತು.

ಒಂದು ಊರಿನ ದೊಡ್ಮನೆ ಕುಟುಂಬದ ಮಗನಾಗಿ ಪುನೀತ್ ಅಭಿನಯಿಸುತ್ತಿದ್ದಾರಂತೆ. 'ಹುಡುಗ್ರು' ನಂತರ 'ದೊಡ್ಮನೆ ಹುಡುಗ' ಚಿತ್ರದಲ್ಲಿ ರಾಧಿಕಾ ಪಂಡಿತ್ ಮತ್ತೊಮ್ಮೆ ಪುನೀತ್ ಜೊತೆ ನಟಿಸುತ್ತಿದ್ದಾರೆ. ಎರಡು ವಿಭಿನ್ನ ಶೇಡ್‌ಗಳಲ್ಲಿ ರಾಧಿಕಾ ಪಂಡಿತ್ ಕಾಣಿಸಿಕೊಳ್ಳುತ್ತಾರಂತೆ. ಅಂದಹಾಗೆ 'ದೊಡ್ಮನೆ' ಕುಟುಂಬದ ದೊರೆಯಾಗಿ ರೆಬೆಲ್ ಸ್ಟಾರ್ ಅಂಬರೀಷ್ ಅಭಿನಯಿಸುತ್ತಿದ್ದಾರೆ. ವಿಶೇಷ ಪಾತ್ರಕ್ಕೆ ಭಾರತಿ ವಿಷ್ಣುವರ್ಧನ್ ಬಣ್ಣ ಹಚ್ಚಲಿದ್ದಾರೆ. 'ದೊಡ್ಮನೆ ಹುಡುಗ' ಚಿತ್ರದ ಶೂಟಿಂಗ್ ಶುರುವಾಗಿದ್ದು ಬೆಂಗಳೂರು, ಮೈಸೂರು ಸೇರಿದಂತೆ ಅನೇಕ ಕಡೆಗಳಲ್ಲಿ ಚಿತ್ರೀಕರಣ ನಡೆಯುತ್ತಿದೆ. ●



ಸಿನಿಮಾಗೆ ಬ್ರ್ಯಾಂಡ್ ಅಂಬಾಸಿಡರ್





ವಹಾರಂಕಟ್ಟೆಯಲ್ಲಿ ಉತ್ಪನ್ನಗಳ ಪ್ರಚಾರಕ್ಕೆ ಬ್ರ್ಯಾಂಡ್ ಅಂಬಾಸಿಡರ್ ಇರುತ್ತಾರೆ ಅಂತ ನಾವು ನೀವೆಲ್ಲ ಕೇಳಿದ್ವಿ, ನೋಡಿದ್ವಿ. ಆದರೆ ಗಾಂಧಿನಗರದ ಮಹಾನುಭಾವ ನಿರ್ದೇಶಕ ಆರ್.ಚಂದ್ರು ಈಗ ತಮ್ಮ 'ಮಳೆ' ಚಿತ್ರದ ಪ್ರಚಾರಕ್ಕೆ ಅಂತಲೇ ಓರ್ವ ರಾಯಭಾರಿಯನ್ನು ನೇಮಿಸಿದ್ದಾರಂತೆ.


"ನಾವು ಚಿತ್ರಕ್ಕೆ ಹಾಕಿದ ಶ್ರಮ ಸಾರ್ಥಕ ಆಗಬೇಕೆಂದರೆ ನಾವು ಮಾಡಿದ ಚಿತ್ರ ಜನರಿಗೆ ತಲುಪಬೇಕು. ಆದರೆ ತಲುಪಿಸುವ ಅನೇಕ ಮಾರ್ಗಗಳು ಈಗ ದುಬಾರಿಯಾಗಿವೆ. ಜೊತೆಗೆ ಸಿನಿಮಾ ರಿಲೀಸ್ ಆಗುತ್ತಿರುವ ವಿಷಯ ಜನರಿಗೆ ತಲುಪಿಸಲು ಸಾಕಷ್ಟು ಸಾಹಸ ಪಡಬೇಕಾಗಿದೆ. ಹೀಗಾಗಿಯೇ ಈ ಯೋಜನೆ" ಅಂತಾರೆ ಆರ್.ಚಂದ್ರು.

ತಮ್ಮ ಸಿನಿಮಾದ ಪ್ರಚಾರಕ್ಕೆ ರಾಯಭಾರಿ ಆಗಿ ನಟಿ ರೋಹಿಣಿ ಸಿಂಗ್ ಅವರನ್ನು ಚಂದ್ರು ನೇಮಕ ಮಾಡಿದ್ದಾರಂತೆ. ಯಾರು ಈ "ರೋಹಿಣಿ ಸಿಂಗ್" ಅಂತ ತಲೆ ಕೆಡಿಸಿಕೋ ಬೇಡಿ ಪ್ಲೀಸ್, ಆಕೆ ಬೇರೆ ಯಾರೂ ಅಲ್ಲ, ರಿಷಿಕಾ ಸಿಂಗ್ ಅನ್ನೊ ಹೆಸರನ್ನ ಈಗ ರೋಹಿಣಿ ಸಿಂಗ್ ಅಂತ ಬದಲಾಯಿಸಿಕೊಂಡಿರುವ ನಟಿ. ಅರೇ ಯಾರು ಈ ರಿಷಿಕಾ ಸಿಂಗ್ ಅಂತಲೂ ಮತ್ತೆ ತಲೆ ಕೆಡಿಸಿಕೋ ಬೇಡಿ. ಈ ಹಿಂದೆ ಒಂದೆರಡು ಫ್ಲಾಪ್ ಸಿನಿಮಾಗಳನ್ನು ಮಾಡಿ ಅವಕಾಶಕ್ಕಾಗಿ ಕಾದುಕೂತಿರುವ ಭಯಂಕರ ನಟಿ. ಈಕೆ ಯಾರು ಅಂತಾನೇ ಜನರಿಗೆ ಗೊತ್ತಿಲ್ಲದೆ ಇರುವಾಗ ಈ ನಟಿಯ 'ಮಳೆ' ಸಿನಿಮಾದ ಪ್ರಚಾರಕ್ಕೆ ರಾಯಭಾರಿಯಾಗಿ ನೇಮಿಸುವುದರಿಂದ ಯಾವ ರೀತಿ ಚಿತ್ರಕ್ಕೆ ಅನುಕೂಲ ಆಗುತ್ತದೋ ಕಾದು ನೋಡಬೇಕು ಎಂದು ಗಾಂಧಿನಗರದ ಪಂಡಿತರು ಮಾತಾಡುತ್ತಿದ್ದಾರೆ.




ಯಶ್-ರಾಧಿಕಾ ಪಂಡಿತ್ ಲವ್ವಿ ಡವ್ವಿ

ಮೊನ್ನೆಯಷ್ಟೆ 31ನೇ ವಸಂತಕ್ಕೆ ಕಾಲಿಟ್ಟ ಕನ್ನಡದ ಮೋಹಕ ನಟಿ ರಾಧಿಕಾ ಪಂಡಿತ್ ತಮ್ಮ ಹುಟ್ಟುಹಬ್ಬವನ್ನು ಈ ಸಲ ತಮ್ಮ ಮನೆಯಲ್ಲಿ ಪಾರ್ಟಿ ಮಾಡುವ ಮೂಲಕ ವಿಶೇಷವಾಗಿ ಸ್ನೇಹಿತರೊಂದಿಗೆ ಆಚರಿಸಿಕೊಂಡರಂತೆ. "ನನಗೂ ಒಬ್ಬ ಗೆಳೆಯ ಬೇಕು" ಎಂದು ಹಾಡುತ್ತಿದ್ದ ರಾಧಿಕಾ ಪಂಡಿತ್ ಈ ಪಾರ್ಟಿಗೆ ಚಿತ್ರರಂಗದಿಂದ ಒಬ್ಬ ವಿಶೇಷ ಗೆಳೆಯನನ್ನು ಆಹ್ವಾನಿಸಿದ್ದರಂತೆ. ಆ ಗೆಳೆಯ ಬೇರ್ಯಾರು ಅಲ್ಲ; ಚಿತ್ರರಂಗದ ರಾಜಾಹುಲಿ ರಾಕಿಂಗ್ ಸ್ಟಾರ್ ಯಶ್. ಮೋಹಕ ನಟಿಗೆ ಸ್ಪೆಷಲ್ ಗಿಫ್ಟ್ ಅನ್ನು ಕೊಟ್ಟರಂತೆ ಯಶ್. ಇದರಿಂದ ಮೇಡಂ ಸಿಕ್ಕಾಪಟ್ಟೆ ದಿಲ್‌ಖುಷ್ ಆಗಿದ್ದಾರಂತೆ.



ಗೋವಾದಲ್ಲಿ ಯಶ್ ಜೊತೆ ಹೊಸ ವರ್ಷವನ್ನು ಆಚರಿಸಿದ್ದ ನಟಿ ತನ್ನ ಹುಟ್ಟುಹಬ್ಬವನ್ನು ಕೂಡ ಯಶ್ ಜೊತೆಯಲ್ಲೆ ಆಚರಿಸಿದ್ದರಿಂದ ಇವರಿಬ್ಬರ ನಡುವೆ ಏನೋ ಲವ್ವಿ ಡವ್ವಿ ನಡೀತಾಯಿದೇ ಎಂದು ಗಾಂಧೀನಗರದ ಗಲ್ಲಿಗಲ್ಲೀಲಿ ಗಾಸಿಪ್‌ಗಳು ಕೇಳಿಬರುತ್ತಿವೆ.

ಚಾಲೆಂಜಿಂಗ್ ಸ್ಟಾರ್ ಬದುಕಿನ ನಿಜವಾದ ದರ್ಶನ



ವಿವಾದಗಳು ಈ ನಟನನ್ನು ಅರಸಿ ಬರುತ್ತವೋ ಇಲ್ಲಾ ಈ ನಟನೇ ವಿವಾದವನ್ನು ಹುಡುಕಿಕೊಂಡು ಹೋಗುತ್ತಾರೊ ಗೊತ್ತಿಲ್ಲ, ಅರೇ ಯಾರು ಈ ನಟ ಅಂತ ಅಂದುಕೊಂಡ್ರಿ? ನಾವು ಈಗ ಹೇಳುತ್ತಿರುವುದು ಕನ್ನಡದ 'ಚಾಲೆಂಜಿಂಗ್ ಸ್ಟಾರ್ ದರ್ಶನ್' ಕತೆ.

'ಚಾಲೆಂಜಿಂಗ್ ಸ್ಟಾರ್' ಅನ್ನೊ ಬದಲು 'ಕಾಂಟ್ರವರ್ಸಿ ಕಿಂಗ್' ಅನ್ನೋದು ಹೆಚ್ಚು ಸೂಕ್ತ ಅನ್ನುತೆ ಈ ನಟನಿಗೆ. ಈಗ ಚಾಲೆಂಜಿಂಗ್ ಸ್ಟಾರ್ ದರ್ಶನ್‌ರ ಹೊಸ ವಿವಾದ ಏನಪ್ಪ ಅಂದ್ರೆ ಅವರ ತೋಟದಲ್ಲಿ ಕೆಲಸಕ್ಕೆ ಇದ್ದ ಮಹೇಶ್ ಎಂಬ ವ್ಯಕ್ತಿಯ ಆರೋಗ್ಯ ಕುರಿತಾದ್ದು.

ಮಹೇಶ್ ದಂಪತಿಗಳು ಕಳೆದ ಐದು ವರ್ಷಗಳಿಂದ ದರ್ಶನ್ ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಎರಡು ತಿಂಗಳ ಹಿಂದೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಎತ್ತಿನ ಕೊಂಬು ಮಹೇಶ್ ಅವರ ಕಣ್ಣಿಗೆ ತಾಗಿ ಕಣ್ಣು ಕಳೆದುಕೊಂಡರಂತೆ. ಇದರೊಂದಿಗೆ ಮಹೇಶ್ ಅವರಿಗೆ ಲಕ್ವ ಕೂಡ ಹೊಡೆದಿದೆಯಂತೆ. ಕಣ್ಣು ಹೋಗಿ ಅದರ ಜೊತೆಗೆ ಕೈಕಾಲು ಸ್ವಾಧೀನವನ್ನ ಕಳೆದುಕೊಂಡ ಮಹೇಶ್‌ರ ಚಿಕಿತ್ಸೆಗೆ ನಮ್ಮ ಚಾಲೆಂಜಿಂಗ್ ಸ್ಟಾರ್ ನಯಾ ಪೈಸ ಸಹಾಯ ಮಾಡಲಿಲ್ಲವಂತೆ. ಧನಸಹಾಯ ಕೇಳಿಕೊಂಡು ಮಹೇಶ್ ಅವರ ಪತ್ನಿ ದರ್ಶನ್ ಮನೆಗೆ ಹೋದರೆ ದರ್ಶನ್ ಹೊರಗಟ್ಟಿದರಂತೆ. ಒಂದು ಕಡೆ ಕೆಲಸ ಮಾಡುವ ಪರಿಸ್ಥಿತಿಯಲ್ಲಿಲ್ಲದೆ ಇನ್ನೊಂದು ಕಡೆ ಚಿಕಿತ್ಸೆಗೂ ಹಣ ಇಲ್ಲದೇ ಮಹೇಶ್ ದಂಪತಿ ಕಷ್ಟ ಅನುಭವಿಸುತ್ತಿದ್ದಾರಂತೆ.

ಒಟ್ಟಿನಲ್ಲಿ ಚಿತ್ರರಂಗದಲ್ಲಿ ನಾಯಕನಾದ ಚಾಲೆಂಜಿಂಗ್ ಸ್ಟಾರ್ ದರ್ಶನ್ ನಿಜಜೀವನದಲ್ಲಿ ಖಳ ನಾಯಕನ ರೀತಿ ವರ್ತಿಸುತ್ತಿರುವುದು ದುರದೃಷ್ಟ ಸಂಗತಿ.

ಮತ್ತೆ ಚಲಾವಣೆಗೆ ಬಂದ 'ಒಂದು ರೂಪಾಯಿ'

ಇದೇನಪ್ಪ ಒಂದು ರೂಪಾಯಿ ಈಗ ಚಲಾವಣೆಗೆ ಬಂತಾ ಅಂತ ಅಂದುಕೊಳ್ಳಬೇಡಿ. ನಾವು ಈಗ ಹೇಳುತ್ತಿರುವುದು ದಯಾಳ್ ನಿರ್ದೇಶನದ 'ಒಂದು ರೂಪಾಯಿ' ಸಿನಿಮಾದ ಬಗ್ಗೆ. ಮೂರು ವರ್ಷಗಳ ಹಿಂದೆ ಸೆಟ್ಟೇರಿದ ಚಿತ್ರ ಆಡಿಯೋ ರಿಲೀಸ್‌ತನಕ ಬಂದು ಸೈಲೆಂಟ್ ಆಗಿತ್ತು. ಈಗ ವಿಷಯ ಏನಪ್ಪ ಅಂದರೆ ಈ ಸಿನಿಮಾ ಮತ್ತೆ ಸದ್ದು ಮಾಡಿ ಚಲಾವಣೆಗೆ ಬರುತ್ತಿದೆ. ಸ್ವಾತಿ ಸಿನಿಮಾಸ್‌ನ ಲೋಕೇಶ್ ರೆಡ್ಡಿಯವರಿಂದ ದಯಾಳ್ ಈ ಸಿನಿಮಾದ ಹಕ್ಕನ್ನು ಪಡೆದು ತಮ್ಮ ಡಿ-ಪಿಕ್ಚರ್ಸ್ ಸಂಸ್ಥೆಯಿಂದ ನಾಣ್ಯಕ್ಕೆ ಚಾಲನೆಯನ್ನು ಕೊಡಲಿದ್ದಾರಂತೆ.


ಒಟ್ಟಿನಲ್ಲಿ ಒಂದು ರೂಪಾಯಿಯನ್ನು ಟಾಸ್ ಮಾಡುತ್ತಿರುವ ದಯಾಳ್ ಅದನ್ನು ಚಿತ್ರಮಂದಿರಕ್ಕೆ ತರಲು ಇನ್ನು ಎಷ್ಟು ವರ್ಷ ತಗೊತಾರೋ ಎಂಬುದನ್ನು ಕಾದುನೋಡಬೇಕಿದೆ.

ಮತ್ತೆ "ಓಂ"ಕಾರ ಹಾಡಲಿರುವ ಶಿವಣ್ಣ


ರಿಯಲ್ ಸ್ಟಾರ್ ಉಪೇಂದ್ರ ನಿರ್ದೇಶನದ, ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಅಭಿನಯದ 'ಓಂ' ಚಿತ್ರ ಇದೀಗ ಸ್ಯಾಂಡಲ್‌ವುಡ್‌ನ... ಹೊಸ ದಾಖಲೆ ಸೃಷ್ಟಿಸಿದೆ. ಹೌದು, ಸ್ಯಾಂಡಲ್‌ವುಡ್‌ನಲ್ಲಿ ಸುನಾಮಿ ಎಬ್ಬಿಸಿದ್ದ 'ಓಂ' ಸಿನಿಮಾ ಮಾಡಿರುವ ಹೊಸ ದಾಖಲೆ ಅಂದರೆ ಬರೋಬ್ಬರಿ 551ನೇ ಬಾರಿ ರೀರಿಲೀಸ್ ಆಗುತ್ತಿರುವುದು. ಇಲ್ಲಿಯವರೆಗೂ, ಕನ್ನಡದ ಯಾವ ಚಿತ್ರವೂ 550 ಬಾರಿ ರೀರಿಲೀಸ್ ಆಗಿಲ್ಲ.

ಗಾಂಧಿನಗರದ ಪಂಡಿತರ ಲೆಕ್ಕಾಚಾರದ ಪ್ರಕಾರ ಕರ್ನಾಟಕದಾದ್ಯಂತ 400 ಥಿಯೇಟರ್‌ಗಳಲ್ಲಿ 550 ಬಾರಿ 'ಓಂ' ರೀರಿಲೀಸ್ ಆಗಿದೆ. 551... ಸುವರ್ಣ ಪ್ರದರ್ಶನಕ್ಕೆ ಇದೇ ಮಾರ್ಚ್ 12ನೇ ತಾರೀಖು 'ಓಂ' ಸಿನಿಮಾ ಬೆಂಗಳೂರಿನ ಮೂವೀಲ್ಯಾಂಡ್ ಸೇರಿದಂತೆ ರಾಜ್ಯಾದ್ಯಂತ ಅನೇಕ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ. ಹಳೇ ಕಾಪಿಗೆ ಈಗ 5.1 ಡಿಜಿಟಲ್ ಸೌಂಡ್ ಟ್ರ್ಯಾಕ್ ಕೊಟ್ಟಿರುವುದರಿಂದ ಶಿವಣ್ಣನ ಅಭಿಮಾನಿಗಳಿಗೆ ಜಾಕ್‌ಪಾಟ್ ಹೊಡೆದಷ್ಟು ಖುಷಿಯಾಗಿದೆ.

ಈ ಚಿತ್ರದ ಮತ್ತೊಂದು ವಿಶೇಷ ಏನೆಂದರೆ ಕರ್ನಾಟಕದ ಬಹುತೇಕ ಎಲ್ಲಾ ಚಿತ್ರಮಂದಿರಗಳಲ್ಲೂ 'ಓಂ' ಚಿತ್ರದ ಪರ್ಮನೆಂಟ್ ಕಾಪಿ ಇದೆ. ಥಿಯೇಟರ್‌ಗಳಲ್ಲಿ ಲಾಭ ಕಡಿಮೆ ಆದಾಗ, ವಿತರಕರು ಕೊಂಚ ಕಷ್ಟದಲ್ಲಿದ್ದಾಗ, ಅವರೆಲ್ಲರಿಗೂ ಆಪತ್ಬಾಂಧವ ಈ 'ಓಂ' ಸಿನಿಮಾ. ಹೀಗಾಗಿ, ಕಲೆಕ್ಷನ್ ಇಲ್ಲದ ಚಿತ್ರವನ್ನ ಎತ್ತಂಗಡಿ ಮಾಡಿದಾಗಲ್ಲೆಲ್ಲಾ 'ಓಂ' ಸಿನಿಮಾ ರೀರಿಲೀಸ್ ಆಗುತ್ತಲೆ ಇರುತ್ತದೆ.



ಮರುಪ್ರವೇಶ ಪಡೆದ ಜೋತಿಕಾ



ವಿವಾಹದ ನಂತರ ಏಳು ವರ್ಷಗಳ ಕಾಲ ಚಿತ್ರರಂಗದಿಂದ ದೂರವಿದ್ದ ನಟಿ ಜೋತಿಕಾ '36 ವಯಾಧಿನಿಲೆ' ಚಿತ್ರದ ಮೂಲಕ ಮರುಪ್ರವೇಶ ಪಡೆಯಲಿದ್ದಾರಂತೆ. ಇದು ಮಲೆಯಾಳದ 'ಹೌ ಓಲ್ಡ್ ಆರ್ ಯು' ಚಿತ್ರದ ರೀಮೇಕ್‌ಆಗಿದ್ದು ಈ ಚಿತ್ರವನ್ನು ಸೂರ್ಯ ನಿರ್ಮಿಸಲಿದ್ದಾರೆ. ಇದೇ ಏಪ್ರಿಲ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆಯಂತೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com